ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳ ಭೂಮಾಲೀಕರು ಭೂಸ್ವಾಧೀನಾಧಿಕಾರಿಗಳ ಪರಿಹಾರ ಧನದ ಐತೀರ್ಪಿನಂತೆ ಹಣ ಪಡೆದು, ಹೆಚ್ಚಿನ ಪರಿಹಾರಧನಕ್ಕಾಗಿ ಭೂಸ್ವಾಧೀನ ಕಾಯ್ದೆ ಕಲಂ 18(1)ರಡಿ 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯ, ಚಿತ್ರದುರ್ಗ ಇಲ್ಲಿ ಎಲ್.ಎ.ಸಿ. ಪ್ರಕರಣ ಸಂಖ್ಯೆ: 136/95ನ್ನು ದಾಖಲಿಸಿದ್ದು, ನ್ಯಾಯಾಲಯವು ಪ್ರತಿ ಎಕರೆ ಖುಷ್ಕಿ ಜಮೀನಿಗೆ ರೂ. 25,000/- ಗಳನ್ನು ನಿಗದಿಪಡಿಸಿದೆ. ಎಲ್.ಎ.ಸಿ. ಸಂಖ್ಯೆ: 136/05ರ ತೀರ್ಪಿನ ಮೇಲೆ ಜಿಲ್ಲಾ ನ್ಯಾಯಾಲಯದಲ್ಲಿ ದಾಖಲಿಸಿದ್ದ ಎಂ.ಎ. ಸಂಖ್ಯೆ: 7/06 ದಿನಾಂಕ 18-08-2009 ರಂದು ವಜಾಗೊಂಡಿದ್ದು, ಈ ತೀರ್ಪಿನಲ್ಲಿ ಸಿವಿಲ್ ನ್ಯಾಯಾಲಯದ ಆದೇಶವನ್ನು ಪುರಸ್ಕರಿಸಿದೆ. ಈ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಲು ಇದು ಅರ್ಹ ಪ್ರಕರಣವಲ್ಲವೆಂದು ಕಂದಾಯ ಇಲಾಖೆಯ ಕಾನೂನು ಕೋಶವು ದಿನಾಂಕ 15-06-2010 ರಂದು ಅಭಿಪ್ರಾಯ ನೀಡಿದೆ.

ಪಾವತಿಸಬೇಕಾದ ಪರಿಹಾರ ಮೊತ್ತದ ವಿವರ ಕೆಳಕಂಡಂತಿದೆ:

ಕ್ರ. ಸಂ.	ಎಲ್.ಎ.ಸಿ.	ಎಂ.ಎ.	ಕೊಳಹಾಳ್ ಗ್ರಾಮದ ಸ.ನಂ.	ವಿಸ್ತೀರ್ಣ ಎ-ಗುಂ	ಪರಿಹಾರ ಮೊತ್ತ (ರೂ.ಗಳಲ್ಲಿ)
1	136/95	7/06	28/1ಪಿ	2-04	2,13,963-00

ಪ್ರಸ್ತಾವನೆಯನ್ನು ಪರಿಶೀಲಿಸಿ ಸರ್ಕಾರವು ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸನೀಇ 148 ಭೂಸ್ವಾಪ್ರ 2010 ಬೆಂಗಳೂರು, ದಿನಾಂಕ : 25ನೇ ಆಗಸ್ಟ್ 2011

ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ ತಾಲ್ಲೂಕು ಕೊಳಹಾಳ್ ಗ್ರಾಮದ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಮೇಲ್ಕಂಡ ಗ್ರಾಮಕ್ಕೆ ಸೇರಿದ ಸ.ನಂ.ಗಳ ಜಮೀನುಗಳಿಗೆ ನ್ಯಾಯಾಲಯವು ಎಲ್.ಎ.ಸಿ. ಪ್ರಕರಣದಲ್ಲಿ ನೀಡಿದ ತೀರ್ಪಿನ ಅನುಸಾರ ಲೆಕ್ಕಾಹಾಕಿದ ಪರಿಹಾರ ಧನ ಮೊತ್ತ ರೂ. 2,13,963-00 ಗಳನ್ನು (ಎರಡು ಲಕ್ಷದ ಹದಿಮೂರು ಸಾವಿರದ ಒಂಬೈನೂರ ಅರವತ್ಮೂರು ರೂ.ಗಳು ಮಾತ್ರ) ಪಾವತಿಸಲು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಅನುಮೋದನೆ ನೀಡಿದೆ.

1. ಹಣ ಪಾವತಿಗೆ ಮೊದಲು ಮತ್ತೊಮ್ಮೆ ಲೆಕ್ಕಾಚಾರ ತಃಖ್ತೆಯನ್ನು ದೃಢೀಕರಿಸಿಕೊಂಡು ಪಾವತಿಸತಕ್ಕದ್ದು ಹಾಗೂ ಎರಡನೇ ಬಾರಿ ಪಾವತಿಯಾಗದಂತೆ ಎಚ್ಚರವಹಿಸತಕ್ಕದ್ದು.
2. ಹೆಚ್ಚುವರಿ ಪರಿಹಾರಧನದ ಪಾವತಿಗೆ ಮೊದಲು ಜಮೀನಿನ ಹಕ್ಕುದಾರಿಕೆ ಬಗ್ಗೆ ಖಚಿತಪಡಿಸಿಕೊಂಡು ಪಾವತಿಸತಕ್ಕದ್ದು.
3. ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳು ಇನ್ನೂ ಸಣ್ಣ ನೀರಾವರಿ ಇಲಾಖೆಯ ಹೆಸರಿಗೆ ವರ್ಗಾವಣೆಯಾಗದಿದ್ದಲ್ಲಿ, ಸಂಬಂಧಿಸಿದ ಸಹಾಯಕ ಕಾರ್ಯಪಾಲಕ ಇಂಜನಿಯರ್‌ರವರು ವರ್ಗಾವಣೆ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳತಕ್ಕದ್ದು.

ಈ ವೆಚ್ಚವನ್ನು 2011-12ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ "4702-00-800-1-00-ಭೂಸ್ವಾಧೀನ, ಕಟ್ಟಡ ಮತ್ತು ಕ್ರೆಂಗಳು-- ಇತ್ಯರ್ಥ 132 ಬಂಡವಾಳ ವೆಚ್ಚಗಳು" ಅಡಿಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒದಗಿಸಿರುವ ಅನುದಾನದಿಂದ ರೂ. 2,13,963/- ಗಳನ್ನು ಹಂಚಿಕೆ ಮಾಡಿ ಬಿಡುಗಡೆ ಮಾಡಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2010, ದಿನಾಂಕ 20-10-2010ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಕೆ.ಸಿ. ಸಿದ್ದಪ್ಪ

ಸರ್ಕಾರದ ಅಧೀನ ಕಾರ್ಯದರ್ಶಿ,

ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಪಿ.ಆರ್. 2095

ಇಂಧನ ಸಚಿವಾಲಯ

ವಿಷಯ : ಮೆ: ಏಟ್ರಿಯಾ ಬೃಂದಾವನ್ ಪವರ್ ಲಿಮಿಟೆಡ್ ಕಂಪನಿಗೆ ಹಂಚಿಕೆ ಮಾಡಲಾಗಿರುವ 6.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ರದ್ದು ಪಡಿಸುವ ಬಗ್ಗೆ.

ಓದಲಾಗಿದೆ :

1. ಸರ್ಕಾರದ ಆದೇಶ ಸಂಖ್ಯೆ: ಇಂಇ 92 ಎನ್‌ಸಿಇ 2004 ದಿನಾಂಕ: 12-03-2004.
2. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ, ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/06/Show Cause Notice/2010 ದಿನಾಂಕ: 17-04-2010.
3. ಸರ್ಕಾರದ ಕಾರಣ ಕೇಳುವ ನೋಟಿಸ್ ಸಂಖ್ಯೆ: ಇಎನ್ 143 ಎನ್‌ಸಿಇ 2010 ದಿನಾಂಕ: 26-04-2010.
4. ಮೆ: ಏಟ್ರಿಯಾ ಬೃಂದಾವನ್ ಪವರ್ ಲಿಮಿಟೆಡ್ ಕಂಪನಿಯವರು ನೀಡಿರುವ ಉತ್ತರ ದಿನಾಂಕ: 05-05-2010.
5. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ, ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/06/Show Cause Notice/MHS/2010/2034 ದಿನಾಂಕ: 05/07-07-2010.
6. ಸರ್ಕಾರದ ಎರಡನೆ ಕಾರಣ ಕೇಳುವ ನೋಟಿಸ್ ಸಂಖ್ಯೆ: ಇಎನ್ 143 ಎನ್‌ಸಿಇ 2010 ದಿನಾಂಕ: 23-09-2010.

ಪ್ರಸ್ತಾವನೆ:

1) ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಸರ್ಕಾರಿ ಆದೇಶದಲ್ಲಿ ಮೆ: ಏಟ್ರಿಯಾ ಬೃಂದಾವನ್ ಪವರ್ ಲಿಮಿಟೆಡ್ ಕಂಪನಿಗೆ ಕೊಡಗು ಜಿಲ್ಲೆಯ ವಿರಾಜಪೇಟೆ ತಾಲ್ಲೂಕಿನ ಮುಕುಟ ಗ್ರಾಮದ ಬಳಿ ಬಾರಾಪೊಳೆ ಹೊಳೆಗೆ ಅಡ್ಡಲಾಗಿ 6.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲಾಗಿತ್ತು.

2) ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಪತ್ರದೊಂದಿಗೆ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ಬೆಂಗಳೂರು ಇವರು ದಿನಾಂಕ: 31-03-2005ರ ಅಂತ್ಯಕ್ಕೆ ಹಂಚಿಕೆಯಾಗಿರುವ ಕಿರು ಜಲ ವಿದ್ಯುತ್ ಯೋಜನೆಗಳ ಪಟ್ಟಿಯನ್ನು ಲಗತ್ತಿಸಿ ಕಳುಹಿಸುತ್ತಾ ಅಭಿವೃದ್ಧಿದಾರರ ಯೋಜನೆಯ ಅನುಷ್ಠಾನದ ಅವಧಿಯು ಸರ್ಕಾರದ ಆದೇಶದಂತೆ ಪೂರ್ಣಗೊಂಡಿದ್ದು ಹಾಗೂ ಸದರಿ ಯೋಜನೆಗಳ ಪ್ರಗತಿಯ ಬಗ್ಗೆ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ಮಾಹಿತಿ ನೀಡಿಲ್ಲ ಹಾಗೂ ಕಾಲಾವಕಾಶ ವಿಸ್ತರಣೆಗಾಗಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ಪ್ರಸ್ತಾವನೆಯನ್ನು ಸಲ್ಲಿಸಿಲ್ಲದಿರುವುದರಿಂದ ಸದರಿ ಅಭಿವೃದ್ಧಿದಾರರಿಗೆ ಸರ್ಕಾರದ ವತಿಯಿಂದ ಕಾರಣ ಕೇಳುವ ನೋಟಿಸನ್ನು ಜಾರಿ ಮಾಡಲು ಶಿಫಾರಸ್ಸುಮಾಡಿರುತ್ತಾರೆ.

3) ಮೇಲೆ ಓದಲಾದ ಕ್ರಮ ಸಂಖ್ಯೆ (3) ರಲ್ಲಿನ ಕಾರಣ ಕೇಳುವ ನೋಟಿಸಿನಲ್ಲಿ ಯೋಜನೆಯ ಅನುಷ್ಠಾನಕ್ಕಾಗಿ ಅನುಮತಿ ನೀಡಿ 6 ವರ್ಷಗಳು ಕಳೆದರೂ ಅನುಷ್ಠಾನದ ನಿಟ್ಟಿನಲ್ಲಿ ಮೆ: ಏಟ್ರಿಯಾ ಬೃಂದಾವನ್ ಪವರ್ ಲಿಮಿಟೆಡ್ ಕಂಪನಿಯವರು ಯಾವುದೇ ಕ್ರಮ ಕೈಗೊಳ್ಳದೇ ಇರುವುದರಿಂದ ಯೋಜನೆ ಹಂಚಿಕೆಯನ್ನು ಏಕೆ ರದ್ದು ಪಡಿಸಬಾರದೆಂಬುದಕ್ಕೆ ಸಮಜಾಯಿಷಿಯನ್ನು ನೀಡುವಂತೆ ಅಭಿವೃದ್ಧಿದಾರರನ್ನು ಕೋರಲಾಗಿತ್ತು.

4) ಮೇಲೆ ಓದಲಾದ ಕ್ರಮ ಸಂಖ್ಯೆ (4)ರ ಪತ್ರದಲ್ಲಿ ಮೆ: ಏಟ್ರಿಯಾ ಬೃಂದಾವನ್ ಪವರ್ ಲಿಮಿಟೆಡ್ ಕಂಪನಿಯವರು ಸರ್ಕಾರದ ಕಾರಣ ಕೇಳುವ ನೋಟಿಸಿಗೆ ಉತ್ತರಿಸಿ ಈ ವಿಷಯವು ಸರ್ವೋಚ್ಛನ್ಯಾಯಾಲಯದಿಂದ ರಚಿಸಲ್ಪಟ್ಟ ಕೇಂದ್ರ ಉನ್ನತಾಧಿಕಾರ ಸಮಿತಿಯ ಮುಂದಿದೆ ಎಂದು ತಿಳಿಸಿರುತ್ತಾರೆ.

5) ಅಭಿವೃದ್ಧಿದಾರರು ನೀಡಿರುವ ಉತ್ತರವನ್ನು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ಇವರಿಗೆ ಕಳುಹಿಸಿ ಮಾಹಿತಿ ಕೋರಲಾಗಿತ್ತು. ಕೇಂದ್ರ ಉನ್ನತಾಧಿಕಾರ ಸಮಿತಿಯ ಆದೇಶ ಜಾರಿಯಾಗಿ 4 ವರ್ಷಗಳು ಕಳೆದಿರುವುದರಿಂದ ಸರ್ಕಾರದಿಂದ ಅಭಿವೃದ್ಧಿದಾರರಿಗೆ ಮತ್ತೊಂದು ಕಾರಣ ಕೇಳುವ ನೋಟಿಸನ್ನು ನೀಡಿ ಯೋಜನೆಯ ಅನುಷ್ಠಾನದ ನಿಟ್ಟಿನಲ್ಲಿ ಯಾವುದೇ ಪ್ರಗತಿಯನ್ನು ಮಾಡದಿದ್ದಲ್ಲಿ ಯೋಜನೆಯನ್ನು ರದ್ದುಪಡಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬಹುದಾಗಿದೆ ಎಂದು ಮೇಲೆ ಓದಲಾದ ಕ್ರಮ ಸಂಖ್ಯೆ (5)ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತರವರು ತಿಳಿಸಿರುತ್ತಾರೆ. ಅದರಂತೆ ಮೇಲೆ ಕ್ರಮ ಸಂಖ್ಯೆ (6)ರ ಎರಡನೆ ಕಾರಣ ಕೇಳುವ ನೋಟೀಸನ್ನು ಅಭಿವೃದ್ಧಿದಾರರಿಗೆ ಜಾರಿಮಾಡಲಾಗಿತ್ತು. ಸದರಿ ಕಾರಣ ಕೇಳುವ ನೋಟಿಸಿಗೆ ಅಭಿವೃದ್ಧಿದಾರರಿಂದ ಯಾವುದೇ ಉತ್ತರ ಬಂದಿರುವುದಿಲ್ಲ.

6) ಅರಣ್ಯ ಇಲಾಖೆಯು ಪಶ್ಚಿಮ ಘಟ್ಟ ಪ್ರದೇಶದಲ್ಲಿ ಬರುವ ಯೋಜನೆಗಳಿಗೆ ಬೇಕಾದ ಭೂಮಿಯು ಸರ್ಕಾರದ್ದಾಗಿದ್ದರೆ ಅಂತಹ ಯೋಜನೆಗಳಿಗೆ ಅನುಮತಿ ನೀಡಲಾಗುವುದಿಲ್ಲ ಹಾಗೂ ಯಾವುದೇ ಯೋಜನೆ ಪ್ರಾರಂಭವಾಗದೇ ಇದ್ದಲ್ಲಿ ಅನುಮತಿ ನೀಡಲಾಗುವುದಿಲ್ಲ ಎಂದು ತಿಳಿಸಿರುತ್ತದೆ.

7) ಆದುದರಿಂದ ಈ ಪ್ರಸ್ತಾವನೆಯನ್ನು ಪರಿಶೀಲಿಸಿ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ : ಇಎನ್ 143 ಎನ್‌ಸಿಇ 2010 ಬೆಂಗಳೂರು, ದಿನಾಂಕ: 19-08-2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದಾಗಿ ಸರ್ಕಾರಿ ಆದೇಶ ಸಂಖ್ಯೆ: ಇಇ 92 ಎನ್‌ಸಿಇ 2004 ದಿನಾಂಕ: 12-03-2004 ರಲ್ಲಿ ಮೆ: ಪಟ್ರಿಯಾ ಬೃಂದಾವನ್ ಪವರ್ ಲಿಮಿಟೆಡ್ ಕಂಪನಿಗೆ ಕೊಡಗು ಜಿಲ್ಲೆಯ ವಿರಾಜಪೇಟೆ ತಾಲ್ಲೂಕಿನ ಮುಕುಟ ಗ್ರಾಮದ ಬಳಿ ಬಾರಾಪೊಳೆ ಹೊಳೆಗೆ ಅಡ್ಡಲಾಗಿ ಹಂಚಿಕೆಮಾಡಿರುವ 6.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯ ಹಂಚಿಕೆಯ ಆದೇಶ ಮತ್ತು ಈ ಸಂಬಂಧ ಮಾಡಿಕೊಂಡಿರುವ ಒಡಂಬಡಿಕೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದು ಪಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಸುರೇಶ್ ಬಿ. ಕೃಷ್ಣಪ್ಪನವರ್
ಸರ್ಕಾರದ ಅಧೀನ ಕಾರ್ಯದರ್ಶಿ
ಇಂಧನ ಇಲಾಖೆ

ಪಿಆರ್.ನಂ. 2096

ಆರ್ಥಿಕ ಸಚಿವಾಲಯ

ವಿಷಯ : ಶ್ರೀ ಎಸ್. ದಿನೇಶ್ ಕುಮಾರ್, ವಾಣಿಜ್ಯ ತೆರಿಗೆ ಪರಿವೀಕ್ಷಕ, ವಾಣಿಜ್ಯ ತೆರಿಗೆ ಇಲಾಖೆ, ಇವರನ್ನು ಸರ್ಕಾರಿ ಸೇವೆಯಿಂದ ಕಡ್ಡಾಯ ನಿವೃತ್ತಿಗೊಳಿಸಿರುವ ಬಗ್ಗೆ.

ಓದಲಾಗಿದೆ :
1. ಸರ್ಕಾರದ ಆದೇಶ ಸಂಖ್ಯೆ: ಆಇ 160 ವಾತೆಸಿ 99 ದಿನಾಂಕ: 01-04-2000.
2. ಸರ್ಕಾರದ ಆದೇಶ ಸಂಖ್ಯೆ: ಆಇ 160 ವಾತೆಸಿ 99 ದಿನಾಂಕ: 02-12-2004.
3. ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ಅರ್ಜಿ ಸಂಖ್ಯೆ: 358/2005 ಆದೇಶ ದಿನಾಂಕ: 16-12-2009.
4. ಸರ್ಕಾರದ ಆದೇಶ ಸಂಖ್ಯೆ: ಆಇ 71 ವಾತೆತ 2008 ದಿನಾಂಕ: 01-06-2010.
5. ವಿಚಾರಣಾ ವರದಿ ದಿನಾಂಕ: 29-07-2003.
6. ಮಾನ್ಯ ಉಪ ಲೋಕಾಯುಕ್ತರ ಪತ್ರ ಸಂಖ್ಯೆ: ಲೋಕ್/ಎಆರ್‌ಇ-4/ಇಎನ್‌ಕ್ಯೂ-28/2002-03 ದಿನಾಂಕ: 21-12-2010.
7. ದಿನಾಂಕ: 23-06-2011ರ ಸಮ ಸಂಖ್ಯೆಯ ಸರ್ಕಾರಿ ಆದೇಶ.
8. ಕೆಎಟಿ ಅರ್ಜಿ ಸಂಖ್ಯೆ: 4188/11ರ ಮೇಲಿನ ದಿನಾಂಕ: 11-07-2011ರ ತೀರ್ಪಿನ ಆದೇಶ.

ಪ್ರಸ್ತಾವನೆ:

ನಿಬಂಧಕರು, ಕರ್ನಾಟಕ ಲೋಕಾಯುಕ್ತ. ಇವರ ಪತ್ರ ದಿನಾಂಕ: 11-06-1999 ರಲ್ಲಿ ಕರ್ನಾಟಕ ಉಪ ಲೋಕಾಯುಕ್ತರ ತನಿಖಾ ವರದಿಯನ್ನು ಕಳುಹಿಸಿದ್ದು, ಸದರಿ ವರದಿಯಲ್ಲಿ ಶ್ರೀ ಎಸ್. ದಿನೇಶ್ ಕುಮಾರ್, ವಾಣಿಜ್ಯ ತೆರಿಗೆ ಪರಿವೀಕ್ಷಕರು (ಆಪಾದಿತ ನೌಕರ-1) ಹಾಗೂ ಶ್ರೀ ಎಸ್.ಎ. ಬಾಲಚಂದರ್, ವಾಹನ ಚಾಲಕ (ಆಪಾದಿತ ನೌಕರ-2). ಇವರುಗಳು ಮೈಸೂರಿನ ವಾಣಿಜ್ಯ ತೆರಿಗೆ ಅಧಿಕಾರಿ ಕಛೇರಿ, ವಸೂಲಿ, ಇಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ, ಮಾಲೀಕರು, ಮೆ: ಜಯರಾಂ ಮುರುಗನ್ ಫರ್ನಿಚರ್ಸ್, ಮೈಸೂರು. ಇವರಿಂದ ಕಾರ್ಖಾನೆಯ ಯಂತ್ರೋಪಕರಣಗಳಿಗೆ ಹಾಕಿದ್ದ ಬೀಗಮುದ್ರೆಯನ್ನು ತೆರೆಯಲು ರೂ. 1,000/- ಗಳ ಅಕ್ರಮ ಸಂಭಾವನೆಯನ್ನು ನೀಡಬೇಕೆಂದು ಶ್ರೀ ದಿನೇಶ್ ಕುಮಾರ್‌ರವರು ಒತ್ತಾಯಿಸಿದ್ದು. ದಿನಾಂಕ: 09-07-1993 ರಂದು ಫಿರ್ಯಾದಿಯಿಂದ ಶ್ರೀ ಬಾಲಚಂದ್ರ ಇವರು ಕಾರ್ಖಾನೆಯ ಕಛೇರಿಯಲ್ಲಿ ಮಧ್ಯವರ್ತಿಯಾಗಿ ಹಣ ಸ್ವೀಕರಿಸುವಾಗ ಲೋಕಾಯುಕ್ತ ಪೋಲಿಸರು ಬೀಸಿದ ಬಲೆಗೆ ಸಿಕ್ಕಿಬಿದ್ದಿರುತ್ತಾರೆಂದು ಮತ್ತು ಆಪಾದಿತ ನೌಕರರ ವಿರುದ್ಧ ಫಿರ್ಯಾದುದಾರರ ದೂರಿನಂತೆ ಲಂಚ ನಿರ್ಮೂಲನ ಕಾಯ್ದೆ 1988ರ ಪ್ರಕಾರ ಕ್ರಿಮಿನಲ್ ಮೊಕದ್ದಮೆ ದಾಖಲು ಮಾಡಿರುವುದಾಗಿ ತಿಳಿಸಿದ್ದರು. ತನಿಖೆಯ ಸಮಯದಲ್ಲಿ ಸಂಗ್ರಹಿಸಲಾದ ಮಾಹಿತಿಗಳನ್ವಯ ಆಪಾದಿತ ನೌಕರರು ಮೇಲ್ನೋಟಕ್ಕೆ ಅಕ್ರಮ ಸಂಭಾವನೆಯನ್ನು ಅನುಕೂಲಕರ ಕೆಲಸಮಾಡುವುದಾಗಿ ಫಿರ್ಯಾದುದಾರರಿಂದ ಪಡೆಯುವುದು ಸಾಬೀತಾಗಿರುವುದರಿಂದ ಮತ್ತು ಆಪಾದಿತ ನೌಕರರಿಗೆ ಈ ಬಗ್ಗೆ ಕಾರಣ ಕೇಳುವ ನೋಟಿಸನ್ನು ನೀಡಿದ್ದರ ಹಿನ್ನೆಲೆಯಲ್ಲಿ ನೌಕರರು ನೀಡಿರುವ ಸಮಜಾಯಿಷಿಯು ತೃಪ್ತಿಕರವಾಗಿಲ್ಲವಾದ್ದರಿಂದ ಅದನ್ನು ತಿರಸ್ಕರಿಸಿ ಸದರಿ ನೌಕರರ ವಿರುದ್ಧ ಮಾಡಲಾದ ಆಪಾದನೆಯು ಸಾಬೀತಾಗಿರುವುದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(3)ರ ಪ್ರಕಾರ ಸದರಿ ನೌಕರರ ಮೇಲೆ ಕಠಿಣ ದಂಡನೆಯನ್ನು ವಿಧಿಸುವ ಸಲುವಾಗಿ ಶಿಸ್ತುಕ್ರಮವನ್ನು ನಿಯಮಾನುಸಾರ ಕೈಗೊಳ್ಳಲು ಶಿಫಾರಸ್ಸು ಮಾಡಲಾಗಿತ್ತು. ಅದರಂತೆ ಈ ಪ್ರಕರಣದಲ್ಲಿ ಆಪಾದನೆಯು ಗಂಭೀರ ಸ್ವರೂಪವಾಗಿದ್ದರಿಂದ ಸದರಿ ನೌಕರರ ಮೇಲೆ ಇಲಾಖಾ ವಿಚಾರಣೆಯನ್ನು ಕೈಗೊಳ್ಳಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) 1957ರ ನಿಯಮ 14-ಎ ರಡಿಯಲ್ಲಿ ಇಲಾಖಾ ತನಿಖೆಯನ್ನು ಮಾನ್ಯ ಕರ್ನಾಟಕ ಉಪ ಲೋಕಾಯುಕ್ತರಿಗೆ ವಹಿಸಿ, ಮತ್ತು ಮೇಲ್ಕಾಣಿಸಿದ ನಿಯಮಾವಳಿಗಳ ನಿಯಮ-11 ರಡಿಯಲ್ಲಿ ಶಿಸ್ತುಕ್ರಮ ಜರುಗಿಸಲು ಮೇಲೆ ಓದಲಾಗಿರುವ ಕ್ರಮ ಸಂಖ್ಯೆ: (1)ರ ಸರ್ಕಾರಿ ಆದೇಶವನ್ನು ಹೊರಡಿಸಲಾಗಿತ್ತು.

ಶ್ರೀ ಎಸ್. ದಿನೇಶ್‌ಕುಮಾರ್, ವಾ.ತೆ.ಪ., ಇವರ ವಿರುದ್ಧದ ಲೋಕಾಯುಕ್ತ ವಿಚಾರಣೆಯ ಸಾಕ್ಷಾಧಾರಗಳು ಹಾಗೂ ದಾಖಲೆಗಳನ್ನು ಪರಿಶೀಲಿಸಿರುವ ಮಾನ್ಯ ಉಪ ಲೋಕಾಯುಕ್ತರು ಪ್ರಕರಣದ ವಿಚಾರಣೆ ನಡೆಸಿರುವ ವಿಚಾರಣಾಧಿಕಾರಿಯವರ ವಿಚಾರಣಾ ವರದಿ ದಿನಾಂಕ: 29-07-2003 ರಲ್ಲಿನ ನಿರ್ಣಯಗಳನ್ನು ಒಪ್ಪಿರುತ್ತಾರೆ. ಆರೋಪಿತ ನೌಕರನ ವಿರುದ್ಧ ಮಾಡಲಾಗಿರುವ ಆರೋಪಗಳು ಸಾಬೀತಾಗಿವೆ ಎಂದು ತಿಳಿಸಿದ್ದಾರೆ.

ಪ್ರಕರಣದ ವಾಸ್ತವಾಂಶಗಳನ್ನು ಗಮನದಲ್ಲಿರಿಸಿಕೊಂಡು ಆರೋಪಿತ ನೌಕರ ಶ್ರೀ ಎಸ್. ದಿನೇಶ್ ಕುಮಾರ್, ವಾ.ತೆ.ಪ., ಇವರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ-8 (vi) ರನ್ವಯ ಸೇವೆಯಿಂದ ಕಡ್ಡಾಯ ನಿವೃತ್ತಿಗೊಳಿಸಲು ಮಾನ್ಯ ಉಪ ಲೋಕಾಯುಕ್ತರು ಮೇಲೆ ಓದಲಾಗಿರುವ ಕ್ರಮ ಸಂಖ್ಯೆ: (6)ರ ಪತ್ರದಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ಆದ್ದರಿಂದ ಶ್ರೀ ಎಸ್. ದಿನೇಶ್ ಕುಮಾರ್, ವಾಣಿಜ್ಯ ತೆರಿಗೆ ಪರಿವೀಕ್ಷರ ವಿರುದ್ಧ ಲಂಚ ಪಡೆದ ಆಪಾದನೆ ಸಾಬೀತಾಗಿವೆ ಎಂಬ ವಿಚಾರಣಾಧಿಕಾರಿಗಳು ಮತ್ತು ಉಪ ಲೋಕಾಯುಕ್ತರ ವರದಿಗಳನ್ನು ಸರ್ಕಾರವು ಪರಿಶೀಲಿಸಿ, ಶ್ರೀ ಎಸ್. ದಿನೇಶ್ ಕುಮಾರ್, ವಾಣಿಜ್ಯ ತೆರಿಗೆ

ಪರಿವೀಕ್ಷಕರಿಗೆ ತೀವ್ರತರ ದಂಡನೆಯನ್ನು ವಿಧಿಸಲು ನಿರ್ಧರಿಸಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 8 (vi) ರ ಪ್ರಕಾರ ಶ್ರೀ ಎಸ್. ದಿನೇಶ್ ಕುಮಾರ್, ವಾಣಿಜ್ಯ ತೆರಿಗೆ ಪರಿವೀಕ್ಷಕ, ವಾಣಿಜ್ಯ ತೆರಿಗೆ ಇಲಾಖೆ, ಇವರನ್ನು ಮೇಲೆ (10) ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಸರ್ಕಾರಿ ಸೇವೆಯಿಂದ ಕಡ್ಡಾಯ ನಿವೃತ್ತಿಗೊಳಿಸುವ ದಂಡನೆಯನ್ನು ವಿಧಿಸಿ ಆದೇಶ ಹೊರಡಿಸಲಾಗಿತ್ತು.

ಸದರಿ ಆದೇಶದ ವಿರುದ್ಧ ಶ್ರೀ ಎಸ್. ದಿನೇಶ್ ಕುಮಾರ್, ಇವರು ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ಸಲ್ಲಿಸಿರುವ ಅರ್ಜಿ ಸಂಖ್ಯೆ: 4188/2011 ಕ್ಕೆ ಆಡಳಿತ ನ್ಯಾಯ ಮಂಡಳಿಯು ದಿನಾಂಕ: 11-07-2011 ರಂದು ತಡೆಯಾಜ್ಞೆ ನೀಡಿರುವುದರಿಂದ ನ್ಯಾಯಾಲಯದ ಆದೇಶವನ್ನು ಅನುಷ್ಠಾನಗೊಳಿಸುವ ಹಿನ್ನೆಲೆಯಲ್ಲಿ ಈ ಮುಂದಿನಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ : ಆಇ 52 ವಾತೆತ 2010 ಬೆಂಗಳೂರು, ದಿನಾಂಕ: 11-08-2011

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 8 (vi)ರ ಪ್ರಕಾರ ಶ್ರೀ ಎಸ್. ದಿನೇಶ್ ಕುಮಾರ್, ವಾಣಿಜ್ಯ ತೆರಿಗೆ ಪರಿವೀಕ್ಷಕ, ವಾಣಿಜ್ಯ ತೆರಿಗೆ ಇಲಾಖೆ, ಇವರನ್ನು ಸರ್ಕಾರಿ ಸೇವೆಯಿಂದ ಕಡ್ಡಾಯ ನಿವೃತ್ತಿಗೊಳಿಸುವ ದಂಡನೆಯನ್ನು ವಿಧಿಸಿದ ಸರ್ಕಾರಿ ಆದೇಶ ಸಂಖ್ಯೆ: ಆಇ 52 ವಾತೆತ 2010 ದಿನಾಂಕ: 23-06-2011ನ್ನು ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ಅರ್ಜಿ ಸಂಖ್ಯೆ: 4188/2011ರಲ್ಲಿ ದಿನಾಂಕ: 11-07-2011 ರಂದು ಎರಡು ತಿಂಗಳ ಅವಧಿಗೆ ತಡೆಯಾಜ್ಞೆ ನೀಡಿರುವುದರಿಂದ ದಿನಾಂಕ: 23-06-2011ರ ಆದೇಶವನ್ನು ತಡೆಹಿಡಿಯಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ.ಆರ್. ಚಂದ್ರಶೇಖರಾರಾಧ್ಯ

ಪೀಠಾಧಿಕಾರಿ

ಆರ್ಥಿಕ ಇಲಾಖೆ (ವಾಣಿಜ್ಯ ತೆರಿಗೆ-2).

ಪಿಆರ್.ನಂ. 2097

ಕಾರ್ಮಿಕ ಸಚಿವಾಲಯ

ವಿಷಯ : ಕರ್ನಾಟಕ-ಜರ್ಮನ್ ಬಹು ಕೌಶಲ್ಯ ಅಭಿವೃದ್ಧಿ ಕೇಂದ್ರಗಳ ಪರಿಷ್ಕೃತ ಅಂದಾಜಿಗೆ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ : ಆಯುಕ್ತರು ಉದ್ಯೋಗ ಮತ್ತು ತರಬೇತಿ ಇಲಾಖೆ ಇವರ ಟಿಪ್ಪಣಿ ಸಂಖ್ಯೆ: ಉತನಿ/ತ/ಯೋ-01/ವಿವ-85/2009-10 ದಿನಾಂಕ: 31-05-2011.

ಪ್ರಸ್ತಾವನೆ:

ಮೇಲೆ ಓದಲಾದ ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆ ಇವರ ಟಿಪ್ಪಣಿಯಲ್ಲಿ ದಿನಾಂಕ: 17-02-2011 ರಂದು ನಡೆದಿದ್ದ ಆಡಳಿತ ಪರಿಷತ್ತಿನ 2ನೇ ಸಭೆಯಲ್ಲಿ ಕೇಂದ್ರ ಸರ್ಕಾರದ ಪ್ರತಿನಿಧಿಗಳು ಪಾಲ್ಗೊಂಡಿದ್ದು, ಬೆಂಗಳೂರು ಹಾಗೂ ಗುಲ್ಬರ್ಗಾ ಜಿಲ್ಲೆಗಳಲ್ಲಿ ಕರ್ನಾಟಕ ಬಹು ಕೌಶಲ್ಯ ಅಭಿವೃದ್ಧಿ ಕೇಂದ್ರಗಳನ್ನು ಸ್ಥಾಪಿಸಲು ಅಂದಾಜಿಸಲಾದ ಯೋಜನಾ ವೆಚ್ಚ ಸುಮಾರು 64.70 ಕೋಟಿಗಳು ಸಾಕಾಗುವುದಿಲ್ಲವೆಂದು ಮತ್ತು ಯೋಜನಾ ವೆಚ್ಚವನ್ನು ಪುನರ್ ಲೆಕ್ಕ ಹಾಕುವಂತೆಯೂ ಅಭಿಪ್ರಾಯಕ್ಕೆ ಬರಲಾಯಿತೆಂದೂ ಮತ್ತು ಈಗಿನ ಮಾರುಕಟ್ಟೆ ದರಗಳನ್ನು ಪರಿಗಣಿಸಿ ಅಂದಾಜು ಪಟ್ಟಿಯನ್ನು ಸಿದ್ದಪಡಿಸಿದಾಗ ಬೆಂಗಳೂರು ಹಾಗೂ ಗುಲ್ಬರ್ಗಾ ಜಿಲ್ಲೆಗಳಲ್ಲಿ ಕರ್ನಾಟಕ ಬಹು ಕೌಶಲ್ಯ ಅಭಿವೃದ್ಧಿ ಕೇಂದ್ರಗಳನ್ನು ಸ್ಥಾಪಿಸಲು ಒಟ್ಟು ರೂ. 80.85 ಕೋಟಿ ಆಗುವುದಾಗಿ ಇದರಿಂದ ರೂ. 16.15 ಕೋಟಿಗಳಷ್ಟು ಹೆಚ್ಚಿನ ಅಂದಾಜು ವೆಚ್ಚವಾಗುತ್ತದೆಂದು ತಿಳಿಸುತ್ತಾ, ಸದರಿ ಹೆಚ್ಚುವರಿ ವೆಚ್ಚವನ್ನು ಭಾರತ ಸರ್ಕಾರ ಹಾಗೂ ಕರ್ನಾಟಕ ಸರ್ಕಾರ ಸಮನಾಗಿ ಭರಿಸಬೇಕಾಗುತ್ತದೆಂದು ತಿಳಿಸುತ್ತಾ, ಪರಿಷ್ಕೃತ ಅಂದಾಜಿಗೆ ಅನುಮೋದನೆ ನೀಡುವಂತೆ ಕೋರಿರುತ್ತಾರೆ. ಮತ್ತು ಈ ಯೋಜನೆಗೆ ರಾಜ್ಯ ಸರ್ಕಾರದ ವತಿಯಿಂದ ಭರಿಸಬೇಕಾದ ಹೆಚ್ಚುವರಿ ವೆಚ್ಚವನ್ನು ಒದಗಿಸುವಂತೆ ಕೋರಿರುವರು.

ಪ್ರಸ್ತಾವನೆಯನ್ನು ಪರಿಶೀಲಿಸಿದ ನಂತರ ಕೆಳಗಿನಂತೆ ಆದೇಶಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ : ಕಾಇ 58 ಇಟಿಐ 2011(1) ಬೆಂಗಳೂರು, ದಿನಾಂಕ: 23-08-2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಗುಲ್ಬರ್ಗಾ ಮತ್ತು ಬೆಂಗಳೂರಿನಲ್ಲಿ ಸ್ಥಾಪಿಸಲು ಉದ್ದೇಶಿಸಿರುವ ಬಹು ಕೌಶಲ್ಯ ಅಭಿವೃದ್ಧಿ ಕೇಂದ್ರಗಳ ಸ್ಥಾಪನೆಗೆ ಸಂಬಂಧಪಟ್ಟಂತೆ ಪರಿಷ್ಕೃತ ಅಂದಾಜು ಮೊತ್ತ ರೂ. 80.85 ಕೋಟಿಗಳಿಗೆ ಮಂಜೂರಾತಿ ನೀಡಲಾಗಿದೆ ಮತ್ತು ಈ ಯೋಜನಾ ವೆಚ್ಚದ ಶೇ. 50 ರಷ್ಟನ್ನು ರಾಜ್ಯ ಸರ್ಕಾರವು ಭರಿಸಲು ಸಹ ಮಂಜೂರಾತಿಯನ್ನು ನೀಡಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ಆಇ 351 ವೆಚ್ಚ-9/2011 ದಿನಾಂಕ: 02-07-2011 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಜೆ.ಎಸ್. ವಿಶ್ವನಾಥಪ್ಪ

ಪೀಠಾಧಿಕಾರಿ

ಕಾರ್ಮಿಕ ಇಲಾಖೆ

(ಉದ್ಯೋಗ ಮತ್ತು ತರಬೇತಿ)

ಪಿಆರ್.ನಂ. 2098

ಕಂದಾಯ ಸಚಿವಾಲಯ

ವಿಷಯ : ಶ್ರೀ ಕೆ.ಎ. ವಾಮನೆ, ತಹಶೀಲ್ದಾರ್ (ನಿವೃತ್ತ) ಇವರಿಗೆ ವಿಳಂಬವಾಗಿ ಪಾವತಿ ಆದ ನಿವೃತ್ತಿ ಸೌಲಭ್ಯಗಳ ಮೇಲೆ ಬಡ್ಡಿ ನೀಡುವ ಬಗ್ಗೆ.

ಓದಲಾಗಿದೆ :
1. ಶ್ರೀ ಕೆ.ಎ. ವಾಮನೆ, ನಿವೃತ್ತ ತಹಶೀಲ್ದಾರ್ ಇವರ ಮನವಿ ದಿ: 02-12-2009.
2. ಮಹಾಲೇಖಪಾಲರ ಪತ್ರ ಸಂಖ್ಯೆ: PV1/R2/Pol-55190/577, ದಿನಾಂಕ: 03-04-2009.
3. ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 34 ಎಡಿಇ 2001, ದಿನಾಂಕ: 08-04-2009.

ಪ್ರಸ್ತಾವನೆ:

ಶ್ರೀ ಕೆ.ಎ. ವಾಮನೆ, ನಿವೃತ್ತ ತಹಶೀಲ್ದಾರ್ ಇವರು ಓದಲಾದ ಕ್ರಸಂ. (1)ರ ಪತ್ರದಲ್ಲಿ ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿ, ದಿನಾಂಕ 08-04-2009 ರಂದು ನನ್ನ ವಿರುದ್ಧ ಇದ್ದ ಆರೋಪಗಳು ದೋಷಮುಕ್ತಗೊಳಿಸಿ ಆದೇಶ ಹೊರಡಿಸುವ ಹಿನ್ನೆಲೆಯಲ್ಲಿ ಸದರಿಯವರು ದಿನಾಂಕ: 30-04-2006 ರಂದು ವಯೋನಿವೃತ್ತಿ ಹೊಂದಿದ್ದು, ವಿಳಂಬವಾಗಿ ಪಾವತಿಸಲ್ಪಟ್ಟ ನಿವೃತ್ತಿ ಸೌಲಭ್ಯ ಹಾಗೂ 240 ದಿನಗಳ ಗಳಿಕೆ ರಜೆ ನಗದೀಕರಣ ಸೌಲಭ್ಯಗಳಿಗೆ ಬಡ್ಡಿಯನ್ನು ಮಂಜೂರು ಮಾಡುವಂತೆ ಕೋರಿರುತ್ತಾರೆ. ಸದರಿ ನಿವೃತ್ತಿ ಸೌಲಭ್ಯಗಳನ್ನು ಮಂಜೂರು ಮಾಡಿರುವ ಬಗ್ಗೆ ಓದಲಾದ ಕ್ರಸಂ. (2) ರಲ್ಲಿ ಮಹಾಲೇಖಪಾಲರು ಮಾಹಿತಿ ನೀಡಿರುತ್ತಾರೆ.

ಓದಲಾದ ಕ್ರಸಂ. (3) ರಲ್ಲಿ ಸದರಿಯವರ ವಿರುದ್ಧ ಮಾಡಲಾಗಿರುವ ಆಪಾದನೆಗಳು ಸಾಬೀತಾಗದ ಕಾರಣ ಸದರಿಯವರನ್ನು ಆರೋಪದಿಂದ ದೋಷಮುಕ್ತಗೊಳಿಸಿ ಹಾಗೂ ಇವರಿಗೆ ತಡೆಹಿಡಿದ ಪಿಂಚಣಿ ಸೌಲಭ್ಯಗಳನ್ನು ಬಿಡುಗಡೆಗೊಳಿಸಿ ಆದೇಶಿಸಲಾಗಿತ್ತು.

ಈ ಪ್ರಸ್ತಾವನೆಯನ್ನು ಸರ್ಕಾರದ ಆದೇಶ ಸಂಖ್ಯೆ: ಆಇ (ವಿಶೇಷ) 199 ಪಿಇಎನ್ 93, ದಿನಾಂಕ: 13-09-1994 ರನ್ವಯ ಕೂಲಂಕಷವಾಗಿ ಪರಿಶೀಲಿಸಿ, ಶ್ರೀ ಕೆ.ಎ. ವಾಮನೆ, ನಿವೃತ್ತ ತಹಶೀಲ್ದಾರ್ ಇವರಿಗೆ ವಿಳಂಬವಾಗಿ ಪಾವತಿಸಲ್ಪಟ್ಟ ನಿವೃತ್ತಿ ಸೌಲಭ್ಯಗಳಿಗೆ ಬಡ್ಡಿ ನೀಡುವ ಬಗ್ಗೆ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ : ಕಂಇ 161 ಎಎಸ್‌ಡಿ 2010, ಬೆಂಗಳೂರು, ದಿನಾಂಕ: 03-08-2011

ಪ್ರಸ್ತಾವನೆಯನ್ನು ಪರಿಶೀಲಿಸಿ ಸರ್ಕಾರವು ಶ್ರೀ ಕೆ.ಎ. ವಾಮನೆ, ನಿವೃತ್ತ ತಹಶೀಲ್ದಾರ್ ಇವರಿಗೆ ವಿಳಂಬವಾಗಿ ಪಾವತಿಸಲ್ಪಟ್ಟ ನಿವೃತ್ತಿ ಸೌಲಭ್ಯಗಳಿಗೆ ಈ ಕೆಳಕಂಡಂತೆ ಬಡ್ಡಿಯನ್ನು ಮಂಜೂರು ಮಾಡಿದೆ.

ಕ್ರಸಂ.	ನಿವೃತ್ತಿ ಸೌಲಭ್ಯದ ವಿವರ ಮತ್ತು ಮೊತ್ತ	ಶೇಕಡ 8 ರಂತೆ ಬಡ್ಡಿ	ಒಟ್ಟು ಮೊತ್ತ (ರೂ. ಗಳಲ್ಲಿ)
1	ಡಿಸಿಆರ್‌ಜಿ ಮೊತ್ತ ರೂ. 2,83,650/-	ದಿ: 01-08-2006 ರಿಂದ 30-11-2009, 40 ತಿಂಗಳು	75,640-00
2	ರಜಾ ನಗದೀಕರಣ ರೂ. 1,52,407/-	ದಿ: 01-08-2006 ರಿಂದ 31-05-2009, 34 ತಿಂಗಳು	34,545-00
		ಒಟ್ಟು	**1,10,185-00**

ಈ ಆದೇಶವನ್ನು ಆರ್ಥಿಕ ಇಲಾಖೆ (ವಿಶ್ರಾಂತಿ ವೇತನ) ಟಿಪ್ಪಣಿ ಸಂಖ್ಯೆ: ಆಇ(ವಿ) 65 ಪಿಇಎನ್-1/2011, ದಿನಾಂಕ: 26-03-2011 ರ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎನ್. ಗೋಪಾಲಯ್ಯ
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಸೇವೆಗಳು-3).

ಪಿಆರ್.ನಂ. 2099

ಜಲಸಂಪನ್ಮೂಲ ಸಚಿವಾಲಯ

ವಿಷಯ : ಬೆಳಗಾಂ ಜಿಲ್ಲೆ, ಸೌದತ್ತಿ ತಾಲ್ಲೂಕು ಬೂದಿಗೊಪ್ಪ ಮತ್ತು ಯರಝುರವಿ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಜಮೀನುಗಳಿಗೆ ಸಿವಿಲ್ ನ್ಯಾಯಾಲಯದ ಆದೇಶದಂತೆ ಹೆಚ್ಚಿನ ಪರಿಹಾರಧನ ಪಾವತಿಸುವ ಕುರಿತು.

ಓದಲಾಗಿದೆ : ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರ ದಿನಾಂಕ : 10-7-2009 ರ ಪತ್ರ ಸಂಖ್ಯೆ : ಮುಇಂ/ಸನೀ (ಉ)ವ/ಬಿಜಾ/ಭೂಸ್ವಾಪ್ರ/ 2009-10/4067.

ಪ್ರಸ್ತಾವನೆ :

ಬೆಳಗಾಂ ಜಿಲ್ಲೆ, ಸೌದತ್ತಿ ತಾಲ್ಲೂಕು ಬೂದಿಗೊಪ್ಪ ಮತ್ತು ಯರಝುರವಿ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಬೂದಿಗೊಪ್ಪ ಗ್ರಾಮದ ಜಮೀನುಗಳಿಗೆ ಸೌದತ್ತಿ ಸಿವಿಲ್ (ಹಿರಿಯ ಶ್ರೇಣಿ) ನ್ಯಾಯಾಲಯವು ಎಲ್.ಎ.ಸಿ. ಪ್ರಕರಣದಲ್ಲಿ ನೀಡಿದ ತೀರ್ಪಿನ ಅನುಸಾರ ಹೆಚ್ಚಿನ ಪರಿಹಾರಧನ ಪಾವತಿಸಲು ಅನುದಾನ ಬಿಡುಗಡೆ ಮಾಡುವಂತೆ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರು ಮೇಲೆ ಓದಲಾದ ಪತ್ರದಲ್ಲಿ ಕೋರಿದ್ದಾರೆ. ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿದ ಜಮೀನುಗಳ ಭೂಸ್ವಾಧೀನದ ಪ್ರಕ್ರಿಯೆಯ ವಿವರಗಳು ಈ ಕೆಳಕಂಡಂತಿದೆ :

- ಕರ್ನಾಟಕ ಭೂಸ್ವಾಧೀನ ಕಾಯ್ದೆಯ ಕಲಂ 4(1)ರಡಿ ಅಧಿಸೂಚನೆ ಹೊರಡಿಸಿದ ದಿನಾಂಕ : 5-7-2001.
- ಕರ್ನಾಟಕ ಭೂಸ್ವಾಧೀನ ಕಾಯ್ದೆಯಡಿಯಲ್ಲಿ ಭೂಸ್ವಾಧೀನಾಧಿಕಾರಿಗಳು ಪರಿಹಾರ ಧನದ ಐತೀರ್ಪು ಘೋಷಿಸಿದ ದಿನಾಂಕ 24-2-2003.

ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳ ಭೂಮಾಲೀಕರು ಭೂಸ್ವಾಧೀನಾಧಿಕಾರಿಗಳ ಪರಿಹಾರ ಧನದ ಐತೀರ್ಪಿನಂತೆ ಹಣ ಪಡೆದು, ಹೆಚ್ಚಿನ ಪರಿಹಾರಧನಕ್ಕಾಗಿ ಭೂಸ್ವಾಧೀನ ಕಾಯ್ದೆ ಕಲಂ 18(1) ರಡಿ ಸೌದತ್ತಿ ಸಿವಿಲ್ (ಹಿರಿಯ ಶ್ರೇಣಿ) ನ್ಯಾಯಾಲಯದಲ್ಲಿ ಎಲ್.ಎ.ಸಿ. ಪ್ರಕರಣಗಳನ್ನು ದಾಖಲಿಸಿದ್ದು, ಈ ಪ್ರಕರಣದಲ್ಲಿ ಸಿವಿಲ್ ನ್ಯಾಯಾಲಯವು ಪ್ರತಿ ಎಕರೆಗೆ ಭೂಮೌಲ್ಯವನ್ನು ರೂ. 96,000/- ಗಳಿಗೆ ನಿಗದಿಪಡಿಸಿದೆ ಹಾಗೂ ಈ ಮೊತ್ತದ ಮೇಲೆ ಶೇ. 30 ರಷ್ಟು ಸೊಲೇಷಿಯಂ ಮತ್ತು 4(1) ರ ಅಧಿಸೂಚನೆ ದಿನಾಂಕದಿಂದ ಪರಿಹಾರ ಧನದ ಐತೀರ್ಪಿನ ದಿನಾಂಕದವರೆಗೆ ಶೇ. 12 ರಷ್ಟು ಮಾರುಕಟ್ಟೆ ದರವನ್ನು ಪಾವತಿಸುವಂತೆ ಅಲ್ಲದೆ, ಪರಿಹಾರ ಧನದ ಮೇಲೆ ಬಡ್ಡಿಯನ್ನು ಜಮೀನನ್ನು ಕಬ್ಜೆ ಪಡೆದ ದಿನಾಂಕದಿಂದ ಪಾವತಿಸಲು ತೀರ್ಪು ನೀಡಿದೆ. ಈ ತೀರ್ಪಿನ ವಿರುದ್ಧ ಕಾನೂನು ಇಲಾಖೆಯು ಮೇಲ್ಮನವಿ ಸಲ್ಲಿಸಲು ಹಾಗೂ ಸದರಿ ಪ್ರಕರಣವನ್ನು ಪ್ರತಿನಿಧಿಸಲು ಸರ್ಕಾರಿ ವಕೀಲರನ್ನು ಅಧಿಕೃತಗೊಳಿಸಿ ಹೊರಡಿಸಿದ ಸರ್ಕಾರಿ ಆದೇಶ ಸಂಖ್ಯೆ : ಲಾ 1136 ಎಲ್‌ಬಿಎಸ್ 2005, ದಿನಾಂಕ : 24-12-2003 ನ್ನು ಸರ್ಕಾರಿ ಆದೇಶ ಸಂಖ್ಯೆ : ಲಾ 827 ಎಲ್‌ಬಿಎಸ್ 2005, ದಿನಾಂಕ : 8-9-2005 ರಲ್ಲಿ ಹಿಂಪಡೆಯಲಾಗಿದೆ.

ಪಾವತಿಸಬೇಕಾಗಿರುವ ಮೊತ್ತದ ವಿವರ ಕೆಳಕಂಡಂತಿದೆ :

ಕ್ರ. ಸಂ.	ಎಲ್‌ಎಸಿ ಸಂಖ್ಯೆ	ಬೂದಿಗೊಪ್ಪ ಗ್ರಾಮದ ಸ.ನಂ.	ವಿಸ್ತೀರ್ಣ ಎ-ಗುಂ	ಪರಿಹಾರ ಮೊತ್ತ (ಲಕ್ಷ ರೂ.ಗಳಲ್ಲಿ)
1	122/03	227/1	0-10	59868
2	134/03	226/1	0-09	53881
		232/2ಎ	0-04	23947
3	136/03	234ಬಿ	0-05	29934
		239	0-14	83815
4	138/03	149	0-14	83815
5	139/03	204	0-02	11974
6	140/03	205	0-03	17960
7	141/03	206	0-04	23947
8	142/03	207	0-04	23947
9	143/03	208	0-05	29934
10	144/03	209	0-04	23947
11	145/03	213	0-06	35921
12	154/03	229/1	0-05	29934
13	155/03	230	0-10	59868
14	156/03	233/ಬಿ	0-03	17960
15	157/03	235, 237ಬಿ	0-10	59868
16	158/03	240	0-12	71841
		ಒಟ್ಟು		742361

*ಪರಿಹಾರ ಧನದ ಮೊತ್ತದಲ್ಲಿ ನ್ಯಾಯಾಲಯದ ವೆಚ್ಚ ಸಹ ಸೇರಿದೆ.

ಪ್ರಸ್ತಾವನೆಯನ್ನು ಪರಿಶೀಲಿಸಿ ಕೆಳಕಂಡಂತೆ ಸರ್ಕಾರವು ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸನೀಇ 114 ಭೂಸ್ವಾಪ್ರ 2009, ಬೆಂಗಳೂರು, ದಿನಾಂಕ : 22ನೇ ಆಗಸ್ಟ್ 2011

ಬೆಳಗಾಂ ಜಿಲ್ಲೆ, ಸೌದತ್ತಿ ತಾಲ್ಲೂಕು ಬೂದಿಗೊಪ್ಪ ಮತ್ತು ಯರಝುರವಿ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಬೂದಿಗೊಪ್ಪ ಗ್ರಾಮಕ್ಕೆ ಸೇರಿದ ವಿವಿಧ ಗ್ರಾಮದ ಸ.ನಂ.ಗಳ ಜಮೀನುಗಳಿಗೆ ಸಿವಿಲ್ ನ್ಯಾಯಾಲಯವು ಎಲ್.ಎ.ಸಿ. ಪ್ರಕರಣದಲ್ಲಿ ನೀಡಿರುವ ತೀರ್ಪಿನಂತೆ ಲೆಕ್ಕಾಹಾಕಿದ ಪರಿಹಾರ ಧನ ಮೊತ್ತ ರೂ. 7,42,361-00 (ಏಳು ಲಕ್ಷದ ನಲವತ್ತೆರಡು ಸಾವಿರದ ಮುನ್ನೂರ ಅರವತ್ತೊಂದು ರೂ.ಗಳು ಮಾತ್ರ) ಗಳ ಪರಿಹಾರವನ್ನು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ನೀಡಲು ಸರ್ಕಾರದ ಅನುಮೋದನೆ ನೀಡಿದೆ.

1. ಹಣ ಪಾವತಿಗೆ ಮೊದಲು ಮತ್ತೊಮ್ಮೆ ಲೆಕ್ಕಾಚಾರ ತಃಖ್ತೆಯನ್ನು ದೃಢೀಕರಿಸಿಕೊಂಡು ಪಾವತಿಸತಕ್ಕದ್ದು ಹಾಗೂ ಎರಡನೇ ಬಾರಿ ಪಾವತಿಯಾಗದಂತೆ ಎಚ್ಚರವಹಿಸತಕ್ಕದ್ದು.
2. ಹೆಚ್ಚುವರಿ ಪರಿಹಾರಧನದ ಪಾವತಿಗೆ ಮೊದಲು ಜಮೀನಿನ ಹಕ್ಕುದಾರಿಕೆ ಬಗ್ಗೆ ಖಚಿತಪಡಿಸಿಕೊಂಡು ಪಾವತಿಸತಕ್ಕದ್ದು.
3. ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳು ಇನ್ನೂ ಸಣ್ಣ ನೀರಾವರಿ ಇಲಾಖೆಯ ಹೆಸರಿಗೆ ವರ್ಗಾವಣೆಯಾಗದಿದ್ದಲ್ಲಿ, ಸಂಬಂಧಿಸಿದ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರು ವರ್ಗಾವಣೆ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳತಕ್ಕದ್ದು.

ಈ ವೆಚ್ಚವನ್ನು 2011-12ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ "4702-00-800-1-00-ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು-ಇತ್ಯರ್ಥ 132 ಬಂಡವಾಳ ವೆಚ್ಚಗಳು" ಅಡಿಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒದಗಿಸಿರುವ ಅನುದಾನದಿಂದ ರೂ. 7,42,361/-ಗಳನ್ನು ಹಂಚಿಕೆ ಮಾಡಿ, ಬಿಡುಗಡೆ ಮಾಡಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2010, ದಿನಾಂಕ: 20-10-2010ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಅಧಿಕಾರ ಪ್ರತ್ಯಾಯೋಜನೆಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಕೆ.ಸಿ. ಸಿದ್ದಪ್ಪ

ಸರ್ಕಾರದ ಅಧೀನ ಕಾರ್ಯದರ್ಶಿ,

ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಪಿ.ಆರ್. 2100

ಜಲಸಂಪನ್ಮೂಲ ಸಚಿವಾಲಯ

ವಿಷಯ : ಬೆಳಗಾಂ ಜಿಲ್ಲೆ, ಚಿಕ್ಕೋಡಿ ಸದಲಗಾ ಮತಕ್ಷೇತ್ರ ವ್ಯಾಪ್ತಿಯಲ್ಲಿನ ಮೂರು ಕೆರೆಗಳನ್ನು ದೂಧಗಂಗಾ ನದಿಯಿಂದ ನೀರು ತುಂಬಿಸಲು ಜಲಸಂಪನ್ಮೂಲ ಇಲಾಖೆಗೆ ವರ್ಗಾಯಿಸುವ ಬಗ್ಗೆ.

ಓದಲಾಗಿದೆ : 1) ವಿಶೇಷಾಧಿಕಾರಿ (ತಾಂತ್ರಿಕ-4), ಜಲಸಂಪನ್ಮೂಲ ಇಲಾಖೆ ಇವರ ಅನಧಿಕೃತ ಟಿಪ್ಪಣಿ ಸಂಖ್ಯೆ : ಜಸಂಇ 05 ವಿದೂಗ 2010, ದಿನಾಂಕ : 27-8-2010.

2) ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ಉತ್ತರ) ವಲಯ, ಬಿಜಾಪುರ ಇವರ ಪತ್ರದ ಕ್ರಮಾಂಕ: ಮುಇ/ಸನೀ(ಉ) ವಲಯ/ಬಿಜೆಪಿ/ಎಇ-1/2011-12/2821, ದಿನಾಂಕ: 28-5-2011.

ಪ್ರಸ್ತಾವನೆ :

ಬೆಳಗಾಂ ಜಿಲ್ಲೆ, ಚಿಕ್ಕೋಡಿ ಸದಲಗಾ ಮತಕ್ಷೇತ್ರ ವ್ಯಾಪ್ತಿಯಲ್ಲಿನ ಮೂರು ಕೆರೆಗಳನ್ನು ದೂಧಗಂಗಾ ನದಿಯಿಂದ ನೀರು ತುಂಬಿಸಲು ಚಿಕ್ಕೋಡಿ ತಾಲ್ಲೂಕಿನ ವಡಗೋಳ ಕೆರೆ, ಬೈನಾಕವಾಡಿ ಕೆರೆ ಹಾಗೂ ಯದ್ಯಾನವಾಡಿ ಕೆರೆಗಳನ್ನು ಸಣ್ಣ ನೀರಾವರಿ ಇಲಾಖೆಯಿಂದ ಜಲಸಂಪನ್ಮೂಲ ಇಲಾಖೆಗೆ ವರ್ಗಾಯಿಸಿಕೊಡುವ ಬಗ್ಗೆ ಮೇಲೆ ಕ್ರಮಾಂಕ (1) ರಲ್ಲಿ ಓದಲಾದ ದಿನಾಂಕ : 27-8-2010ರ ಅನಧಿಕೃತ ಟಿಪ್ಪಣಿಯಲ್ಲಿ ವಿಶೇಷಾಧಿಕಾರಿ (ತಾಂತ್ರಿಕ-4), ಜಲಸಂಪನ್ಮೂಲ ಇಲಾಖೆ ಇವರು ಕೋರಿರುತ್ತಾರೆ.

ಬೆಳಗಾಂ ಜಿಲ್ಲೆ, ಚಿಕ್ಕೋಡಿ ಸದಲಗಾ ಮತಕ್ಷೇತ್ರ ವ್ಯಾಪ್ತಿಯಲ್ಲಿನ ಮೂರು ಗ್ರಾಮಗಳ ಕೆರೆಗಳಾದ ವಡಗೋಳ ಕೆರೆ, ಬೈನಾಕವಾಡಿ ಕೆರೆ ಹಾಗೂ ಯದ್ಯಾನವಾಡಿ ಕೆರೆಗಳಲ್ಲಿ ಬೈನಾಕವಾಡಿ ಕೆರೆ ಮಾತ್ರ ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವುದಾಗಿ ತಿಳಿಸಿ ಸದರಿ ಕೆರೆಯನ್ನು ಜಲಸಂಪನ್ಮೂಲ ಇಲಾಖೆಗೆ ವರ್ಗಾಯಿಸಬಹುದಾಗಿದೆ ಎಂದು ಮೇಲೆ ಕ್ರಮಾಂಕ (2) ರಲ್ಲಿ ಓದಲಾದ ದಿನಾಂಕ : 28-5-2011ರ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ಉತ್ತರ) ವಲಯ, ಬಿಜಾಪುರ ಇವರ ಪತ್ರದಲ್ಲಿ ತಿಳಿಸಿರುತ್ತಾರೆ.

ಈ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸನೀಇ 47 ಕೆಜಿದು 2010, ಬೆಂಗಳೂರು, ದಿನಾಂಕ : 22-8-2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ, ದೂಧಗಂಗಾ ನದಿಯಿಂದ ನೀರು ತುಂಬಿಸುವ ಸಲುವಾಗಿ ಬೆಳಗಾಂ ಜಿಲ್ಲೆ, ಚಿಕ್ಕೋಡಿ, ಸದಲಗಾ ಮತಕ್ಷೇತ್ರ ವ್ಯಾಪ್ತಿಯಲ್ಲಿನ ಬೈನಾಕವಾಡಿ ಕೆರೆಯನ್ನು ಈ ಕೆಳಕಂಡ ಷರತ್ತಿಗಳಿಗೊಳಪಟ್ಟು ಜಲಸಂಪನ್ಮೂಲ ಇಲಾಖೆಗೆ ಹಸ್ತಾಂತರಿಸಲು ಅನುಮೋದನೆ ನೀಡಿದೆ.

1. ಕೆರೆಗಳನ್ನು ನೀರು ತುಂಬಿಸುವ ಉದ್ದೇಶಕ್ಕಾಗಿ ಬಳಸಿಕೊಳ್ಳುವ ಸಂದರ್ಭದಲ್ಲಿ ನೀರಾವರಿ ಸಲಹಾ ಸಮಿತಿ/ನೀರು ಬಳಕೆದಾರರ ಸಂಘದ ಸಭೆಯಲ್ಲಿ ಗೊತ್ತುವಳಿಯನ್ನು ಅಂಗೀಕರಿಸುವುದು.
2. ಹಾಲಿ ಇರುವ ಕೆರೆಯ ಅಚ್ಚುಕಟ್ಟುದಾರರಿಗೆ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳುವುದು.
3. ಕೆರೆಗಳ ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸುವಾಗ ಕೆರೆಯ ಏರಿ, ತೂಬು, ಕೋಡಿಯ ಸ್ಥಿರತೆಗೆ ಹಾಗೂ ಸದೃಢತೆಗೆ ಧಕ್ಕೆಯಾಗದಂತೆ ಕಾರ್ಯನಿರ್ವಹಿಸುವುದು.
4. ಕೆರೆಗಳನ್ನು ಯಾವುದೇ ಆರ್ಥಿಕ ಲಾಭಕ್ಕೆ ಬಳಸಿಕೊಳ್ಳಬಾರದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಕೆ.ಸಿ. ಸಿದ್ದಪ್ಪ

ಪಿ.ಆರ್. 2101

ಸರ್ಕಾರದ ಅಧೀನ ಕಾರ್ಯದರ್ಶಿ,

ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ).

HORTICULTURE SECRETARIAT

Sub : Release of State share for National Horticulture Mission (NHM) programme during 2011-12 reg.

Read : 1. Government of India letter No. 18-89/2009-NHM dated 23-6-2011.

2. Letter of Director of Horticulture No. ಮಿನಿ/ಕರಾತೋಮಿಏ/ವಿನಿ-1/48/2011-12, dated 20-7-2011.

Preamble:

1. Government of India has conveyed the sanction to the payment of the first instalment of Central share of Rs. 5312.50 lakhs under National Horticulture Mission (NHM) during 2011-12 vide Government of India letter read at (1) above.

2. The Director of Horticulture has requested the Government vide his letter read at (2) above to release matching State share.

3. An amount of Rs. 2500.00 lakhs has been earmarked in the budget during 2011-12 under the State sector Scheme namely, "State share for National Horticulture Mission", Head of Account 2401-00-800-2-30 (plan) towards the State share required for the National Horticulture Mission programme.

4. The proposal of the Director of Horticulture has been examined and hence this order.

GOVERNMENT ORDER NO. HCD 30 HPP 2011, BANGALORE, DATED 23-8-2011.

Government is pleased to release to the Director of Horticulture an amount of Rs. 796.875 lakhs (Rupees Seven Hundered and Ninety Six Lakhs and Eighty Seven Thousand Five Hundred only) under the Head of Account 2401-00-800-2-30 towards the matching State share of National Horticulture Mission programme as detailed below :

(Rs. In lakhs)

Object Code	Amount Released
059-Other Expenses	159.375
133-Special Development Plan	318.750
422-Special Component Plan	159.375
423- Tribal Sub-Plan	159.375
Total	**796.875**

2. This Order is issues with the concurrence of the Internal Financial Advisor, Agriculture and Horticulture Department Note No. ಕೃತೋಇ 36 ಆಆಸ 2011, dated 17-8-2011.

By Order and in the name of the Governor of Karnataka,

B.C. PRAKASH

Under Secretary to Government,

Horticulture Department.

P.R. No. 2103

HORTICULTURE SECRETARIAT

Sub : "Central Sector Scheme for Drip Irrigation"-Release of funds-reg.

Read : 1. G.O. No. HCD 71 HPP 2011, dated 31-3-2011.

2. G.O. No. HCD 121 HPP 2011, dated 31-5-2011.
3. GOI letter No. 20-4/2009-Hort dated 9-6-2011.
4. G.O. No. HCD 121 HPP 2011, dated 23-6-2011.
5. Director of Horticulture letter No. ತೋಇ/ತೋಜಂನಿ/ಹನೀ/ಸತೋಅ-1/14/2011-12, dated 13-7-2011.

Preamble:

As per Government Order read at (1) above the scheme for "Central Sector Scheme for Drip Irrigation" Head of Account 2401-00-108-2-30 has been continued during 2011-12 as an ongoing scheme subject to the condition that the scheme shall be implemented as per the approval from Government of India for the Action Plan for 2011-12 and guidelines issued thereof

2. As per Government Order read at (4) above, Administrative approval for implementation of the scheme during 2011-12 has been accorded for an Annual Action Plan of Rs. 10601.67 lakhs out of which Central Share will be Rs. 6450.63 lakhs and matching state share will be Rs. 4151.04 lakhs. An amount of Rs. 5992.10 lakhs has been provided towards the State share requirement in the State budget as below ;

(Rs. In lakhs)

State Sector (2401-00-108-2-30)		
Object Code	Sub Head	Amount
059	Other expenses	3500.00
422	Special Component Plan	1000.00
423	Tribal Sub Plan	500.00
	Total	5000.00
District Sector 2435-00-101-0-28		
100	Financial Assistance /Relief	992.10
	Grand Total	5992.10

3. Out of this an amount of Rs. 1250.00 lakhs has been released to the Director of Horticulture as at Government Order read at (2) above towards the balance of State share for the year 2010-11.

4. The Director of Horticulture in his letter read at (5) above has informed that during 2011-12 an amount of Rs. 3200.00 lakhs has been released by the Government of India towards the Central share vide Government of India letter read at (3) above. Further, the Director of Horticulture has requested to release Rs. 3391.00 lakhs towards the matching State share out of which Rs. 2800.00 lakhs will be for 2011-12 and Rs. 591.00 lakhs will be for 2010-11 (balance).

5. The request of the Director of Horticulture has been examined it is ordered as below ;

GOVERNMENT ORDER NO. HCD 121 HPP 2011, BANGALORE, DATED 19-8-2011.

Government is pleased to release to the Director of Horticulture an amount of Rs. 3391.00 lakhs (Rupees Three Thousand Three Hundred and Ninety one Lakhs only) during 2011-12 towards the State share for "Central Sector Scheme for Drip Irrigation" under the Head of Account 2401-00-108-2-30 as matching State share as detailed below :

State Sector (2401-00-108-2-30)		Amount Released (Rs. In lakhs)		
Object Code	Sub Head	2010-11	2011-12	Total
059	Other expenses	413.70	1960.00	2373.70
422	Special Component Plan	118.20	560.00	678.20
423	Tribal Sub Plan	59.10	280.00	339.10
	Total	**591.00**	**2800.00**	**3391.00**

2. This Order issues with the concurrence of the Internal Financial Advisor, Agriculture, Horticulture and Animal Husbandry Department vide its Note No. ಕೃತೋಇ 15 ಆಂಆಸ 2011, dated 18-8-2011.

By Order and in the name of the Governor of Karnataka,

B.C. PRAKASH

Under Secretary to Government,

Horticulture Department.

P.R. No. 2104

ಕೃಷಿ ಸಚಿವಾಲಯ

ವಿಷಯ : ಕೃಷಿ ಇಲಾಖೆಯ ಕೃಷಿ ಮತ್ತು ಜಲಾನಯನ ಅಭಿವೃದ್ಧಿ ಇಲಾಖೆಗಳ ಮರು ಹೊಂದಾಣಿಕೆ (Re-deployment) ಕುರಿತು.

ಓದಲಾಗಿದೆ :
1. ಸರ್ಕಾರದ ಆದೇಶ ಸಂಖ್ಯೆ : ಎಹೆಚ್‌ಡಿ 206/ಎಎಂಎಲ್ 94 (ವ್ಯಾಲ್ಯೂಂ-3) ದಿನಾಂಕ : 31-12-1999.
2. ಸರ್ಕಾರದ ಆದೇಶ ಸಂಖ್ಯೆ : ಎಹೆಚ್‌ಡಿ 88 ಎಜಿಟಿ 2000 ದಿನಾಂಕ : 29-06-2000.
3. ಸರ್ಕಾರದ ಆದೇಶ ಸಂಖ್ಯೆ : ಕೃತೋಇ 225 ಕೃಪಸೇ 2010, ದಿನಾಂಕ : 15-12-2010.
4. ಸರ್ಕಾರದ ಆದೇಶ ಸಂಖ್ಯೆ : ಕೃತೋಇ 293 ಕೃಪಸೇ 2010, ದಿನಾಂಕ : 15-12-2010.

ಪ್ರಸ್ತಾವನೆ :

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾಗಿರುವ ದಿನಾಂಕ : 30-12-1999ರ ಆದೇಶದಲ್ಲಿ ದಿನಾಂಕ : 01-01-2000 ರಿಂದ ಜಾರಿಗೆ ಬರುವಂತೆ ಕೃಷಿ ಇಲಾಖೆಯನ್ನು ಪ್ರತ್ಯೇಕಿಸಿ ಜಲಾನಯನ ಅಭಿವೃದ್ಧಿ ಇಲಾಖೆಯನ್ನು ಹೊಸದಾಗಿ ಸೃಜಿಸಲಾಗಿರುತ್ತದೆ. ಹೀಗೆ ಸೃಜನೆಗೊಂಡಂತಹ ಜಲಾನಯನ ಅಭಿವೃದ್ಧಿ ಇಲಾಖೆಗೆ ಮೇಲೆ (2)ರಲ್ಲಿ ಓದಲಾಗಿರುವ ದಿನಾಂಕ : 29-06-2000ರ ಆದೇಶದಲ್ಲಿ ಕೃಷಿ ಇಲಾಖೆಯಲ್ಲಿರುವ ಅಧಿಕಾರಿ/ನೌಕರರುಗಳನ್ನು ಜಲಾನಯನ ಅಭಿವೃದ್ಧಿ ಇಲಾಖೆಗೆ ಮರು ಹಂಚಿಕೆ ಮಾಡಿ ಆದೇಶಿಸಲಾಗಿರುತ್ತದೆ.

ಪ್ರಸ್ತುತ ಕೃಷಿ ಮತ್ತು ಜಲಾನಯನ ಅಭಿವೃದ್ಧಿ ಇಲಾಖೆಗಳಲ್ಲಿರುವ ಅಧಿಕಾರಿ/ನೌಕರರುಗಳಿಂದ ಎರಡೂ ಇಲಾಖೆಗಳ ಸಮನ್ವಯದೊಂದಿಗೆ ಜಲಾನಯನ ಅಭಿವೃದ್ಧಿ ಇಲಾಖೆಯ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸುವ ಸಂಬಂಧ ಮಾನ್ಯ ಕೃಷಿ ಸಚಿವರ ಅಧ್ಯಕ್ಷತೆಯಲ್ಲಿ ಎರಡೂ ಇಲಾಖೆಗಳನ್ನು ಪುನರ್ ಸಂಘಟಿಸುವ ಬಗ್ಗೆ ಅಮೂಲಾಗ್ರವಾಗಿ ಚರ್ಚಿಸಿ, ಈ ಕೆಳಕಂಡ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬಹುದೆಂದು ಅಭಿಪ್ರಾಯಪಡಲಾಗಿದೆ.

1) ಪ್ರಸ್ತುತ ಕೃಷಿ ಮತ್ತು ಜಲಾನಯನ ಇಲಾಖೆಗಳು ಪ್ರತ್ಯೇಕವಾಗಿ ಕಾರ್ಯನಿರ್ವಹಿಸುತ್ತಿದ್ದು, ಕೃಷಿ ಇಲಾಖೆಯಲ್ಲಿನ ಯೋಜನೆಗಳನ್ನು ಸಿಬ್ಬಂದಿಗಳ ತೀವ್ರ ಕೊರತೆಯಿಂದ ಅನುಷ್ಠಾನಗೊಳಿಸಲು ಕಷ್ಟಸಾಧ್ಯವಾಗಿರುತ್ತದೆ.

2) ಜಲಾನಯನ ಅಭಿವೃದ್ಧಿ ಇಲಾಖೆಯಲ್ಲಿ ವಿವಿಧ ಯೋಜನೆಗಳನ್ನು ಒಗ್ಗೂಡಿಸಿ, ಕೇಂದ್ರ ಸರ್ಕಾರವು ನೂತನ ಸಮಗ್ರ ಜಲಾನಯನ ನಿರ್ವಹಣಾ ಯೋಜನೆಯನ್ನು ರೂಪಿಸಿದೆ. ಕೃಷಿ ಇಲಾಖೆಯಲ್ಲಿ ಯೋಜನೆಗಳ ಸಂಖ್ಯೆ ಹೆಚ್ಚುತ್ತಿವೆ. ಆದರೆ ಹೆಚ್ಚಿನ ಸಿಬ್ಬಂದಿಗಳು ಜಲಾನಯನ ಅಭಿವೃದ್ಧಿ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವುದರಿಂದ ಕೃಷಿ ಇಲಾಖೆಯು ತೀವ್ರತರವಾದ ಸಿಬ್ಬಂದಿಯ ಕೊರತೆಯನ್ನು ಅನುಭವಿಸುತ್ತಿದೆ.

3) ಎರಡು ಇಲಾಖೆಗಳ ನಡುವೆ ಸಮನ್ವಯದ ಕೊರತೆಯಿಂದ ಕೃಷಿಯಲ್ಲಿ ಸಮಗ್ರವಾದ ಬೆಳವಣಿಗೆ ಕುಂಠಿತವಾಗಿರುತ್ತದೆ.

ಮೇಲಿನ ಸಮಸ್ಯೆಗಳನ್ನು ಚರ್ಚಿಸಿದ ನಂತರ ಎರಡೂ ಇಲಾಖೆಗಳ ಸಿಬ್ಬಂದಿಗಳನ್ನು ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಪುನರ್ ಸಂಘಟಿಸಿ ಕೆಲಸ ಹಂಚುವುದರಿಂದ ಈ ಕೆಳಕಂಡ ಅನುಕೂಲಗಳಾಗುತ್ತವೆಂಬುದನ್ನು ಸಹ ಸಭೆಯು ಗಮನಿಸಿರುತ್ತದೆ.

ಕೃಷಿ ಇಲಾಖೆಯಲ್ಲಿ ಮಳೆಗಾಲದ ಆರಂಭದಲ್ಲಿ ಕೆಲಸವಿದ್ದು, ಜಲಾನಯನ ಅಭಿವೃದ್ಧಿ ಇಲಾಖೆಯಲ್ಲಿ ಮಳೆಗಾಲದ ನಂತರ ಕೆಲಸಗಳು ಪ್ರಾರಂಭಗೊಳ್ಳುತ್ತವೆ. ಎರಡೂ ಇಲಾಖೆಗಳನ್ನು ಪುನರ್ ಸಂಘಟಿಸಿದಲ್ಲಿ ಇರುವಂತಹ ಸಿಬ್ಬಂದಿಗಳ ಮಾನವ ಸಂಪನ್ಮೂಲವನ್ನು ವರ್ಷಪೂರ್ತಿ ಬಳಸಿಕೊಂಡು, ಕೃಷಿ ಮತ್ತು ಜಲಾನಯನ ಅಭಿವೃದ್ಧಿ ಯೋಜನೆಗಳ ಸಮಗ್ರ ಅನುಷ್ಠಾನಕ್ಕೆ ಸದ್ಬಳಕೆ ಮಾಡಿಕೊಳ್ಳಬಹುದಾಗಿದೆ. ಮತ್ತು ಇಲಾಖೆಗಳ ಕಾರ್ಯಕ್ರಮಗಳನ್ನು ಸಮ್ಮಿಳನಗೊಳಿಸಿ (convergence) ಸಮನ್ವಯತೆ ಸಾಧಿಸಿ, ರೈತರ ಸಮಗ್ರ ಅಭಿವೃದ್ಧಿಗೆ ಅನುವು ಮಾಡಬಹುದಾಗಿದೆ.

ಮೇಲ್ಕಂಡ ಅಂಶಗಳ ಸಾಧಕ ಬಾಧಕಗಳ ಬಗ್ಗೆ ದಿನಾಂಕ : 01-07-2011 ರಂದು ಮಾನ್ಯ ಕೃಷಿ ಸಚಿವರ ಅಧ್ಯಕ್ಷತೆಯಲ್ಲಿ ಪ್ರಧಾನ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಹಾಗೂ ಕಾರ್ಯದರ್ಶಿಗಳು ಆರ್ಥಿಕ ಇಲಾಖೆ ಇವರುಗಳೊಂದಿಗೆ ಚರ್ಚಿಸಲಾಗಿದ್ದು, ಚರ್ಚೆಯಲ್ಲಿ ಎತ್ತಿದ ಅಂಶಗಳಿಗೆ ಈ ಕೆಳಕಂಡಂತೆ ಸ್ಪಷ್ಟೀಕರಿಸಲಾಗಿದೆ.

1) ಕೃಷಿ ಮತ್ತು ಜಲಾನಯನ ಅಭಿವೃದ್ಧಿ ಇಲಾಖೆಗಳು ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಈಗಾಗಲೇ ಕಾರ್ಯನಿರ್ವಹಿಸುತ್ತಿದ್ದು, ಅದೇ ವ್ಯವಸ್ಥೆಯಲ್ಲಿಯೇ ಮುಂದುವರೆಯುತ್ತವೆ.
2) ಜಲಾನಯನ ಅಭಿವೃದ್ಧಿ ಇಲಾಖೆಯ ಸ್ವತಂತ್ರ ಕಾರ್ಯನಿರ್ವಹಣೆಯ ಬಗ್ಗೆ ಯಾವುದೇ ಸಮಿತಿಯ ಮೌಲ್ಯಮಾಪನ ವರದಿ ಇರುವುದಿಲ್ಲ.
3) ಪ್ರಸ್ತುತ ವಿಶ್ವಬ್ಯಾಂಕಿನ ಯೋಜನೆಗಳು ಜಲಾನಯನ ಅಭಿವೃದ್ಧಿ ಇಲಾಖೆಯಲ್ಲಿ ಇಲ್ಲದೇ ಇರುವುದರಿಂದ ವಿಶ್ವಬ್ಯಾಂಕ್ ಈ ಹಿಂದೆ ಜಲಾನಯನ ಅಭಿವೃದ್ಧಿ ಇಲಾಖೆಯು ಪ್ರತ್ಯೇಕವಾಗಿರಬೇಕೆಂದು ವಿಧಿಸಿದ್ದ ನಿಬಂಧನೆಗಳು ಸಹ ಇರುವುದಿಲ್ಲ.
4) ಜಲಾನಯನ ಅಭಿವೃದ್ಧಿ ಇಲಾಖೆಗೆ ಪ್ರತ್ಯೇಕವಾದ ವೃಂದ ಮತ್ತು ನೇಮಕಾತಿ ನಿಯಮ ಹಾಗೂ ಪ್ರತ್ಯೇಕ ಹುದ್ದೆಗಳಿರುವುದಿಲ್ಲ. ಎಲ್ಲಾ ಹುದ್ದೆಗಳನ್ನು ಕೃಷಿ, ತೋಟಗಾರಿಕೆ ಹಾಗೂ ಅರಣ್ಯ ಇಲಾಖೆಯ ಸಿಬ್ಬಂದಿಗಳಿಂದ ನಿಯೋಜಿಸಲ್ಪಟ್ಟ ಹುದ್ದೆಗಳಾಗಿರುತ್ತವೆ.

ಈ ಪುನರ್ ಸಂಘಟನೆಯಿಂದ ಜಲಾನಯನ ಅಭಿವೃದ್ಧಿ ಇಲಾಖೆಯಲ್ಲಿನ 37 ಉಪ ವಿಭಾಗಗಳನ್ನು ರದ್ದುಪಡಿಸಿ, ಸದರಿ ಕಛೇರಿಗಳ ಸಿಬ್ಬಂದಿಯನ್ನು ಕೃಷಿ ಇಲಾಖಾ ಕಛೇರಿಗಳಿಗೆ ಮರು ಹಂಚಿಕೆ ಮಾಡಲಾಗುವುದು, ಹಾಗೂ ಯಾವುದೇ ಹೊಸ ಹುದ್ದೆಯು ಸೃಜನೆಯಾಗುವುದಿಲ್ಲ ಮತ್ತು ಈ ಮರು ಹೊಂದಾಣಿಕೆಯಿಂದ ವರ್ಗಾವಣೆ ಭತ್ಯೆಯನ್ನು ಹೊರತುಪಡಿಸಿ ಯಾವುದೇ ಆರ್ಥಿಕ ಹೊರೆ ಉಂಟಾಗುವುದಿಲ್ಲ.

ಮೇಲ್ಕಂಡ ಪ್ರಸ್ತಾವನೆಯ ಹಿನ್ನೆಲೆಯಲ್ಲಿ ಮೇಲೆ ಕ್ರಮಾಂಕ (1) ಮತ್ತು (2)ರಲ್ಲಿ ಓದಲಾಗಿರುವ ಆದೇಶಗಳನ್ನು ಭಾಗಶಃ ಮಾರ್ಪಡಿಸಿ, ಕೃಷಿ ಮತ್ತು ಜಲಾನಯನ ಅಭಿವೃದ್ಧಿ ಇಲಾಖೆಗಳ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಎರಡೂ ಇಲಾಖೆಗಳನ್ನು ಪುನರ್ ಸಂಘಟಿಸಲು (Re-organise) ಮತ್ತು ಈ ಸಂಬಂಧ ಉಂಟಾಗಲಿರುವ ವರ್ಗಾವಣೆಗಳನ್ನು ಜಾರಿಗೊಳಿಸಲು ತೀರ್ಮಾನಿಸಿದೆ. ಅದರಂತೆ ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ : ಕೃಇ 166 ಕೃಪಸೇ 2011, ಬೆಂಗಳೂರು, ದಿನಾಂಕ : 12-08-2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಸರ್ಕಾರದ ಆದೇಶ ಸಂಖ್ಯೆ : ಎಹೆಚ್‌ಡಿ 206 ಎಎಂಎಲ್ 94 (ವ್ಯಾಲ್ಯೂಂ-III) ದಿನಾಂಕ : 31-12-1999 ಹಾಗೂ ಎಹೆಚ್‌ಡಿ 88 ಎಜಿಟಿ 2000 ದಿನಾಂಕ : 29-06-2000ಗಳನ್ನು ಭಾಗಶಃ ಮಾರ್ಪಡಿಸಿ ಮತ್ತು ಕೃತೋಇ 225 ಕೃಪಸೇ 2010 ದಿನಾಂಕ : 15-12-2010 ಹಾಗೂ ಕೃತೋಇ 293 ಕೃಪಸೇ 2010 ದಿನಾಂಕ : 15-12-2010ಗಳನ್ನು ರದ್ದುಪಡಿಸಿ, ಕೃಷಿ ಮತ್ತು ಜಲಾನಯನ ಅಭಿವೃದ್ಧಿ ಇಲಾಖೆಗಳ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಈ ಕೂಡಲೇ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಎರಡೂ ಇಲಾಖೆಗಳನ್ನು ಅನುಬಂಧಗಳಲ್ಲಿ ಕಾಣಿಸಿರುವಂತೆ ಈ ಕೆಳಕಂಡ ಅಂಶಗಳನ್ನೊಳಗೊಂಡಂತೆ ಪುನರ್ ಸಂಘಟನೆ (Re-organise) ಮಾಡಿ ಆದೇಶಿಸಿದೆ.

1) ತಾಲ್ಲೂಕು ಮಟ್ಟದಲ್ಲಿದ್ದ ಕೃಷಿ ಅಧಿಕಾರಿ ವೃಂದದ ತಾಲ್ಲೂಕು ಜಲಾನಯನ ಅಭಿವೃದ್ಧಿ ಅಧಿಕಾರಿ ಹುದ್ದೆಯನ್ನು ಹಾಗೂ ಉಪ ವಿಭಾಗ ಮಟ್ಟದಲ್ಲಿದ್ದ ಸಹಾಯಕ ಕೃಷಿ ನಿರ್ದೇಶಕರು ಜಲಾನಯನ ಅಭಿವೃದ್ಧಿ ಇಲಾಖಾ ಕಛೇರಿಗಳನ್ನು ರದ್ದುಪಡಿಸಲಾಗಿದೆ.
2) ಈ ಪುನರ್ ಸಂಘಟನೆಯಿಂದ ಯಾವುದೇ ಹೊಸ ಹುದ್ದೆಗಳು ಸೃಜನೆಯಾಗುವುದಿಲ್ಲ. ಹಾಲಿಯಿರುವ ಹುದ್ದೆಗಳು ಹಾಗೂ ಲೆಕ್ಕ ಶೀರ್ಷಿಕೆಗಳೇ ಮುಂದುವರೆಯುತ್ತವೆ.
3) ತಾಲ್ಲೂಕು ಮಟ್ಟದ ಸಹಾಯಕ ಕೃಷಿ ನಿರ್ದೇಶಕರು, ಕೃಷಿ ಮತ್ತು ಜಲಾನಯನ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದು. ಕೃಷಿ ಕಾರ್ಯಕ್ರಮಗಳಿಗೆ ಸಂಬಂಧಿಸಿದ ಬಿಲ್ಲುಗಳನ್ನು ಜಿಲ್ಲಾ ಮಟ್ಟದ ಉಪ ಕೃಷಿ ನಿರ್ದೇಶಕರು (ಕೃಷಿ) ಇವರಿಗೆ ಹಾಗೂ ಜಲಾನಯನ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಸಂಬಂಧಿಸಿದ ಬಿಲ್ಲುಗಳನ್ನು ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿ/ಉಪ ಕೃಷಿ ನಿರ್ದೇಶಕರು (ಜಲಾನಯನ) ಇವರಿಗೆ ಮೇಲು ಸಹಿಗೆ ಮಂಡಿಸುವುದು.
4) ಜಿಲ್ಲಾ ಮಟ್ಟದಲ್ಲಿ ಉಪ ಕೃಷಿ ನಿರ್ದೇಶಕರು ಕೃಷಿ ಇಲಾಖಾ ಕಾರ್ಯಕ್ರಮಗಳಿಗೆ ಮತ್ತು ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿಗಳು, ಜಲಾನಯನ ಅಭಿವೃದ್ಧಿ ಇಲಾಖಾ ಕಾರ್ಯಕ್ರಮಗಳಿಗೆ ಜಿಲ್ಲಾ ಮಟ್ಟದ ಅನುಷ್ಠಾನ ಅಧಿಕಾರಿಗಳಾಗಿರುತ್ತಾರೆ, ಹಾಗೂ ಸಂಬಂಧಿಸಿದ ಇಲಾಖಾ ಕಾರ್ಯಕ್ರಮಗಳ ಬಿಲ್ಲುಗಳಿಗೆ ಮೇಲು ರುಜು ಮಾಡುವ ಅಧಿಕಾರ ಹೊಂದಿರುತ್ತಾರೆ.
5) ಜಿಲ್ಲಾ ಮಟ್ಟದಲ್ಲಿರುವ ಉಪ ಕೃಷಿ ನಿರ್ದೇಶಕರು ಮತ್ತು ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿಗಳು (ಉಪ ಕೃಷಿ ನಿರ್ದೇಶಕರ ವೃಂದ) ಜಿಲ್ಲಾ ಜಂಟಿ ಕೃಷಿ ನಿರ್ದೇಶಕರ ಆಡಳಿತ ವ್ಯಾಪ್ತಿಗೆ ಒಳಪಡುತ್ತಾರೆ.
6) ರಸಗೊಬ್ಬರ ನಿಯಂತ್ರಣ ಪ್ರಯೋಗಾಲಯ, ರಾಜ್ಯ ಪೀಡೆನಾಶಕ ಪರೀಕ್ಷಾ ಪ್ರಯೋಗಾಲಯ, ಮಣ್ಣು ಪರೀಕ್ಷಾ ಪ್ರಯೋಗಾಲಯ, ಪರತಂತ್ರ ಜೀವಿ ಪ್ರಯೋಗಾಲಯ, ಜೈವಿಕ ಗೊಬ್ಬರಗಳ ಪ್ರಯೋಗಾಲಯ (ರೈಜೋಬಿಯಂ) ಮತ್ತು ಜಿಲ್ಲಾ ಕೃಷಿ ತರಬೇತಿ ಕೇಂದ್ರಗಳಿಗೆ ಸಹಾಯಕ ಕೃಷಿ ನಿರ್ದೇಶಕರು ಮುಖ್ಯಸ್ಥರಾಗಿರುತ್ತಾರೆ. ಜಿಲ್ಲಾ ಕೃಷಿ ತರಬೇತಿ ಕೇಂದ್ರಗಳು ನೇರವಾಗಿ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರ ಕಾರ್ಯವ್ಯಾಪ್ತಿಯಡಿ ಕಾರ್ಯನಿರ್ವಹಿಸುವುದು.
7) Plant Quarantine Laboratory (ಸಸ್ಯರೋಗ ಶಾಸ್ತ್ರ) ಪ್ರಯೋಗಾಲಯಕ್ಕೆ ಉಪ ಕೃಷಿ ನಿರ್ದೇಶಕರು ಮುಖ್ಯಸ್ಥರಾಗಿರುತ್ತಾರೆ.
8) ಕೃಷಿ ಆಯುಕ್ತರ ಆವರಣದಲ್ಲಿ ಬರುವ ಎಲ್ಲಾ ಸ್ವತಂತ್ರ ಬಟವಾಡೆ ಅಧಿಕಾರಿಗಳನ್ನು ಒಂದುಗೂಡಿಸಿ, ಕೃಷಿ ನಿರ್ದೇಶಕರ ಸಿಬ್ಬಂದಿಯಲ್ಲಿ ವಿಲೀನಗೊಳಿಸಲಾಗಿದೆ. ಇನ್ನು ಮುಂದೆ ಕೃಷಿ ಆಯುಕ್ತರ ಕಾರ್ಯಾಲಯದ ಎಲ್ಲಾ ಅಧಿಕಾರಿ/ಸಿಬ್ಬಂದಿ ವರ್ಗದ ವೇತನ ಮತ್ತು ಇತರೆ ಭತ್ಯೆಗಳನ್ನು ತೆಗೆಯುವ ಮತ್ತು ವಿತರಿಸುವ ಅಧಿಕಾರವನ್ನು ಕೃಷಿ ನಿರ್ದೇಶಕರಿಗೆ ನೀಡಲಾಗಿದೆ.
9) ತಾಲ್ಲೂಕು, ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ವಿವಿಧ ಹಂತದ ಅಧಿಕಾರಿಗಳು ಅನುಬಂಧ-4ರಲ್ಲಿ ವಿವರಿಸಿರುವಂತೆ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ನಿರ್ವಹಿಸುವುದು.
10) ಕೃಷಿ ಮತ್ತು ಜಲಾನಯನ ಅಭಿವೃದ್ಧಿ ಇಲಾಖೆ (ಕೃಷಿ ವಿಭಾಗ)ದಲ್ಲಿ ಲಭ್ಯವಿರುವ ಯೋಜನೆ/ಯೋಜನೇತರ, ಜಿಲ್ಲಾ ಪಂಚಾಯತ್/ತಾಲ್ಲೂಕು ಪಂಚಾಯತ್/ರಾಜ್ಯ ವಲಯ/ಕೇಂದ್ರ ವಲಯದಲ್ಲಿ ಬರುವ ಎಲ್ಲಾ ವಿವಿಧ ವೃಂದಗಳ ಖಾಯಂ ಮತ್ತು

ತಾತ್ಕಾಲಿಕ ಹುದ್ದೆಗಳನ್ನು ಈ ಆದೇಶದಲ್ಲಿರುವ (ಅನುಬಂಧ-1 ರಿಂದ 3ರವರೆಗೆ) ವಿವಿಧ ಕಛೇರಿಗಳಿಗೆ ಮರು ವಿನ್ಯಾಸಗೊಳಿಸಿ, ಹುದ್ದೆಗಳನ್ನು ಮರು ಹಂಚಿಕೆ ಮಾಡುವ ಅಧಿಕಾರವನ್ನು ಕೃಷಿ ಆಯುಕ್ತರಿಗೆ ನೀಡಲಾಗಿದೆ.

11) ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿರುವ ಎಲ್ಲಾ ವೇತನ ಬಟವಾಡೆ ಮಾಡುವ ಅಧಿಕಾರಿಗಳಿಗೆ ಕೃಷಿ ಮತ್ತು ಜಲಾನಯನ ಅಭಿವೃದ್ಧಿ ಇಲಾಖೆಯಲ್ಲಿ ಹಾಲಿಯಿರುವ ಮುಖ್ಯ ಲೆಕ್ಕಶೀರ್ಷಿಕೆಗಳಾದ 2401 ಮತ್ತು 2402 ರಲ್ಲಿನ ಎಲ್ಲಾ ಉಪ ಲೆಕ್ಕ ಶೀರ್ಷಿಕೆಗಳು ಹಾಗೂ ಜಿಲ್ಲಾ ಪಂಚಾಯತ್/ತಾಲ್ಲೂಕು ಪಂಚಾಯತ್ ಲೆಕ್ಕ ಶೀರ್ಷಿಕೆಗಳಾದ 2435-00-101-0-27 (ಯೋಜನೇತರ) ಮತ್ತು 2435-00-101-0-61 (ಯೋಜನೇತರ)ಗಳನ್ನು ನಿರ್ವಹಿಸಲು ಆರ್ಥಿಕ ಅಧಿಕಾರವನ್ನು ನೀಡಲಾಗಿದೆ.

12) ಸರ್ಕಾರದ ಆದೇಶ ಸಂಖ್ಯೆ : ಎಹೆಚ್‌ಡಿ 130 ಕೃಪವ 99 ದಿನಾಂಕ : 30-05-2000ರಂತೆ ಶೇ. 5ರಡಿಯಲ್ಲಿ ರದ್ದಾದ ಹುದ್ದೆಗಳಲ್ಲಿ ಹಾಲಿ ಕಾರ್ಯನಿರ್ವಹಿಸುತ್ತಿರುವ ನೌಕರರನ್ನು ಅವರ ವಯೋನಿವೃತ್ತಿ/ಬಡ್ತಿ/ಇತರೆ ಕಾರಣಗಳಿಂದಾಗಿ ಹುದ್ದೆ ಖಾಲಿಯಾಗುವವರೆಗೆ ಮುಂದುವರೆಸಲಾಗಿದೆ.

ಈ ಸಂಬಂಧ ಉಂಟಾಗಲಿರುವ ಹುದ್ದೆಗಳ ಮರು ಹಂಚಿಕೆಯ ರಚನೆ (Structure) ಹಾಗೂ ಕರ್ತವ್ಯ ಮತ್ತು ಜವಾಬ್ದಾರಿಗಳ ಬಗ್ಗೆ ಅನುಬಂಧ-4ರಲ್ಲಿ ನೀಡಲಾಗಿದೆ.

ಈ ಆದೇಶದ ಪರಿಣಾಮವಾಗಿ ಉಂಟಾಗುವ ವರ್ಗಾವಣೆ ಆದೇಶಗಳನ್ನು ಪ್ರತ್ಯೇಕವಾಗಿ ಹೊರಡಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಮಂಜುನಾಥ ಪಾಟೀಲ್

ಸರ್ಕಾರದ ಅಧೀನ ಕಾರ್ಯದರ್ಶಿ

ಕೃಷಿ ಇಲಾಖೆ

ANNEXURE-1

DETAILS OF POSTS IN THE DIFFERENT OFFICES AND STAFFING PATTERN

Sl.No.	Name of the Office	No. of Offices	No. of Posts
1	Department of Agriculture, Head Office, Bangalore	1	469
2	Commissioner, Watershed Department, Bangalore	1	81
3	Plant Quarantine Lab, Bangalore	1	7
4	Joint Director of Agriculture	30	450
5	Deputy Director of Agriculture	30	700
6	District Watershed Development Officer	29	475
7	Assistant Director of Agriculture (Taluka)	176	2594
8	DISTRICT AGRICULTURE TRAINING INSTITUTE	23	398
9	WATERSHED TRAINING INSTITUTE	2	32
10	STATE PESTICIDE TESTING LABORATORY	6	96
11	FERTILIZER CONTROL LABORATORY	7	112
12	SEED TESTING LABORATORY	4	60
13	BIOCONTROL (PARASITIC) LABORATORY	6	72
14	BIOFERTILIZER (RHIZOBIUM) LABORATORY	3	36
15	PESTICIDE RESIDUE LABORATORY	1	12
16	STATE SOIL SURVEY LABORATORY	2	36
17	SOIL HEALTH LABORATORY	28	364
18	RAITHA SAMPARKA KENDRA (HOBLI)	747	5841
19	Agricultural Officer (Agricultural Farms)	52	156
	TOTAL	**1149**	**11991**

Manjunath Patil

Under Secretary to Government

Agriculture Department

ANNEXURE-II

DETAILS OF POSTS IN THE HEAD OFFICE (AGRICULTURE)

Sl.No.	Category of Posts	Cadre Strength
A	SECRETARIAT WING	
1	Additional Director of Agriculture	1
2	Joint Director of Agriculture	1
3	Assistant Director of Agriculture	3

4	Agriculture Officer	3
5	Stenographer	2
6	Sr. Typist/Typist	1
7	Sr. Driver/Driver	2
8	Group-D	4
	TOTAL	17
B	AGRICULTURE WING	
1	Commissioner	1
2	Director of Agriculture	1
3	Additional Director (Administration)	1
4	Additional Director of Agriculture	4
5	Joint Director of Agriculture	6
6	Deputy Director of Agriculture	14
7	Chief Accounts Officer	1
8	Law Officer	1
9	Executive Engineer	1
10	Assistant Director of Agriculture	10
11	Deputy Director of Statistics (FM)	1
12	Administrative Officer	2
13	Assistant Executive Engineer	2
14	Senior Programmer (Computer)	1
15	Agriculture Officer	59
16	Assistant Statistician	1
17	Chief Artist-cum-Audio Visual Specialist	1
18	Administrative Assistant	10
19	Assistant Engineer (Civil)	2
20	Superintendent	20
21	Librarian	1
22	Assistant Statistical Officer	3
23	Sr. Offset Printer	1
24	Statistical Inspector	2
25	First Division Assistant	60
26	Library Assistant	1
27	Stenographer	15
28	Sr. Computerist	6
29	Sr. Typist/Typist	10
30	Sr. Driver/Driver	29
31	Second Division Assistant	35
32	Printer	1
33	Binder	1
34	Attender	10
35	Group-D	102
	TOTAL	416

ABOLISHED BUT CONTINUED POSTS Head Office

Sl.No.	Category of Posts	Cadre Strength
1	Reporter	1
2	Sr. Artist cum Photographer	5
3	Agriculture Implement Supervisor	6
4	Binder	6
5	Printers	6
6	Compositor	7
7	Projector Operator	4
8	Artist	1
	TOTAL	36

Posts abolished under 5% cut as per G.O. No. AHD/130/KRUPAVA/99, Dated : 30-05-2000 but continued till the Posts become vacant on account of promotion, retirement etc., of the present incumbent working against each post otherwise

Manjunath Patil
Under Secretary to Government
Agriculture Department

ANNEXURE-3

CADRE STRENGTH IN THE HEAD OFFICE, WATERSHED DEVELOPMENT DEPARTMENT (Agriculture Wing)

Sl.No.	Category of Posts	Cadre Strength
1	Director	1
2	Joint Director of Agriculture	3
3	Deputy Director of Agriculture	2
4	Forest Specialist	1
5	Assistant Director of Agriculture	1
6	Agriculture Officer	10
7	Administrative Assistant	3
8	Superintendent	4
9	Draughtsman	4
10	First Division Assistant	13
11	Stenographer	8
12	Sr. Typist/Typist	2
13	Sr. Driver/Driver	7
14	Second Division Assistant	7
15	Group-D	15
	TOTAL	**81**

Manjunath Patil
Under Secretary to Government
Agriculture Department

ANNEXURE-III-A

30 DISTRICT JOINT DIRECTOR OF AGRICULTURE

Sl.No.	Name of the Post	No. of Posts
1	Joint Director of Agriculture	1
2	Assistant Director of Agriculture	1
3	Agricultural Officer	4
4	Superintendent	1
5	First Division Assistant	1
6	Stenographer	1
7	Sr. Typist/Typist	1
8	Sr. Driver/Driver	1
9	Group-D	4
	TOTAL	**15**

ANNEXURE-III-B

30 DISTRICT DEPUTY DIRECTOR OF AGRICULTURE (AGRICULTURE WING)

Sl.No.	Name of the Post	No. of Posts
1	Deputy Director of Agriculture	1
2	Assistant Director of Agriculture	1
3	Assistant Director of Agriculture (FW) 28 ಜಿಲ್ಲೆಗಳಿಗೆ ಮಾತ್ರ	1
4	Administrative Officer	1
5	Agriculture Officer	3
6	Superintendent	2

7	First Division Assistant	4
8	Asst. Statistical Officer 12 ಜಿಲ್ಲೆಗಳಿಗೆ ಮಾತ್ರ ಮಿತಿಗೊಳಿಸಿದೆ	1
9	Stenographer	1
10	Sr. Typist/Typist	2
11	Sr. Driver/Driver	1
12	Second Division Assistant	2
13	Group-D	4
	TOTAL	24

ANNEXURE-III - C

29 DISTRICT WATERSHED DEVELOPMENT OFFICER (WATERSHED WING)

Sl.No	Name of the Post	No. of Posts
1	Deputy Director of Agriculture (DWDO)	1
2	Assistant Director of Agriculture	1
3	Agriculture Officer	2
4	Administrative Assistant	1
5	Superintendent 11 ಜಿಲ್ಲೆಗಳಿಗೆ 2 ರಂತೆ ಹಾಗೂ 18 ಜಿಲ್ಲೆಗಳಿಗೆ 1 ರಂತೆ ಮಿತಿಗೊಳಿಸಿದೆ. *	2
6	Draughtsman	1
7	First Division Assistant	2
8	Senior Typist/Typist	1
9	Senior Driver/Driver	1
10	Second Division Assistant	1
11	Group D	4
	TOTAL	**17**

*Belgaum/Karwar/Haveri/Shimoga/Chikkamagalur/Hassan/Tumkur/Bellary/Gulbarga/Mandya/ Mysore Districts have Two Superintendent remaining Districts have one Superintendent.

ANNEXURE-III - D

176 ASSISTANT DIRECTOR OF AGRICULTURE (TALUKA)

Sl.No	Name of the Post	No. of Posts
1	Assistant Director of Agriculture	1
2	Agriculture Officer	2
3	Agriculture Officer (FW) 141 ತಾಲ್ಲೂಕುಗಳಿಗೆ ಮಾತ್ರ ಮಿತಿಗೊಳಿಸಿದೆ.	1
4	Assistant Agriculture Officer (FW) 03 ತಾಲ್ಲೂಕುಗಳಿಗೆ ಮಾತ್ರ ಮಿತಿಗೊಳಿಸಿದೆ.	1
5	Superintendent	1
6	First Division Assistant	1
7	Senior Typist/Typist	1
8	Senior Driver/Driver	1
9	Tracer 162 ತಾಲ್ಲೂಕುಗಳಿಗೆ ಮಾತ್ರ ಮಿತಿಗೊಳಿಸಿದೆ.	1
10	Second Division Assistant	3
11	Group D	3
	TOTAL	**16**

ANNEXURE-III - E

Raitha Samparka Kendra

Sl.No	Name of the Post	No. of Posts
1	Agriculture Officer	1
2	AAO / AA	1
3	2–3 ಗ್ರಾಮ ಪಂಚಾಯತಿಗೆ ಒಬ್ಬರಂತೆ	

4	ಒಟ್ಟು RSK ಗಳ ಸಂಖ್ಯೆ : 747	
5	ಒಟ್ಟು ಕೃಷಿ ಅಧಿಕಾರಿಗಳ ಹುದ್ದೆ :747	
6	ಒಟ್ಟು ಸಹಾಯಕ ಕೃಷಿ ಅಧಿಕಾರಿಗಳ ಹುದ್ದೆ : 2598	
7	ಸಹಾಯಕ ಕೃಷಿ ಅದಿಕಾರಿ (ಕೃಷಿ ಇಂಜಿನಿಯರಿಂಗ್ ಮತ್ತು ನೀರು ನಿರ್ವಹಣೆ-58)	
8	ಒಟ್ಟು ಕೃಷಿ ಸಹಾಯಕರ ಹುದ್ದೆ : 2438	
9	ಒಟ್ಟು ಹುದ್ದೆಗಳು - 5841	

ANNEXURE-III - F
DISTRICT AGRICULTURE TRAINING CENTRE - 23

Sl.No	Name of the Post	No. of Posts
1	Assistant Director of Agriculture	1
2	Assistant Director of Agriculture (FW)	1
3	Agriculture Officer	3
4	Superintendent	1
5	Mechanical Foreman 7 ಜಿಲ್ಲೆಗಳಿಗೆ ಮಾತ್ರ ಮಿತಿಗೊಳಿಸಿದೆ.	1
6	First Division Assistant	2
7	Senior Typist/Typist	1
8	Senior Driver/Driver	1
9	Second Division Assistant	1
10	Agriculture Implement Supervisor*	1
11	Cook	2
12	Group - D	3
	TOTAL	18

*Posts abolished under 5% cut as per G O No. AHD/130/KRUPVA/99, Dated: 30-05-2000 but continued till the Posts become vacant on account of promotion, retirement etc., of the present incumbent working against each post otherwise.

ANNEXURE-III - G
WATERSHED TRAINING CENTRE - 2
(Bijapur & Mysore)

Sl.No	Name of the Post	No. of Posts
1	Deputy Director of Agriculture	1
2	Assistant Director of Agriculture	1
3	Agriculture Officer	5
4	Superintendent	1
5	Draughtsman	1
6	First Division Assistant	2
7	Senior Typist/Typist	1
8	Senior Driver/Driver	1
9	Group D	3
	TOTAL	16

ANNEXURE-III - H
STATE PESTICIDE TESTING LABORATORY - 6
(Bangalore/Bellary/Dharawad/Shimoga/Gulbarga/Mandya)

Sl.No	Name of the Post	No. of Posts
1	Asst. Director of Agriculture	1
2	Agriculture Officer	6
3	First Division Assistant	1
4	Senior Typist/Typist	1
5	Laboratory Assistant	2
6	Laboratory Attender	3
7	Group D	2
	TOTAL	16

ANNEXURE-III - I

FERTILIZER CONTROL LABORATORY - 7
(Bangalore/ Dharawad/Gangavathi/Belthangadi/Mandya/Belagaum/Davanagere)

Sl.No	Name of the Post	No. of Posts
1	Assistant Director of Agriculture	1
2	Agriculture Officer	6
3	First Division Assistant	1
4	Senior Typist/Typist	1
5	Laboratory Assistant	2
6	Laboratory Attender	3
7	Group D	2
	TOTAL	**16**

ANNEXURE-III - J

SEED TESTING LABORATORY - 4
(Bangalore/Dharawad/Davanagere/Gangavathi)

Sl.No	Name of the Post	No. of Posts
1	Assistant Director of Agriculture	1
2	Agriculture Officer	6
3	First Division Assistant	1
4	Senior Typist/Typist	1
5	Laboratory Assistant	1
6	Laboratory Attender	3
7	Group D	2
	TOTAL	**15**

ANNEXURE-III - K

BIO-CONTROL (PARASITE) LABORATORY - 6
(Gangavathi/Bylahongala/Mandya/Gulbarga/Dharawad/Davanagere)

Sl.No	Name of the Post	No. of Posts
1	Assistant Director of Agriculture	1
2	Agriculture Officer	4
3	First Division Assistant	1
4	Senior Typist/Typist	1
5	Laboratory Assistant	1
6	Laboratory Attender	2
7	Group D	2
	TOTAL	**12**

ANNEXURE-III - L

BIOFERTILIZER (RHIZOBIUM) LABORATORY - 3
(Bangalore/Davanagere/Dharawad)

Sl. No	Name of the Post	No. of Posts
1	Assistant Director of Agriculture	1
2	Agriculture Officer	4
3	First Division Assistant	1
4	Senior Typist/Typist	1
5	Laboratory Assistant	1
6	Laboratory Attender	2
7	Group D	2
	TOTAL	**12**

ANNEXURE-III - M
PESTICIDE RESIDUAL LABORATORY - 1
(Bangalore)

Sl. No	Name of the Post	No. of Posts
1	Assistant Director of Agriculture	1
2	Agriculture Officer	4
3	First Division Assistant	1
4	Senior Typist/Typist	1
5	Laboratory Assistant	1
6	Laboratory Attender	2
7	Group D	2
	TOTAL	12

ANNEXURE-III - N
PLANT QUARANTINE LABORATORY - 1
(Bangalore)

Sl. No	Name of the Post	No. of Posts
1	Deputy Director of Agriculture	1
2	Agriculture Officer	2
3	First Division Assistant	1
4	Senior Typist/Typist	1
5	Laboratory Attender - 1	1
6	Group D	1
	TOTAL	7

ANNEXURE-III - O
STATE SOIL SURVEY LABORATORY - 2
(Bangalore/Dharawad)

Sl. No	Name of the Post	No. of Posts
1	Assistant Director of Agriculture	1
2	Agriculture Officer	4
3	First Division Assistant	1
4	Senior Typist/Typist	1
5	Agriculture Assistant	6
6	Laboratory Assistant	1
7	Laboratory Attender	2
8	Group D	2
	TOTAL	18

ANNEXURE-III - P
SOIL HEALTH LABORATORY - 28
(Except Bangalore Urban & Yadagir Dist.)

Sl. No	Name of the Post	No. of Posts
1	Assistant Director of Agriculture	1
2	Agriculture Officer	4
3	First Division Assistant	1
4	Senior Typist/Typist	1
5	Laboratory Assistant	2
6	Laboratory Attender	2
7	Group D	2
	TOTAL	13

ANNEXURE-III - Q		
SEED FARMS, ADC, SCHOOL - 52		
Sl No	Name of the Post	No of Posts
1	Agriculture Officer	1
2	Group D	2
	TOTAL	3

Manjunath Patil
Under Secretary to Government
Agriculture Department

ANNEXURE-4

DISTRICT LEVEL

(I) JOINT DIRECTOR OF AGRICULTURE IN CHARGE OF A DISTRICT

He is the administrative and technical head of the Agriculture & Watershed Development Department at the District level. He is the link between the Zilla Panchayath and the Department of Agriculture & Department of Watershed Development at the State level and shall be the representative of the State Department of Agriculture & Department of Watershed Development at District level.

His responsibilities shall include:

1. Planning and implementing Agriculture and Watershed development programmes in the district in accordance with the government policies and that of the Zilla Panchayath.
2. Supervising and guiding the Deputy Directors of Agriculture at the District level and through them over see the work of Assistant Directors of Agriculture at Taluk level..
3. Tour at least 10 days in a month.
4. Organizing annual and seasonal programme planning workshops involving all the departmental officers at the District level as well as University of Agriculture Sciences Scientists & the other field technology development line departments in the district and chalk out the programmes season-wise and fix up taluk-wise and crop-wise targets. These programme planning workshops should be conducted under the aegis of the Department.
5. Ensuring that Deputy Director of Agriculture and Assistant Directors of Agriculture at Taluk level workout the input requirements (Seeds-cropwise and variety-wise; fertilizers and plant protection chemicals typewise) for each season taluk-wise; take measures to ensure their availability in time by liaising with the State level authorities and the concerned input supply agencies.
6. Ensuring that the Deputy Director of Agriculture and Assistant Directors of Agriculture work out credit requirements, taluk-wise and season-wise and take steps to ensure timely availability of credit in co-ordination with the financial institutions and the co-operatives.
7. Monitoring of supply of inputs and credit and initiate corrective measures wherever necessary in consultations with the concerned agencies.
8. Monitoring the progress in implementation of all agriculture development programmes and submit (i) monthly progress report to the Director of Agriculture, Director of watershed Development and Zilla panchayat as per the prescribed norms and (ii) take corrective measures wherever necessary.
9. Shall supervise and monitor the activities of the District Agriculture Training Centres in the district.
10. Perform the statutory functions as required under various acts such as Seeds Act, Insecticides Act, Fertilizer Control order etc, and monitor the work done by the Vigilance / Monitoring and Evaluation Team and Assistant Directors of Agriculture in the regard.
11. He shall be responsible for dissemination of information for various mass media.
12. Technical and Administrative inspection of the offices of Deputy Director of Agriculture, Deputy Director of Agriculture (District Watershed Development Officer). Taluk Assistant Directors of Agriculture, Seed Farms, Agriculture Schools, Agriculture Development Centres, Soil Health laboratories, District Training centres and other establishments if any and also watershed.
13. Identifying the staff for appropriate training programmes periodically for the in-service personnel and effective implementation of the same.
14. Ensure organization of training programmes for farmers in time and also coordination of both the departments staff.
15. Ensuring preparation of extension literature for the use of extension personnel as well as farmers.
16. Inspection of at least 10% of the demonstrations 2% of trials laid out in the district.
17. Facilitating the participation of the department in the district level agricultural exhibitions & fairs etc.

18. Preparing long term agricultural development plans including five year plans as well as annual development plans for the district in consultation with the Zilla Panchayath.
19. Shall supervise preparation and implementation of watershed development plans and watershed development measures as part of rainfed agriculture through Deputy Director of Agriculture (District Watershed Development Officer) and Assistant Directors of Agriculture at Taluk level.
20. Ensuring collection of agricultural statistics in co-ordination with the State statistical department particularly in respect of area production and yield of each crop under rainfed and irrigated conditions in each region, area coverage under fertilizers, Plant protection measures, high yielding varieties, consumption of fertilizers per unit area of different crops, etc.
21. Ensure proper conduct of crop cutting experiments in co-ordination with the statistical department.
22. Arranging farm management studies for important crops of the district to arrive at the cost of production to suggest support prices for agricultural commodities.
23. Guide soil testing programmes in the district, ensure inspection of at least 5% of follow up programmes, ensure preparation of soil maps and soil fertility maps of each taluk.
24. Approve watershed development plans submitted by the Deputy Director of Agriculture (District Watershed Development Officer), inspect the works/activities in all the taluks.
25. Preparation of plant protection programmes for endemic areas, integrated pest management measures as well as plans to tackle epidemics.
26. Preparation of a shelf of contingency cropping plans for the different agro-climatic regions of the district for the possible or probable weather aberrations that may occur in the principal cropping seasons.
27. Approve the four programme and diaries of the Deputy Directors of Agriculture and Assistant Directors of Agriculture of his office.
28. Initiate and write the annual CRs of the Deputy Directors and all his direct sub-ordinate staff as per norms; ensure that CRs of sub-ordinate staff are written in time by the concerned officers.
29. Ensure auditing of all his sub-ordinate offices at least once in a year.
13	ಸಹಾಯಕ ಬಾಣಸಿಗ	2
	ಒಟ್ಟು	**61**

ವರ್ಷವಾರು ನೇಮಕ ಮಾಡಬೇಕಾದ ಸಿಬ್ಬಂದಿ ವಿವರ

ಕ್ರ. ಸಂ.	ಸಿಬ್ಬಂದಿ ವಿವರ	1ನೇ ವರ್ಷ	2ನೇ ವರ್ಷ	3ನೇ ವರ್ಷ	4ನೇ ವರ್ಷ
1	2	3	4	5	6
1	ಪ್ರಿನ್ಸಿಪಾಲರು	1	–	–	–
2	ಪ್ರಾಧ್ಯಾಪಕರು	2	2	2	1
3	ಸಹಾಯಕ ಪ್ರಾಧ್ಯಾಪಕರು	4	4	4	4
4	ಉಪನ್ಯಾಸಕರು	19	12	10	12
5	ಫೋರಮನ್	2	1	1	1
6	ಇನ್‌ಸ್ಟ್ರಕ್ಟರ್	2	2	2	2
7	ಸಹಾಯಕ ಇನ್‌ಸ್ಟ್ರಕ್ಟರ್	3	3	2	2
8	ಮೆಕ್ಯಾನಿಕ್	4	3	3	3
9	ಹೆಲ್ಪರ್	10	9	4	7

10	ಡ್ರಾಫ್ಟ್‌ಮ್ಯಾನ್	–	1	–	–
11	ಸಿಸ್ಟಂ ಅನಾಲಿಸ್ಟ್, (ಎಐಸಿಟಿಇ ವೇತನಶ್ರೇಣಿ)	1	–	–	–
12	ಪ್ರೋಗ್ರಾಮರ್	1	–	–	–
13	ಕಂಪ್ಯೂಟರ್ ಆಪರೇಟರ್	1	1	–	–
14	ಪ್ಲೇಸ್ಮೆಂಟ್ ಮತ್ತು ಟ್ರೈನಿಂಗ್ ಅಧಿಕಾರಿ	–	1	–	–
15	ಸಹಾಯಕ ಆಡಳಿತಾಧಿಕಾರಿ	1	–	–	–
16	ರಿಜಿಸ್ಟ್ರಾರ್	1	1	–	–
17	ಗ್ರಂಥಪಾಲಕರು (ಎಐಸಿಟಿಇ ವೇತನಶ್ರೇಣಿ)	1	–	–	–
18	ಸಹಾಯಕ ಗ್ರಂಥಪಾಲಕರು	1	1	–	–
19	ಸಹಾಯಕ ದೈಹಿಕ ಶಿಕ್ಷಣ ನಿರ್ದೇಶಕರು (ಎಐಸಿಟಿಇ ವೇತನಶ್ರೇಣಿ)	1	–	–	–
20	ಅಧೀಕ್ಷಕರು	2	2	1	–
21	ಪ್ರಥಮ ದರ್ಜೆ ಸಹಾಯಕರು	4	3	3	2
22	ದ್ವಿತೀಯ ದರ್ಜೆ ಸಹಾಯಕರು	4	4	4	2
23	ಶೀಘ್ರಲಿಪಿಗಾರರು	1	–	–	–
24	ಬೆರಳಚ್ಚುಗಾರರು	1	1	–	–
25	ವಾಹನ ಚಾಲಕರು	2	1	2	–
26	ಕಛೇರಿ ಸಹಾಯಕರು (ಅಟೆಂಡರು)	1	1	–	–
27	ಸೇವಕರು	5	3	2	2
28	ಬಾಣಸಿಗ	1	1	–	–
29	ಸಹಾಯಕ ಬಾಣಸಿಗ	1	1	–	–
ಒಟ್ಟು		**77**	**58**	**40**	**38**

ಐ.ಎಫ್. ಮಾಗಿ,
ವಿಶೇಷಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ಯೋಜನೆ).

ಪಿ.ಆರ್.ನಂ. 2113

ಇಂಧನ ಸಚಿವಾಲಯ

ವಿಷಯ : ಮೆ॥ JSW ಸ್ಟೀಲ್ ಲಿಮಿಟೆಡ್ ಮತ್ತು ಮೆ॥ JSW ಎನರ್ಜಿ ಲಿಮಿಟೆಡ್ ಸಂಸ್ಥೆಗಳ ವಿದ್ಯುತ್ ತೆರಿಗೆಗೆ ಸಂಬಂಧಿಸಿದಂತೆ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ ಪ್ರಕರಣ ಸಂಖ್ಯೆ: O.P. 33/2010 ಮತ್ತು O.P. 34/2010ಮೇಲೆ ನೀಡಿರುವ ತೀರ್ಪಿನ ಮೇಲೆ ವಿದ್ಯುತ್ ಮೇಲ್ಮನವಿ ಪ್ರಾಧಿಕಾರ, ನವದೆಹಲಿ ಇವರಲ್ಲಿ ಮೇಲ್ಮನವಿ ಸಲ್ಲಿಸುವ ಬಗ್ಗೆ.

ಓದಲಾಗಿದೆ :
1. ಕಾನೂನು ಕೋಶದ ಮುಖ್ಯಸ್ಥರ ಆದೇಶ ಸಂಖ್ಯೆ: ಇಎನ್ 102 ಇಬಿಎಸ್ 2010, ದಿನಾಂಕ: 03–08–2011 (O.P. 34/2010)
2. ಕಾನೂನು ಕೋಶದ ಮುಖ್ಯಸ್ಥರ ಆದೇಶ ಸಂಖ್ಯೆ: ಇಎನ್ 103 ಇಬಿಎಸ್ 2010, ದಿನಾಂಕ: 03–08–2011 (O.P. 33/2010)
3. ಮುಖ್ಯ ವಿದ್ಯುತ್ ಪರಿವೀಕ್ಷಕರ ಪತ್ರ ಸಂಖ್ಯೆ:ಮುವಿಪ/ಸಿಸ3/ಹೆ.ಅ.ಅ./15072/11–12, ದಿನಾಂಕ: 24–08–2011.

ಪ್ರಸ್ತಾವನೆ:

ಮೇಲೆ ಓದಲಾದ ಉಲ್ಲೇಖ (1) ಮತ್ತು (2)ರ ಸರ್ಕಾರಿ ಆದೇಶಗಳಲ್ಲಿ ಕಾನೂನು ಕೋಶದ ಮುಖ್ಯಸ್ಥರು ಶ್ರೀ ವಿ.ಎನ್. ರಘುಪತಿ, ವಕೀಲರು ಇವರನ್ನು ಅಧಿಕೃತಗೊಳಿಸಿ ಆದೇಶಿಸಿರುತ್ತಾರೆ. ಅದರಂತೆ, ಸದರಿ ಪ್ರಕರಣಗಳಿಗೆ ವಿದ್ಯುತ್ ಮೇಲ್ಮನವಿ ಪ್ರಾಧಿಕಾರ, ನವದೆಹಲಿ ಇಲ್ಲಿ ಮೇಲ್ಮನವಿ ಸಲ್ಲಿಸಲು ಸರ್ಕಾರವು ನಿರ್ಧರಿಸಿದೆ.

ಮೇಲೆ ಓದಲಾದ ಉಲ್ಲೇಖ (3)ರ ಮುಖ್ಯ ವಿದ್ಯುತ್ ಪರಿವೀಕ್ಷಕರ ಪತ್ರದಲ್ಲಿ, ಮೆ॥ JSW ಸ್ಟೀಲ್ ಲಿಮಿಟೆಡ್ ಮತ್ತು ಮೆ॥ JSW ಎನರ್ಜಿ ಲಿಮಿಟೆಡ್ ಸಂಸ್ಥೆಗಳು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದಲ್ಲಿ ಸಲ್ಲಿಸಿದ ಅರ್ಜಿ ಸಂಖ್ಯೆ: O.P.No: 33/2010 & O.P. 34/2010 ರಲ್ಲಿ ನೀಡಿದ್ದ ತೀರ್ಮಾನದ ಮೇಲೆ ವಿದ್ಯುತ್ ಮೇಲ್ಮನವಿ ಪ್ರಾಧಿಕಾರ, ನವದೆಹಲಿ ಇಲ್ಲಿ ಮೇಲ್ಮನವಿ ಸಲ್ಲಿಸಲು ಸರ್ಕಾರ ನಿರ್ಧರಿಸಿರುವುದರಿಂದ, ಈ ಕುರಿತಂತೆ ಮೇಲ್ಮನವಿ ನ್ಯಾಯಾಲಯ ಶುಲ್ಕ ವೆಚ್ಚ ಎರಡೂ ಪ್ರಕರಣಗಳಿಗೂ ಸೇರಿ ಸುಮಾರು ರೂ. 2.25 ಲಕ್ಷಗಳನ್ನು ಭರಿಸಬೇಕಾಗಿರುತ್ತದೆ. 2011–12ನೇ ಸಾಲಿಗೆ ವಿದ್ಯುತ್ ಪರಿವೀಕ್ಷಣಾ ಇಲಾಖಾ ಲೆಕ್ಕಶೀರ್ಷಿಕೆ "ಯೋಜನೇತರ–2045–00–103–0–01–ಇದರ ಉಪ ಶೀರ್ಷಿಕೆ 051–ಸಾಮಾನ್ಯ ವೆಚ್ಚ" ಅಡಿಯಲ್ಲಿ ಒದಗಿಸಲಾದ ಅನುದಾನವನ್ನು ಆರ್ಥಿಕ ವರ್ಷದಲ್ಲಿ ವೆಚ್ಚ ಮಾಡಲು ಅಧೀನ ಕಛೇರಿಗಳಿಗೆ ಈಗಾಗಲೇ ಹಂಚಿಕೆಗೊಳಿಸಿರುವುದರಿಂದ, ಅನುದಾನದ ಕೊರತೆ ಉಂಟಾಗಿದ್ದು, ಹಾಲಿ ಇಲಾಖೆಗೆ ಲೆಕ್ಕಶೀರ್ಷಿಕೆ "ಯೋಜನೇತರ–2045–00–103–0–02–ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಮತ್ತು ಇತರೆ ಲೈಸನ್ಸ್‌ದಾರರಿಗೆ ಸೋಡಿ ಪಾವತಿ–106–ಸಹಾಯಧನ" ಅಡಿಯಲ್ಲಿ ರೂ. 449.95 ಲಕ್ಷಗಳ ಅನುದಾನವನ್ನು ಒದಗಿಸಲಾಗಿದ್ದು, ಸದರಿ ಅನುದಾನದಡಿಯಲ್ಲಿ ಯಾವುದೇ ವೆಚ್ಚ ಉಂಟಾಗಿಲ್ಲವೆಂದು ತಿಳಿಸಿ, ಇದರಿಂದ ರೂ. 2.25 ಲಕ್ಷಗಳ ಮೊತ್ತವನ್ನು ಮರು ಹೊಂದಾಣಿಕೆಗೊಳಿಸಿ, ಮೇಲೆ ತಿಳಿಸಿದ ಪ್ರಕರಣಗಳಿಗೆ ನ್ಯಾಯಾಲಯದ ಶುಲ್ಕವನ್ನು ಭರಿಸಲು ಮಂಜೂರಾತಿ ನೀಡುವಂತೆ ಸರ್ಕಾರವನ್ನು ಕೋರಿರುತ್ತಾರೆ. ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಇಎನ್ 103 ಇಬಿಎಸ್ 2010, ಬೆಂಗಳೂರು, ದಿನಾಂಕ : 24-08-2011

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಮೆ॥ JSW ಸ್ಟೀಲ್ ಲಿಮಿಟೆಡ್ ಮತ್ತು ಮೆ॥ JSW ಎನರ್ಜಿ ಲಿಮಿಟೆಡ್ ಸಂಸ್ಥೆಗಳು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದಲ್ಲಿ ಸಲ್ಲಿಸಿದ ಅರ್ಜಿ ಸಂಖ್ಯೆ: O.P.No: 33/2010 & O.P. 34/2010 ರಲ್ಲಿ ನೀಡಿದ್ದ ತೀರ್ಮಾನದ ಮೇಲೆ ವಿದ್ಯುತ್ ಮೇಲ್ಮನವಿ ಪ್ರಾಧಿಕಾರ, ನವದೆಹಲಿ ಇಲ್ಲಿ ಮೇಲ್ಮನವಿ ಸಲ್ಲಿಸಲು ಒಟ್ಟು ನ್ಯಾಯಾಲಯ ಶುಲ್ಕ ವೆಚ್ಚ ಸುಮಾರು ರೂ. 2.25 ಲಕ್ಷಗಳನ್ನು ಮಂಜೂರು ಮಾಡಲಾಗಿದೆ.

ಸದರಿ ಮೊತ್ತವನ್ನು ಲೆಕ್ಕಶೀರ್ಷಿಕೆ "ಯೋಜನೇತರ-2045-00-103-0-01-ಇದರ ಉಪಶೀರ್ಷಿಕೆ 051-ಸಾಮಾನ್ಯ ವೆಚ್ಚ" ದಿಂದ ಭರಿಸಬೇಕಾಗಿದ್ದು, ಅನುದಾನದ ಕೊರತೆಯಿಂದ, ಸದರಿ ಮೊತ್ತವನ್ನು ಲೆಕ್ಕಶೀರ್ಷಿಕೆ "ಯೋಜನೇತರ-2045-00-103-0-02-ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಮತ್ತು ಇತರೆ ಲೈಸನ್ಸ್‌ದಾರರಿಗೆ ಸೋಡಿ ಪಾವತಿ-106-ಸಹಾಯಧನ" ಅಡಿಯಲ್ಲಿ ಒದಗಿಸಲಾಗಿರುವ ರೂ. 449.95 ಲಕ್ಷಗಳ ಅನುದಾನದಿಂದ ರೂ. 2.25 ಲಕ್ಷ (ಎರಡು ಲಕ್ಷದ ಇಪ್ಪತ್ತೈದು ಸಾವಿರ ರೂಪಾಯಿಗಳು ಮಾತ್ರ)ಗಳನ್ನು ಮರು ಹೊಂದಾಣಿಕೆ ಮಾಡಿ ಭರಿಸಲು ಅನುಮತಿಸಿದೆ. ಸಂಬಂಧಿಸಿದ ಮರು ಹೊಂದಾಣಿಕೆ ಆದೇಶವನ್ನು ಅನುಬಂಧದಲ್ಲಿ ನೀಡಲಾಗಿದೆ.

ಈ ಆದೇಶವನ್ನು ಸರ್ಕಾರದ ಕಾರ್ಯದರ್ಶಿಗಳಿಗೆ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 96, ದಿನಾಂಕ: 10-07-1996 ಮತ್ತು ಎಫ್‌ಡಿ 1 ಟಿಎಫ್‌ಪಿ 2003, ದಿನಾಂಕ: 12-06-2003ರ ಪ್ರಕಾರ ಪ್ರದತ್ತವಾದ ಅಧಿಕಾರದಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಸುಜಾತಮ್ಮ

ಪೀಠಾಧಿಕಾರಿ

ಇಂಧನ ಇಲಾಖೆ

ANNEXURE

K.F.C. FORM 22-A (ART-108)

Re-appropriation Statement to accompany for sanction to expenditure not provided for in the Budget or additional allotments

Grant No. 24-Energy (Rs. In lakhs)

Heads of estimate proposed to be increased					Heads of estimate proposed to be reduced				
Major, minor sub & Detailed Heads of Budget (The same details must be given as in the printed Budget Estimate)	Amount as in the sanctioned Budget Esti mate 2011-2012	Actual Expenditure	Probable Expenditure during remaining period of year	Amount of Addl. Allotment required 2011-2012	Amount as in the sanctioned Budget estimate 2011-2012	Actual Expenditure	Probable Expenditure during remaining period of year	Amount available for reappropriation 2011-2012	Remarks (Here state fully the reasons for exceeding the allot. And for anticipating savings.
2045-00-103-0-01 ಯೋಜನೇತರ 103 ವಸೂಲಾತಿ ವೆಚ್ಚ- ವಿದ್ಯುಚ್ಛಕ್ತಿ ಶುಲ್ಕ 01 ವಿದ್ಯುತ್ ಪರಿವೀಕ್ಷಣಾಲಯ 051-ಸಾಮಾನ್ಯ ವೆಚ್ಚ	12.50	1.22	13.53	2.25					ಮೆ॥ JSW ಸ್ಟೀಲ್ ಲಿಮಿಟೆಡ್ ಮತ್ತು ಮೆ॥ JSW ಎನರ್ಜಿ ಲಿಮಿಟೆಡ್ ಸಂಸ್ಥೆಗಳು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದಲ್ಲಿ ಸಲ್ಲಿಸಿದ ಅರ್ಜಿ ಸಂಖ್ಯೆ: O.P. No:33/2010 & O.P.34/2010 ರಲ್ಲಿ ನೀಡಿದ್ದ ತೀರ್ಮಾನದ ಮೇಲೆ ವಿದ್ಯುತ್ ಮೇಲ್ಮನವಿ ಪ್ರಾಧಿಕಾರ, ನವದೆಹಲಿ ಇಲ್ಲಿ ಮೇಲ್ಮನವಿ ಸಲ್ಲಿಸಲು ಒಟ್ಟು ನ್ಯಾಯಾಲಯ ಶುಲ್ಕ ವೆಚ್ಚ ಸುಮಾರು ರೂ. 2.25 ಲಕ್ಷಗಳನ್ನು 2011-12ನೇ ಸಾಲಿನ ಆರ್ಥಿಕ ವರ್ಷದಲ್ಲಿ ಮರು ಹೊಂದಾಣಿಕೆ ಮೂಲಕ ಭರಿಸಲಾಗಿದೆ.
ಒಟ್ಟು	12.50	1.22	13.53	2.25					

2045–00–103–0–02 ಯೋಜನೇತರ 02 ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಮತ್ತು ಇತರೆ ಲೈಸನ್ಸ್‌ದಾರರಿಗೆ ಸೋಡಿ ಪಾವತಿ–106–ಸಹಾಯಧನ					449.95		447.70	2.25	ನಿರೀಕ್ಷಿತ ಉಳಿತಾಯ
ಒಟ್ಟು					449.95		447.70	2.25	

ಪಿ.ಆರ್. 2114

ಸುಜಾತಮ್ಮ
ಪೀಠಾಧಿಕಾರಿ
ಇಂಧನ ಇಲಾಖೆ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ : ಲೇ–ಸೆಕ್ರೆಟರಿ, ಪತ್ರಾಂಕಿತ ವ್ಯವಸ್ಥಾಪಕರು, ಪತ್ರಾಂಕಿತ ಸಹಾಯಕರು ಹುದ್ದೆಗಳ ಪದನಾಮಗಳನ್ನು ಸಹಾಯಕ ಆಡಳಿತ ಅಧಿಕಾರಿಯೆಂದು ಮರುಪದನಾಮಗೊಳಿಸುವ ಬಗ್ಗೆ ಹಾಗೂ ಹಿರಿಯ ಪ್ರಯೋಗಶಾಲಾ ತಂತ್ರಜ್ಞರ ಮತ್ತು ಕಿರಿಯ ಪ್ರಯೋಗಶಾಲಾ ತಂತ್ರಜ್ಞರ ಹುದ್ದೆಗಳನ್ನು ಹಿರಿಯ ವೈದ್ಯಕೀಯ ಪ್ರಯೋಗಶಾಲಾ ಟೆಕ್ನಾಲಜಿಸ್ಟ್, ಕಿರಿಯ ಪ್ರಯೋಗಶಾಲಾ ಟೆಕ್ನಾಲಜಿಸ್ಟ್ ಎಂದು ಮರುಪದನಾಮಗೊಳಿಸುವ ಬಗ್ಗೆ.

ಓದಲಾಗಿದೆ : ನಿರ್ದೇಶಕರು, ಆಯುಷ್ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ:ಆಯುಷ್/35/ಸಿಬ್ಬಂದಿ(5)/2011–12, ದಿನಾಂಕ: 12–07–2011.

ಪ್ರಸ್ತಾವನೆ:

ಮೇಲೆ ಓದಲಾದ ಪತ್ರದಲ್ಲಿ, ಆಯುಷ್ ಇಲಾಖೆಯಲ್ಲಿ ಸರ್ಕಾರಿ ಆಯುಷ್ ಮಹಾವಿದ್ಯಾಲಯಗಳಿಗೆ ಹೊಂದಿಕೊಂಡಿರುವ ಆಸ್ಪತ್ರೆಗಳಲ್ಲಿ ಹಾಗೂ ಜಿಲ್ಲಾ ಆಯುಷ್ ಕಛೇರಿಗಳಲ್ಲಿ ಲೇ–ಸೆಕ್ರೆಟರಿ, ಪತ್ರಾಂಕಿತ ಸಹಾಯಕರು, ಆಯುಷ್ ನಿರ್ದೇಶನಾಲಯದಲ್ಲಿ ಪತ್ರಾಂಕಿತ ವ್ಯವಸ್ಥಾಪಕರ ಹುದ್ದೆಗಳು ಇದ್ದು, ಈ ಹುದ್ದೆಗಳ ವೇತನ ಶ್ರೇಣಿಯು ₹ 10800–20025 ಇರುತ್ತದೆ. ಲೇ–ಸೆಕ್ರೆಟರಿ ಹುದ್ದೆಗೆ ಪದೋನ್ನತಿ ನೀಡಲು ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಅಧೀಕ್ಷಕರು ಹುದ್ದೆಯಲ್ಲಿ ಕನಿಷ್ಠ ಮೂರು ವರ್ಷ ಸೇವೆ ಸಲ್ಲಿಸಿರುವವರಿಗೆ ಪದೋನ್ನತಿ ನೀಡಲು ಅವಕಾಶ ನೀಡಲಾಗಿದೆ. ಲೇ–ಸೆಕ್ರೆಟರಿ ಹುದ್ದೆಗೆ ಪದೋನ್ನತಿ ನೀಡಿ ಮೇಲೆ ತಿಳಿಸಿರುವ ಎಲ್ಲಾ ಹುದ್ದೆಗಳಿಗೆ ನೇಮಕಾತಿ ಮಾಡಲಾಗಿರುತ್ತದೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಈ ಹಿಂದೆ ಇದ್ದ ಲೇ–ಸೆಕ್ರೆಟರಿ ಹಾಗೂ ಪತ್ರಾಂಕಿತ ಸಹಾಯಕರ ಹುದ್ದೆಗಳನ್ನು ಸರ್ಕಾರದ ಆದೇಶ ಸಂಖ್ಯೆ: ಆಕುಕ 313 ಹೆಚ್‌ಎಸ್‌ಎಂ 2006, ದಿನಾಂಕ: 22–11–2006 ರಲ್ಲಿ ಸಹಾಯಕ ಆಡಳಿತಾಧಿಕಾರಿಗಳು ಎಂದು ಮರುಪದನಾಮಗೊಳಿಸಿದೆ.

ಲೇ–ಸೆಕ್ರೆಟರಿ, ಪತ್ರಾಂಕಿತ ಸಹಾಯಕರು, ಪತ್ರಾಂಕಿತ ವ್ಯವಸ್ಥಾಪಕರ ಹುದ್ದೆಗಳಿಗೆ ಹೊಸದಾಗಿ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಪದೋನ್ನತಿಗೆ ಅಧೀಕ್ಷಕರ ಹುದ್ದೆಯಿಂದ ಪದೋನ್ನತಿ ನೀಡಲು ಅವಕಾಶ ಕಲ್ಪಿಸಲಾಗಿರುವುದರಿಂದ, ಆಯುಷ್ ಇಲಾಖೆಯಲ್ಲೂ ಸಹ ವೇತನ ಶ್ರೇಣಿ ₹ 10800–20025 ಹೊಂದಿರುವ ಲೇ–ಸೆಕ್ರೆಟರಿ, ಪತ್ರಾಂಕಿತ ಸಹಾಯಕರು, ಪತ್ರಾಂಕಿತ ವ್ಯವಸ್ಥಾಪಕರ ಹುದ್ದೆಗಳನ್ನು ಮರುಪದನಾಮಗೊಳಿಸಿ ಸಹಾಯಕ ಆಡಳಿತ ಅಧಿಕಾರಿ ಎಂದು ಆದೇಶ ಹೊರಡಿಸುವಂತೆ ಹಾಗೂ ಇದರಿಂದ ಸರ್ಕಾರಕ್ಕೆ ಯಾವುದೇ ಆರ್ಥಿಕ ಹೊರೆ ಇರುವುದಿಲ್ಲವೆಂದು ಆಯುಷ್ ನಿರ್ದೇಶಕರು ತಿಳಿಸಿರುತ್ತಾರೆ.

ಮುಂದುವರೆದು, ಆಯುಷ್ ಇಲಾಖೆಯಲ್ಲಿ ಹಿರಿಯ ಮತ್ತು ಕಿರಿಯ ಪ್ರಯೋಗಶಾಲಾ ತಂತ್ರಜ್ಞರ ಹುದ್ದೆಗಳಿದ್ದು, ಕ್ರಮವಾಗಿ ವೇತನ ಶ್ರೇಣಿ ₹ 8000–14800 ಮತ್ತು ₹ 7275–13350 ಇರುತ್ತದೆ. ಈ ಹುದ್ದೆಗಳನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳಿಂದ ನಿಯೋಜನೆ ಮೇಲೆ ತುಂಬಲು ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಅವಕಾಶ ಕಲ್ಪಿಸಲಾಗಿದೆ. ಸದರಿ ಹುದ್ದೆಗಳನ್ನು ಸರ್ಕಾರದ ಆದೇಶ ಸಂಖ್ಯೆ:ಆಕುಕ 287 ಸಿಜಿಇ 2005, ದಿನಾಂಕ: 27–09–2005 ರಲ್ಲಿ ಹಿರಿಯ ವೈದ್ಯಕೀಯ ಪ್ರಯೋಗಶಾಲಾ ಟೆಕ್ನಾಲಜಿಸ್ಟ್ ಮತ್ತು ಕಿರಿಯ ವೈದ್ಯಕೀಯ ಪ್ರಯೋಗಶಾಲಾ ಟೆಕ್ನಾಲಜಿಸ್ಟ್ ಎಂದು ಮರುಪದನಾಮಗೊಳಿಸಿ ಆದೇಶಿಸಿರುವುದರಿಂದ, ಆಯುಷ್ ಇಲಾಖೆಯಲ್ಲಿರುವ ಹಿರಿಯ ಮತ್ತು ಕಿರಿಯ ಪ್ರಯೋಗಶಾಲಾ ತಂತ್ರಜ್ಞರ ಹುದ್ದೆಗಳ ಪದನಾಮವನ್ನು ಹಿರಿಯ ವೈದ್ಯಕೀಯ ಪ್ರಯೋಗಶಾಲಾ ಟೆಕ್ನಾಲಜಿಸ್ಟ್ ಮತ್ತು ಕಿರಿಯ ವೈದ್ಯಕೀಯ ಪ್ರಯೋಗಶಾಲಾ ಟೆಕ್ನಾಲಜಿಸ್ಟ್ ಎಂದು ಮರುಪದನಾಮಗೊಳಿಸಿ ಆದೇಶ ಹೊರಡಿಸುವಂತೆ ಹಾಗೂ ಇದರಿಂದ ಸರ್ಕಾರಕ್ಕೆ ಯಾವುದೇ ಆರ್ಥಿಕ ಹೊರೆ ಇರುವುದಿಲ್ಲವೆಂದು ಆಯುಷ್ ನಿರ್ದೇಶಕರು ತಿಳಿಸಿರುತ್ತಾರೆ

ಸರ್ಕಾರವು ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಆಕುಕ 218 ಪಿಐಎಂ 2008, ಬೆಂಗಳೂರು, ದಿನಾಂಕ : 28–07–2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಆಯುಷ್ ಇಲಾಖೆಯಲ್ಲಿನ ಲೇ–ಸೆಕ್ರೆಟರಿ, ಪತ್ರಾಂಕಿತ ಸಹಾಯಕರು, ಪತ್ರಾಂಕಿತ ವ್ಯವಸ್ಥಾಪಕರು ಹುದ್ದೆಗಳ ಪದನಾಮವನ್ನು ಸಹಾಯಕ ಆಡಳಿತ ಅಧಿಕಾರಿ ಎಂದು ಹಾಗೂ ಹಿರಿಯ ಮತ್ತು ಕಿರಿಯ ಪ್ರಯೋಗಶಾಲಾ ತಂತ್ರಜ್ಞರ ಹುದ್ದೆಗಳ ಪದನಾಮವನ್ನು ಹಿರಿಯ ವೈದ್ಯಕೀಯ ಪ್ರಯೋಗಶಾಲಾ ಟೆಕ್ನಾಲಜಿಸ್ಟ್ ಮತ್ತು ಕಿರಿಯ ವೈದ್ಯಕೀಯ ಪ್ರಯೋಗಶಾಲಾ ಟೆಕ್ನಾಲಜಿಸ್ಟ್ ಎಂದು ಮರುಪದನಾಮಗೊಳಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಆರ್.ಎಸ್. ಇಟಗಿ
ಸರ್ಕಾರದ ಅಧೀನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ಭಾರತೀಯ ವೈದ್ಯ ಪದ್ಧತಿ)

ಪಿ.ಆರ್. 2115

ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ

ವಿಷಯ : ಬೆಂಗಳೂರು Electronic City ಬಯೋಟೆಕ್ ಪಾರ್ಕ್‌ನಲ್ಲಿನ ಸಿಹೆಚ್‌ಜಿ ಸಂಸ್ಥೆಗೆ ಕೆಲವು ಮೂಲಭೂತ ಸೌಕರ್ಯಗಳಾದ ಗ್ರಂಥಾಲಯ, ಸೆಮಿನಾರ್ ಕೊಠಡಿ, Lecturer Hall ಹವಾಮಾನ ನಿಯಂತ್ರಣ ಕೊಠಡಿಗಳು, ಇತ್ಯಾದಿಗಳನ್ನು ಒದಗಿಸಲು ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ : ನಿರ್ದೇಶಕರು ಮಾನವ ತಳಿಶಾಸ್ತ್ರ ಕೇಂದ್ರ, ಬೆಂಗಳೂರು, ಇವರ ಪತ್ರ ದಿನಾಂಕ: 16-08-2011.

ಪ್ರಸ್ತಾವನೆ:

ಮೇಲೆ ಓದಲಾದ ದಿನಾಂಕ: 16-08-2011ರಲ್ಲಿ ಗೌರವಾನ್ವಿತ ನಿರ್ದೇಶಕರು, ಸಿಹೆಚ್‌ಜಿ ಇವರು, ಬೆಂಗಳೂರು Electronic City ಬಯೋಟೆಕ್ ಪಾರ್ಕ್‌ನಲ್ಲಿ ನಿರ್ಮಿಸಲಾಗುತ್ತಿರುವ ಸಿಹೆಚ್‌ಜಿ ಕಟ್ಟಡವು ಪೂರ್ಣಗೊಂಡಿದ್ದು, ಈಗ ಅವರಿಗೆ ಲಭ್ಯವಿರುವ ಹೆಚ್ಚುವರಿ ಜಾಗದಲ್ಲಿ ಹೆಚ್ಚಿನ ಶಿಕ್ಷಕರನ್ನು ನೇಮಿಸಿಕೊಂಡು ಹೊಸ ವೈಜ್ಞಾನಿಕ ಶಿಕ್ಷಣವನ್ನು ಹಾಗೂ ಸಾರ್ವಜನಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಉದ್ದೇಶಿಸಿರುವುದಾಗಿ ತಿಳಿಸಿರುತ್ತಾರೆ. ಇದಲ್ಲದೆ Genetic Disorder ಬಗ್ಗೆ ತಿಳುವಳಿಕೆ ನೀಡಲು ಸಿಹೆಚ್‌ಜಿ ಸಂಸ್ಥೆಯಲ್ಲಿ ಪೋಷಕರಿಗೆ ಹಾಗೂ ಮಕ್ಕಳಿಗೆ ಈ ಬಗ್ಗೆ ಸಾರ್ವಜನಿಕರಿಗೆ ತಿಳುವಳಿಕೆ ನೀಡಲು ಒಂದು ಸಭಾಂಗಣವನ್ನು ನಿರ್ಮಿಸುವುದು ಅಗತ್ಯವೆಂದು ತಿಳಿಸಿರುತ್ತಾರೆ.

ಸಿಹೆಚ್‌ಜಿಯಲ್ಲಿ ನಡೆಯಲಿರುವ ಸಂಶೋಧನೆ ಕಾರ್ಯಕ್ರಮಕ್ಕೆ DBT, ಹಾಗೂ ICMR ಸಹಾಯ ಮಾಡಿದ್ದು ಇಲ್ಲಿ ಮೂಲಭೂತ ಸೌಕರ್ಯವು ಸಾಕಾಗುತ್ತಿಲ್ಲವೆಂದು ತಿಳಿಸಿರುತ್ತಾರೆ. ಆದಕಾರಣ, Fully equipped ಗ್ರಂಥಾಲಯ ಸೆಮಿನಾರ್ ಕೊಠಡಿ, Projection ಸವಲತ್ತು ಒಳಗೊಂಡ Lecturer Hall ಹವಾಮಾನ ನಿಯಂತ್ರಣ ಕೊಠಡಿಗಳು, ರಸಾಯನಿಕ ಸಂಗ್ರಹಣ ಕೊಠಡಿ [Cell Culture Room] ಹಾಗೂ Fire Safety Equipment, ಅಗತ್ಯವಿದೆಯೆಂದು ಹಾಗೂ ಸದರಿ ಸಂಸ್ಥೆಗೆ ಕೌನ್ಸಿಲ್‌ಗಾಗಿ ಬಂದಂತಹ ರೋಗಿಗಳು ಹಾಗೂ ಅವರ ಕುಟುಂಬದವರಿಗೆ ಕುಳಿತುಕೊಳ್ಳಲು ಒಂದು ಕೊಠಡಿಯನ್ನು ಮತ್ತು ಒಂದು Consulting Room ಅವಶ್ಯಕವೆಂದು ತಿಳಿಸುತ್ತಾ ಇದಕ್ಕಾಗಿ ರೂ. 100.00 ಲಕ್ಷಗಳ ಸರ್ಕಾರದ ಆರ್ಥಿಕ ನೆರವು ಕೋರಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಐಟಿಡಿ 95 ಎಡಿಎಂ 2011, ಬೆಂಗಳೂರು, ದಿನಾಂಕ : 24-08-2011

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ, ಬೆಂಗಳೂರು Electronic City ಬಯೋಟೆಕ್ ಪಾರ್ಕ್‌ನಲ್ಲಿನ ಗ್ರಂಥಾಲಯ, ಸೆಮಿನಾರ್ ಕೊಠಡಿ ಹವಾಮಾನ ನಿಯಂತ್ರಣ ಕೊಠಡಿಗಳು, ರಸಾಯನಿಕ ಸಂಗ್ರಹಣ ಕೊಠಡಿ, ಹಾಗೂ Fire Safety Equipment, ಒಂದು Consulting Room ನಿರ್ಮಿಸಲು ರೂ. 100.00 ಲಕ್ಷಗಳ (ನೂರು ಲಕ್ಷ ರೂಪಾಯಿಗಳು ಮಾತ್ರ) ಅನುದಾನವನ್ನು ಲೆಕ್ಕ ಶೀರ್ಷಿಕೆ 5465-01-190-1-09 ಬಯೋಟೆಕ್ ಪಾರ್ಕ್ 059 ಇತರೆ ವೆಚ್ಚಗಳು (ಯೋಜನೆ)ರಡಿ ಒದಗಿಸಿದ 1000.00 ಲಕ್ಷಗಳಲ್ಲಿ ಮಾನವ ತಳಿಶಾಸ್ತ್ರ ಕೇಂದ್ರಕ್ಕೆ [Centre for Human Genetics] ಸಂಸ್ಥೆಗೆ ನಿರ್ದೇಶಕರು, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ ಇವರ ಮೂಲಕ ಬಿಡುಗಡೆ ಮಾಡಲು ಸರ್ಕಾರದ ಮಂಜೂರಾತಿ ನೀಡಿದೆ.

ಸದರಿ ಅನುದಾನವನ್ನು ಆಡಳಿತಾಧಿಕಾರಿಗಳು, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ನಿರ್ದೇಶನಾಲಯ ಇವರು ನಿರ್ದೇಶಕರು ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ನಿರ್ದೇಶನಾಲಯ ಇವರ ಮೇಲುಸಹಿ ಪಡೆದು ಖಜಾನೆಯಿಂದ ಸದರಿ ಅನುದಾನವನ್ನು ಡ್ರಾ ಮಾಡಿ ವಿತರಿಸತಕ್ಕದ್ದು.

ನಿರ್ದೇಶಕರು ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ನಿರ್ದೇಶನಾಲಯ ಇವರು ಸದರಿ ಅನುದಾನದ ಬಳಕೆಯ ಬಗ್ಗೆ ನಿರ್ದೇಶಕರು, ಮಾನವ ತಳಿಶಾಸ್ತ್ರ ಕೇಂದ್ರ ಇವರಿಂದ ಉಪಯೋಗಿತಾ ದೃಢೀಕರಣ ಪತ್ರವನ್ನು ವೆಚ್ಚ ಮಾಡಿದ ಅನುದಾನದ ವಿವರಗಳೊಂದಿಗೆ ಪಡೆದು ಈ ಆರ್ಥಿಕ ವರ್ಷದೊಳಗಾಗಿ ಸರ್ಕಾರಕ್ಕೆ ಒದಗಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ-1 ಟಿಎಫ್‌ಪಿ 2008, ದಿ: 16-05-2008ರಲ್ಲಿ ಇಲಾಖಾ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿದ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಇ. ರಾಮಕೃಷ್ಣಪ್ಪ

ಸರ್ಕಾರದ ಅಧೀನ ಕಾರ್ಯದರ್ಶಿ

ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ

ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ

ಪಿ.ಆರ್. 2116

ಸಿಬ್ಬಂದಿ ಮತ್ತು ಆಡಳಿತಾ ಸುಧಾರಣಾ ಸಚಿವಾಲಯ

ವಿಷಯ : ಶ್ರೀ ಎಸ್.ಸಿ. ಇಂಗಳಗಿ, ನಿವೃತ್ತ ಜಿಲ್ಲಾ ನ್ಯಾಯಾಧೀಶರು, ಇವರನ್ನು ಕರ್ನಾಟಕ ಲೋಕಾಯುಕ್ತ ಸಂಸ್ಥೆಯಲ್ಲಿ ಅಪರ ನಿಬಂಧಕರ (ವಿಚಾರಣೆಗಳು) ಹುದ್ದೆಗೆ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿರುವುದರ ಷರತ್ತು ಮತ್ತು ನಿಬಂಧನೆಗಳು.

ಓದಲಾಗಿದೆ : ಅಧಿಸೂಚನೆ ಸಂಖ್ಯೆ: ಸಿಆಸುಇ 232 ಸೇಲೋಯು 2010 ದಿನಾಂಕ: 3-1-2011.

ಪ್ರಸ್ತಾವನೆ:

ಮೇಲೆ ಓದಲಾದ ದಿ: 3.1.2011ರ ಅಧಿಸೂಚನೆಯಲ್ಲಿ ಶ್ರೀ ಎಸ್.ಸಿ. ಇಂಗಳಗಿ, ನಿವೃತ್ತ ಜಿಲ್ಲಾ ನ್ಯಾಯಾಧೀಶರು, ಇವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಎರಡು ವರ್ಷಗಳ ಅವಧಿಗೆ ಕರ್ನಾಟಕ ಲೋಕಾಯುಕ್ತ ಸಂಸ್ಥೆಯಲ್ಲಿ ಖಾಲಿಯಿರುವ ಅಪರ ನಿಬಂಧಕರ (ವಿಚಾರಣೆಗಳು) ಹುದ್ದೆಗೆ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಲಾಗಿದ್ದು ಇವರ ನೇಮಕಾತಿಯ ಷರತ್ತು ಮತ್ತು ನಿಬಂಧನೆಗಳನ್ನು ನಿಗದಿಪಡಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 232(2) ಸೇಲೋಯು 2010, ಬೆಂಗಳೂರು, ದಿನಾಂಕ : 24-08-2011

ಕರ್ನಾಟಕ ಲೋಕಾಯುಕ್ತ ಸಂಸ್ಥೆಯಲ್ಲಿರುವ ಅಪರ ನಿಬಂಧಕರ (ವಿಚಾರಣೆಗಳು) ಹುದ್ದೆಯಲ್ಲಿ ಗುತ್ತಿಗೆ ಆಧಾರದ ಮೇಲೆ ದಿನಾಂಕ 10.1.2011 ರಿಂದ ಕರ್ತವ್ಯ ನಿರ್ವಹಿಸುತ್ತಿರುವ ಶ್ರೀ ಎಸ್.ಸಿ. ಇಂಗಳಗಿ, ನಿವೃತ್ತ ಜಿಲ್ಲಾ ನ್ಯಾಯಾಧೀಶರು ಇವರ ನೇಮಕಾತಿಯ ಷರತ್ತು ಮತ್ತು ನಿಬಂಧನೆಗಳು ಈ ಕೆಳಕಂಡಂತಿರುತ್ತವೆ.

1. ಶ್ರೀ ಎಸ್. ಸಿ. ಇಂಗಳಗಿ ರವರ ಗುತ್ತಿಗೆ ಆಧಾರದ ನೇಮಕಾತಿಯು ದಿನಾಂಕ 10.1.2011 ರಿಂದ 9.1.2013 ರ ಅವಧಿಯವರೆಗೆ ಅಥವಾ ಮುಂದಿನ ಆದೇಶ ಹೊರಡಿಸುವವರೆಗೆ ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಮಾತ್ರ ಇದ್ದು, ಇದೊಂದು ತಾತ್ಕಾಲಿಕ ನೇಮಕಾತಿ ಆಗಿರುತ್ತದೆ.
2. ಶ್ರೀ ಎಸ್. ಸಿ. ಇಂಗಳಗಿ ಇವರು ಪಡೆಯುತ್ತಿರುವ ನಿವೃತ್ತಿ ವೇತನದೊಂದಿಗೆ ₹ 21,974 / ಮರುನೇಮಕಾತಿ ವೇತನವನ್ನು ಪಡೆಯಲು ಅರ್ಹರಾಗಿರುತ್ತಾರೆ. ಈ ವೇತನದ ಜೊತೆಗೆ ಅವರು ನಿವೃತ್ತಿ ಹೊಂದುವಾಗ ಪಡೆಯುತ್ತಿದ್ದ ಮೂಲ ವೇತನ ಮೇಲೆ ಕಾಲಕಾಲಕ್ಕೆ ಲಭ್ಯವಾಗುವ ತುಟ್ಟಿಭತ್ಯೆ, ಮನೆ ಬಾಡಿಗೆ ಭತ್ಯೆ, ನಗರ ಪರಿಹಾರ ಭತ್ಯೆಯನ್ನು ಪಡೆಯಲು ಅರ್ಹರಾಗಿರುತ್ತಾರೆ. ಆದರೆ ಅವರು ಪಡೆಯುತ್ತಿರುವ ನಿವೃತ್ತಿ ವೇತನದ ಮೇಲೆ ತುಟ್ಟಿಭತ್ಯೆ ಸೇರಿದಂತೆ ಯಾವುದೇ ಇತರ ಭತ್ಯೆಗಳು ಲಭ್ಯವಿರುವುದಿಲ್ಲ.
3. ಸದರಿ ಗುತ್ತಿಗೆ ನೌಕರರು ಸಾರ್ವಜನಿಕ ಹಿತದೃಷ್ಟಿಯಿಂದ ಪ್ರಯಾಣ ಮಾಡಲೇಬೇಕಾದಲ್ಲಿ ಮಾತ್ರ ಅವರು ನೇಮಕಾತಿ ಹೊಂದಿರುವ ಹುದ್ದೆಯ ಕಾಲಿಕ ವೇತನ ಶ್ರೇಣಿಯ ಕನಿಷ್ಠ ವೇತನದ ಮೇಲೆ ನಿಯಮಾನುಸಾರ ಲಭ್ಯವಿರುವ ಪ್ರಯಾಣ ಭತ್ಯೆ ಮತ್ತು ದಿನಭತ್ಯೆಯನ್ನು ಪಡೆಯಲು ಅರ್ಹರಾಗಿರುತ್ತಾರೆ.
4. ಸದರಿ ಗುತ್ತಿಗೆ ನೌಕರರುಗಳು ವಾರ್ಷಿಕ 15 ದಿನಗಳ ಸಾಂದರ್ಭಿಕ ರಜೆ ಮತ್ತು ಕೆ.ಸಿ.ಎಸ್.ಆರ್ಸ್. ನಿಯಮ 150 ರ ಪ್ರಕಾರ ಗಳಿಕೆ ರಜೆ ಪಡೆಯಲು ಅರ್ಹರಾಗಿರುತ್ತಾರೆ.
5. ಒಪ್ಪಂದದ ಷರತ್ತು ಮತ್ತು ನಿಬಂಧನೆಗಳಲ್ಲಿ ನೀಡಿರುವ ಸೌಲಭ್ಯಗಳ ಹೊರತಾಗಿ ಬೇರಾವುದೇ ಸೌಲಭ್ಯಕ್ಕೆ ಅಂದರೆ ವೇತನ ಬಡ್ತಿ, ಪದೋನ್ನತಿ, ಪಿಂಚಣಿ ಇತ್ಯಾದಿ ಸೌಲಭ್ಯಗಳಿಗೆ ಸದರಿ ಗುತ್ತಿಗೆ ನೌಕರರು ಅರ್ಹರಾಗಿರುವುದಿಲ್ಲ.
6. ಸದರಿ ನೌಕರರು ದುರ್ವರ್ತನೆ, ನಿರ್ಲಕ್ಷತೆಯ ನಿಮಿತ್ತ ಸರ್ಕಾರಕ್ಕೆ ಸಂಬಂಧಿಸಬಹುದಾದ ಎಲ್ಲಾ ನಷ್ಟಗಳನ್ನು ಸರ್ಕಾರಕ್ಕೆ ಸದರಿ ನೌಕರರು ಭರಿಸಿಕೊಡಲು ಬದ್ಧರಾಗಿರತಕ್ಕದ್ದು.
7. ಸದರಿ ಮರುನೇಮಕಾತಿ ಅವಧಿಯ ಸೇವೆಯನ್ನು ನಿವೃತ್ತಿ ವೇತನ ಹಾಗೂ ಇತ್ಯಾದಿ ಸೌಲಭ್ಯಗಳಿಗೆ ಅರ್ಹತಾದಾಯಕ ಸೇವೆಯೆಂದು ಪರಿಗಣಿಸುವುದಿಲ್ಲ.
8. ಅವರ ಕರ್ತವ್ಯ, ಕಾರ್ಯ ಮತ್ತು ಪ್ರಕಾರ್ಯಗಳನ್ನು ಶ್ರದ್ಧೆ, ಭಕ್ತಿ ಮತ್ತು ಆಸಕ್ತಿಯಿಂದ ಅವರು ನೆರವೇರಿಸುವುದು.
9. ಅವರು ಕರ್ತವ್ಯಗಳನ್ನು ಪಾಲಿಸುತ್ತಿರುವ ಅಥವಾ ನೆರವೇರಿಸುತ್ತಿರುವಾಗ ಅವರಿಗೆ ಲಭ್ಯವಾಗಬಹುದಾದ ಅಥವಾ ದೊರಕಬಹುದಾದ ಅಧಿಕೃತ ಮಾಹಿತಿಯನ್ನು ಗೌಪ್ಯವಾಗಿಟ್ಟು ಕಟ್ಟುನಿಟ್ಟಾಗಿ ಪಾಲಿಸಬೇಕು.
10. 1966ರ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ ಮತ್ತು 1957ರ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗೆ ಅವರು ಬದ್ಧರಾಗಿರುತ್ತಾರೆ.
11. ಈ ಒಪ್ಪಂದದ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಗುತ್ತಿಗೆ ನೇಮಕಾತಿಯು ತಾನಾಗಿಯೇ ಮುಕ್ತಾಯವಾಗುತ್ತದೆ.
12. ಅವರ ದುರ್ನಡತೆಯಿಂದಾಗಲೀ ಅಥವಾ ನಿರ್ಲಕ್ಷತೆ, ಉದಾಸೀನತೆಯಿಂದಾಗಲೀ ಸರ್ಕಾರಕ್ಕೆ ಸಂಬಂಧಿಸಿದಂತೆ ಆರ್ಥಿಕ ನಷ್ಟವನ್ನು ಉಂಟು ಮಾಡಿದ್ದಲ್ಲಿ, ಅದನ್ನು ಸರ್ಕಾರಕ್ಕೆ ತುಂಬಿಕೊಡಲು ಅವರು ಹೊಣೆಯಾಗಿರುತ್ತಾರೆ.
13. ಈ ಆದೇಶವನ್ನು ಸ್ವೀಕರಿಸಿದ ದಿನಾಂಕದಿಂದ ಏಳು ದಿನಗಳ ಒಳಗಾಗಿ ಐವತ್ತು (50/-) ರೂಪಾಯಿಗಳ ಮೌಲ್ಯದ ಛಾಪಾ ಕಾಗದದಲ್ಲಿ ಸದರಿ ನೇಮಕಾತಿಯ ಷರತ್ತು ಮತ್ತು ನಿಬಂಧನೆಗಳನ್ನು ಒಳಗೊಂಡಿರುವ ಕರಾರು ಪತ್ರವನ್ನು ಕ್ರಮಬದ್ಧ ರೀತಿಯಲ್ಲಿ ಸದರಿ ನೌಕರರಿಂದ ಬರೆಯಿಸಿಕೊಳ್ಳತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 647 ವೆಚ್ಚ-12/11 ದಿನಾಂಕ: 5.8.2011 ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ. ಮಾರ್ಕಂಡೇಯ

ಸರ್ಕಾರದ ಅಧೀನ ಕಾರ್ಯದರ್ಶಿ

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ

(ಸೇವಾ ನಿಯಮಗಳು-2)

ಪಿ.ಆರ್. 2117

ಸಹಕಾರ ಸಚಿವಾಲಯ

ವಿಷಯ : ಶ್ರೀ ಉಮಾಕಾಂತ್, ಸಹಕಾರ ಸಂಘಗಳ ಉಪ ನಿಬಂಧಕರು ಇವರ ವಿರುದ್ಧ ಶಿಸ್ತು ಕ್ರಮ ಕುರಿತು.

ಓದಲಾಗಿದೆ :

1. ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಇವರ ಅರೆ ಸರ್ಕಾರಿ ಪತ್ರ ಸಂಖ್ಯೆ : ಡಿಎಸ್‌ಕೆ/ಇಎಸ್‌ಟಿಎಸ್/35/2003-04 ದಿನಾಂಕ : 12-12-2006.
2. ಕಾರಣ ಕೇಳುವ ನೋಟಿಸು ಸಂಖ್ಯೆ : ಸಇ 05 ಎಸಸೇ 2007 ದಿನಾಂಕ : 08-02-2007.
3. ಸರ್ಕಾರದ ಆದೇಶ ಸಂಖ್ಯೆ : ಸಇ 05 ಎಸಸೇ 2007 ದಿನಾಂಕ : 20-09-2007.
4. ವಿಚಾರಣಾಧಿಕಾರಿಗಳ ಪತ್ರ ದಿನಾಂಕ : 06-08-2008.
5. ಸರ್ಕಾರದ ನೋಟಿಸು ಸಂಖ್ಯೆ : ಸಇ 05 ಎಸಸೇ 2007 ದಿನಾಂಕ : 09-02-2008.
6. ವಿಚಾರಣಾಧಿಕಾರಿಗಳ ಪತ್ರ ಸಂಖ್ಯೆ : ಸಿಬ್ಬಂದಿ/26/ಇಸಿಸಿ/2007-08 ದಿನಾಂಕ : 02-02-2009.
7. ಎರಡನೇ ಕಾರಣ ಕೇಳುವ ನೋಟಿಸು ಸಂಖ್ಯೆ : ಸಇ 05 ಎಸಸೇ 2007 ದಿನಾಂಕ : 20-02-2009.
8. ಶ್ರೀ ಉಮಾಕಾಂತ್ ಇವರ ಮನವಿ ದಿನಾಂಕ : 20-06-2009.
9. ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಇವರ ಅರೆ ಸರ್ಕಾರಿ ಪತ್ರ ಸಂಖ್ಯೆ : ಡಿಎಸ್‌ಕೆ/ಇಎಸ್‌ಟಿಎಸ್/379/2009-10 ದಿನಾಂಕ : 02-04-2011.

ಪ್ರಸ್ತಾವನೆ :

ಮೇಲೆ (1)ರಲ್ಲಿ ಓದಲಾದ ಪತ್ರದಲ್ಲಿ ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು, ಬೆಂಗಳೂರು ರವರು ಆಳಂದ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಆಳಂದ ಗುಲ್ಬರ್ಗಾ ಜಿಲ್ಲೆ ಇವರು ಪ್ರಭಾರ ವ್ಯವಸ್ಥಾಪಕ ನಿರ್ದೇಶಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಶ್ರೀ ಉಮಾಕಾಂತ್, ಸಹಕಾರ ಸಂಘಗಳ ಸಹಾಯಕ ನಿಬಂಧಕರು (ಪ್ರಸ್ತುತ ಸಹಕಾರ ಸಂಘಗಳ ಉಪ ನಿಬಂಧಕರು ನಿಯೋಜನೆ ಮೇಲೆ ಅಧ್ಯಕ್ಷರು ಕರ್ನಾಟಕ ರಾಜ್ಯ ಉಗ್ರಾಣ ನಿಗಮ ಇವರ ಆಪ್ತ ಕಾರ್ಯದರ್ಶಿ) ಇವರ ವಿರುದ್ಧ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 55 ರನ್ವಯ ಪರಿವೀಕ್ಷಣೆಯನ್ನು ನಡೆಸಲು ಆದೇಶಿಸಿದ್ದು, ಅದರಂತೆ, ಪರಿವೀಕ್ಷಣಾಧಿಕಾರಿಗಳು ವರದಿ ಸಲ್ಲಿಸಿದ್ದು, ಈ ವರದಿಯನ್ನು ಪರಿಶೀಲಿಸಲಾಗಿ ಈ ಅಧಿಕಾರಿಯು ತನ್ನ ಅಧಿಕಾರವನ್ನು ದುರುಪಯೋಗಪಡಿಸಿಕೊಂಡು, ಸರ್ಕಾರಕ್ಕೆ ಹಾಗೂ ಮೇಲ್ಕಂಡ ಸಹಕಾರ ಸಂಸ್ಥೆಗೆ ದ್ರೋಹವೆಸಗಿದ್ದು, ಕರ್ತವ್ಯ ಲೋಪವೆಸಗಿರುತ್ತಾರೆ. ಆದಕಾರಣ ಇವರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) 1957ರ ಪ್ರಕಾರ ಶಿಸ್ತು ಕ್ರಮ ಜರುಗಿಸುವಂತೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮೇಲೆ ಓದಲಾದ (2)ರಲ್ಲಿ ಶ್ರೀ ಉಮಾಕಾಂತ್, ಸಹಕಾರ ಸಂಘಗಳ ಉಪ ನಿಬಂಧಕರು ಹಾಗೂ ಕಾರ್ಯ ನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತ್, ಮಾಲೂರು ಇವರಿಗೆ ಕಾರಣ ಕೇಳುವ ನೋಟಿಸನ್ನು ಜಾರಿ ಮಾಡಿ ಆರೋಪಗಳನ್ನು ಒಪ್ಪಿಕೊಳ್ಳುವ ಅಥವಾ ನಿರಾಕರಿಸುವ ಬಗ್ಗೆ ಲಿಖಿತ ಹೇಳಿಕೆಯನ್ನು ಸಲ್ಲಿಸಬೇಕೆಂದು ತಿಳಿಸಲಾಗಿದೆ.

ಶ್ರೀ ಉಮಾಕಾಂತ್ ಇವರು ಕಾರಣ ಕೇಳುವ ನೋಟಿಸಿಗೆ ಯಾವುದೇ ಸಮಜಾಯಿಷಿ ನೀಡದಿರುವುದರಿಂದ ಮೇಲೆ ಓದಲಾದ (3)ರ ಸರ್ಕಾರಿ ಆದೇಶದಲ್ಲಿ ಇವರ ವಿರುದ್ಧ ಆರೋಪಗಳ ಬಗ್ಗೆ ಸತ್ಯಾಸತ್ಯತೆಯನ್ನು ಕಂಡುಕೊಳ್ಳಲು ಶ್ರೀ ಎಂ.ಜಿ. ಹಿರೇಮಠ್, ನಿವೃತ್ತ ನ್ಯಾಯಾಧೀಶರು ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಿ ಮೂರು ತಿಂಗಳ ಒಳಗಾಗಿ ಸಂಪೂರ್ಣ ವರದಿ ನೀಡುವಂತೆ ತಿಳಿಸಲಾಗಿತ್ತು.

ಮೇಲೆ ಓದಲಾದ (4)ರ ಪತ್ರದಲ್ಲಿ ವಿಚಾರಣಾಧಿಕಾರಿಗಳು ಶ್ರೀ ಉಮಾಕಾಂತ್ ಇವರು ವಿಚಾರಣೆಗೆ ಸರಿಯಾಗಿ ಹಾಜರಾಗದೇ ವಿಚಾರಣೆಯನ್ನು ಪೂರ್ಣಗೊಳಿಸಲು ಸಾಧ್ಯವಾಗಿರುವುದಿಲ್ಲವೆಂದು ತಿಳಿಸಿರುವ ಹಿನ್ನೆಲೆಯಲ್ಲಿ ಓದಲಾದ (5)ರ ನೋಟೀಸಿನಲ್ಲಿ ವಿಚಾರಣಾಧಿಕಾರಿಗಳಿಗೆ ಸಹಕರಿಸುವಂತೆ ಶ್ರೀ ಉಮಾಕಾಂತ್ ಇವರಿಗೆ ನೋಟೀಸು ಜಾರಿ ಮಾಡಲಾಗಿತ್ತು.

ಮೇಲೆ ಓದಲಾದ (6)ರ ಪತ್ರದೊಂದಿಗೆ ವಿಚಾರಣಾಧಿಕಾರಿಗಳು ವಿಚಾರಣಾ ವರದಿಯನ್ನು ಕಳುಹಿಸಿದ್ದು, ಅದರಲ್ಲಿ ಆಪಾದಿತ ಸರ್ಕಾರಿ ಅಧಿಕಾರಿ ವಿರುದ್ಧ ಆರೋಪ (1) ರಿಂದ (4) ಮತ್ತು (6) ರಿಂದ (11) ಸಿದ್ಧವಾಗಿದ್ದು, ಆರೋಪ (5) ಸಿದ್ಧವಾಗಿಲ್ಲವೆಂದು ತಿಳಿಸಿರುತ್ತಾರೆ.

ಮೇಲೆ ಓದಲಾದ (7)ರ ಕಾರಣ ಕೇಳುವ ನೋಟೀಸಿನೊಂದಿಗೆ ವಿಚಾರಣಾ ವರದಿಯ ಪ್ರತಿಯನ್ನು ಆಪಾದಿತ ಅಧಿಕಾರಿಗೆ ಜಾರಿ ಮಾಡಿ ಲಿಖಿತ ಹೇಳಿಕೆಯನ್ನು ಸಲ್ಲಿಸುವಂತೆ ಸೂಚಿಸಲಾಗಿತ್ತು. ಅದರಂತೆ, ಶ್ರೀ ಉಮಾಕಾಂತ್ ಇವರು ಮೇಲೆ ಓದಲಾದ (8)ರ ಮನವಿಯೊಂದಿಗೆ ಲಿಖಿತ ಉತ್ತರ ಸಲ್ಲಿಸಿದ್ದು, ಆರೋಪಗಳನ್ನು ಕಲಂ 65 ರನ್ವಯ ನಡೆಸಲಾದ ಪರಿವೀಕ್ಷಣೆಯ ವರದಿ ಮಾಡಲಾಗಿದ್ದು ವರದಿಯ ಮೇಲೆ ನಡೆಸಿದ ಶಿಸ್ತು ವಿಚಾರಣೆಯು ದೋಷಪೂರಿತವಾಗಿರುವುದರಿಂದ ದೋಷಮುಕ್ತರನ್ನಾಗಿಸುವಂತೆ ಕೋರಿರುತ್ತಾರೆ.

ಮೇಲೆ ಓದಲಾದ (9)ರಲ್ಲಿ ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ವಿಚಾರಣಾಧಿಕಾರಿಯವರ ವಿಚಾರಣಾ ವರದಿಯ ಮೇಲೆ ಆರೋಪವಾರು ಅಭಿಪ್ರಾಯ ನೀಡಿದ್ದು, ವಿಚಾರಣಾಧಿಕಾರಿಗಳ ಆರೋಪವಾರು ಅಭಿಪ್ರಾಯಗಳನ್ನು ಒಪ್ಪಬಹುದಾಗಿದೆ ಎಂದು ತಿಳಿಸಿರುತ್ತಾರೆ. ಶ್ರೀ ಉಮಾಕಾಂತ್, ಹಿಂದಿನ ಸಹಕಾರ ಸಂಘಗಳ ಸಹಾಯಕ ನಿಬಂಧಕರು ಪ್ರಸ್ತುತ ಸಹಕಾರ ಸಂಘಗಳ ಉಪ ನಿಬಂಧಕರು ನಿಯೋಜನೆ ಮೇಲೆ ಅಧ್ಯಕ್ಷರು, ಕರ್ನಾಟಕ ರಾಜ್ಯ ಉಗ್ರಾಣ ನಿಗಮ ಇವರ ಆಪ್ತ ಕಾರ್ಯದರ್ಶಿ ಇವರ ವಿರುದ್ಧ ಮಾಡಲಾದ ಆರೋಪಗಳು ಸಾಬೀತಾಗಿಲ್ಲವೆಂದು ನಿರ್ಣಯಿಸುವ ಸಂಬಂಧ ಅವರು ತಕ್ಕ ಸಮರ್ಥನೆ ನೀಡಿಲ್ಲವಾದ್ದರಿಂದ, ಸಾಬೀತಾದ ಆರೋಪದ ಗಂಭೀರತೆಗನುಗುಣವಾಗಿ ದಂಡನೆಯನ್ನು ವಿಧಿಸಲು ಸರ್ಕಾರವು ತೀರ್ಮಾನಿಸಿರುತ್ತದೆ, ಆದ್ದರಿಂದ, ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ : ಸಇ 05 ಎಸಸೇ 2007, ಬೆಂಗಳೂರು, ದಿನಾಂಕ : 18-08-2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಶ್ರೀ ಉಮಾಕಾಂತ್, ಸಹಕಾರ ಸಂಘಗಳ ಉಪ ನಿಬಂಧಕರು ಇವರು ಈ ಹಿಂದೆ ಸಹಕಾರ ಸಂಘಗಳ ಸಹಾಯಕ ನಿಬಂಧಕರಾಗಿ ಗುಲ್ಬರ್ಗಾದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾಗ ಅಧಿಕ ಪ್ರಭಾರದ ಮೇಲೆ ವ್ಯವಸ್ಥಾಪಕ ನಿರ್ದೇಶಕರು

ಆಳಂದ ಸಹಕಾರಿ ಸಕ್ಕರೆ ಕಾರ್ಖಾನೆ ಈ ಹುದ್ದೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾಗ ನಡೆದಿದೆ ಎನ್ನಲಾದ ಅವ್ಯವಹಾರಗಳಿಗೆ ಸಂಬಂಧಿಸಿದಂತೆ ಕಾರಣ ಕೇಳುವ ನೋಟಿಸ್‌ನೊಂದಿಗೆ ಹೊರಡಿಸಿರುವ ಆರೋಪಗಳು ಸಾಬೀತಾಗಿರುವುದರಿಂದ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು, 1957ರ ನಿಯಮ 8(iii)ರನ್ವಯ ಅವರ ಮುಂದಿನ ಎರಡು ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತ ಪರಿಣಾಮ ಸಹಿತವಾಗಿ (With cumulative effect) ಕಡಿತಗೊಳಿಸುವ ದಂಡನೆಯನ್ನು ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಎ.ಎಸ್. ವಿಶ್ವೇಶ್ವರಯ್ಯ

ಸರ್ಕಾರದ ಅಧೀನ ಕಾರ್ಯದರ್ಶಿ

ಸಹಕಾರ ಇಲಾಖೆ

ಪಿ.ಆರ್. 2118

ಸಹಕಾರ ಸಚಿವಾಲಯ

ವಿಷಯ : ಕರ್ನಾಟಕ ರಾಜ್ಯ ಕೈಗಾರಿಕಾ ವಾಣಿಜ್ಯ ಸಹಕಾರ ಬ್ಯಾಂಕ್ ನಿ., ಬೆಂಗಳೂರು ಇದು ಭಾರತೀಯ ರಿಸರ್ವ್ ಬ್ಯಾಂಕಿನ ಸುತ್ತೋಲೆಗಳನ್ನು ಉಲ್ಲಂಘಿಸಿ ನಾನ್ ಎಸ್.ಎಲ್.ಆರ್. ವ್ಯವಹಾರಗಳ ಕುರಿತು ಇರುವ ವಿಚಾರಣಾ ಅವಧಿಯನ್ನು ವಿಸ್ತರಿಸುವ ಕುರಿತು.

ಓದಲಾಗಿದೆ : ಸಹಕಾರ ಸಂಘಗಳ ನಿಬಂಧಕರ ಪತ್ರ ಸಂಖ್ಯೆ : ಯುಬಿಸಿ–1/169/ವಿಚಾರಣೆ/2009–10, ದಿನಾಂಕ : 06–08–2011.

ಪ್ರಸ್ತಾವನೆ :

ಕರ್ನಾಟಕ ರಾಜ್ಯ ಕೈಗಾರಿಕಾ ವಾಣಿಜ್ಯ ಸಹಕಾರ ಬ್ಯಾಂಕ್ ನಿ., ಬೆಂಗಳೂರು ಇದು ಭಾರತೀಯ ರಿಸರ್ವ್ ಬ್ಯಾಂಕಿನ ಸುತ್ತೋಲೆಗಳನ್ನು ಉಲ್ಲಂಘಿಸಿ ನಾನ್ ಎಸ್.ಎಲ್.ಆರ್. ವ್ಯವಹಾರವನ್ನು ನಡೆಸಿರುವ ಬಗ್ಗೆ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 64ರ ಅಡಿಯಲ್ಲಿ ವಿಚಾರಣಾಧಿಕಾರಿಗಳನ್ನು ನೇಮಿಸಿ ತಮ್ಮ ಆದೇಶ ಸಂಖ್ಯೆ : 28–08–2009, 24–12–2009, 22–02–2010, 20–09–2010 ಮತ್ತು 05–04–2011 ರಂದು ವಿಚಾರಣಾಧಿಕಾರಿಗಳ ಅವಧಿಯನ್ನು ವಿಸ್ತರಿಸಿ ಆದೇಶ ಹೊರಡಿಸಿರುತ್ತಾರೆ. ಸದರಿ ವಿಚಾರಣೆಯನ್ನು ಆದೇಶಿಸಿ ದಿನಾಂಕ : 27–02–2011 ರಂದು 18 ತಿಂಗಳ ಅವಧಿಯು ಮುಕ್ತಾಯಗೊಂಡಿರುತ್ತದೆ. ಆದರೆ, ಈ ಹಿಂದೆ ನೇಮಕ ಮಾಡಿದ ವಿಚಾರಣಾಧಿಕಾರಿಗಳು ಹಲವಾರು ಕಾರಣಗಳಿಂದ ವಿಚಾರಣೆ ಪೂರ್ತಿಗೊಳಿಸಿ ವರದಿ ಸಲ್ಲಿಸಲು ಸಾಧ್ಯವಾಗದೇ ಇರುವುದರಿಂದ ಉಲ್ಲೇಖ(1)ರ ಪತ್ರದ ಮೇರೆಗೆ ಸಹಕಾರ ಸಂಘಗಳ ನಿಬಂಧಕರು ಸದರಿ ವಿಚಾರಣೆಯನ್ನು ಪೂರ್ತಿಗೊಳಿಸಲು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 121ರ ಅಡಿ ದತ್ತವಾಗಿರುವ ಅಧಿಕಾರದ ಅನ್ವಯ ವಿಚಾರಣಾ ಅವಧಿಯನ್ನು ದಿನಾಂಕ : 31–12–2011 ರವರೆಗೆ ವಿಸ್ತರಿಸಲು ಕೋರಿರುತ್ತಾರೆ. ಈ ಪ್ರಸ್ತಾವವನ್ನು ಪರಿಶೀಲಿಸಿ ವಿಚಾರಣಾಧಿಕಾರಿಗಳು ವಿಚಾರಣೆಯನ್ನು ಪೂರ್ತಿಗೊಳಿಸಲು ಅವಧಿಯನ್ನು ವಿಸ್ತರಿಸುವುದು ಸೂಕ್ತವೆಂದು ಪರಿಗಣಿಸಿ ಈ ಕೆಳಗಿನಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸಿಒ 33 ಸಿಎಲ್ಎಂ 2010, ಬೆಂಗಳೂರು, ದಿನಾಂಕ : 19–08–2011

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 121ರ ಅಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ರಾಜ್ಯ ಕೈಗಾರಿಕಾ ವಾಣಿಜ್ಯ ಸಹಕಾರ ಬ್ಯಾಂಕ್ ನಿ., ಬೆಂಗಳೂರು ಇದು ಭಾರತೀಯ ರಿಸರ್ವ್ ಬ್ಯಾಂಕಿನ ಸುತ್ತೋಲೆಗಳನ್ನು ಉಲ್ಲಂಘಿಸಿ ಇದರ ನಾನ್ ಎಸ್.ಎಲ್.ಆರ್. ವ್ಯವಹಾರವನ್ನು ನಡೆಸಿರುವ ಬಗ್ಗೆ ಆದೇಶಿಸಲಾದ ವಿಚಾರಣಾಧಿಕಾರಿಯವರ ಅವಧಿಯನ್ನು ದಿನಾಂಕ : 28–02–2011 ರಿಂದ ದಿನಾಂಕ : 27–12–2011 ರವರೆಗೆ ವಿಸ್ತರಿಸಲು ಅನುವಾಗುವಂತೆ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 64(2ಎ)ರ ಉಪಬಂಧಗಳಲ್ಲಿಯ "ಆರು ತಿಂಗಳು" ಬದಲಾಗಿ "ಹದಿನಾರು ತಿಂಗಳು" ಎಂದು ತಿದ್ದುಪಡಿ ಮಾಡಲಾಗಿದೆ.

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 64(2ಎ)ರ ಉಪಬಂಧಕ್ಕೆ ಮಾಡಿದ ಈ ಮಾರ್ಪಾಡು ದಿನಾಂಕ : 27–12–2011ರ ವರೆಗೆ ಜಾರಿಯಲ್ಲಿರತಕ್ಕದ್ದು. ಈ ಅವಧಿ ಮುಗಿದ ನಂತರ ಈ ಆದೇಶದ ಮಾರ್ಪಾಡಿಗೆ ಮೊದಲು ಜಾರಿಯಲ್ಲಿದ್ದಂತೆ ಸದರಿ 64(2ಎ) ಪ್ರಕರಣದ ಉಪಬಂಧಗಳು ಪುನಃ ಜಾರಿಗೆ ಬರತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಆರ್.ಎಸ್. ನೂಲಿ

ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ

ಸರ್ಕಾರದ ಜಂಟಿ ಕಾರ್ಯದರ್ಶಿ

ಸಹಕಾರ ಇಲಾಖೆ

ಪಿ.ಆರ್. 2119

ಕಂದಾಯ ಸಚಿವಾಲಯ

ವಿಷಯ : ಶ್ರೀ ನಾಗರಾಜಪ್ಪ ಹೊನ್ನಾಳ್, ಹಿಂದಿನ ಕಛೇರಿ ಸಹಾಯಕರು, ಜಿಲ್ಲಾಧಿಕಾರಿಗಳ ಕಛೇರಿ, ತುಮಕೂರು ಜಿಲ್ಲೆ, ಇವರನ್ನು ಸೇವೆಯಿಂದ ಅಮಾನತ್ತುಗೊಳಿಸುವ ಬಗ್ಗೆ.

ಓದಲಾಗಿದೆ :

1. ಜಿಲ್ಲಾಧಿಕಾರಿಗಳು, ತುಮಕೂರು ಜಿಲ್ಲೆ ಇವರ ವರದಿ ಸಂಖ್ಯೆ : ಎಸಿಟಿ.ಸಿಆರ್/89/04–05, ದಿನಾಂಕ : 23–06–2010.
2. ಪ್ರಾದೇಶಿಕ ಆಯುಕ್ತರು, ಬೆಂಗಳೂರು ಇವರ ಪತ್ರ ಸಂ.ಸಿಸಿಎ.ವಿವ/26/08–09, ದಿನಾಂಕ : 28–03–2011.

ಪ್ರಸ್ತಾವನೆ :

ಶ್ರೀ ನಾಗರಾಜಪ್ಪ ಹೊನ್ನಾಳ್, ಹಿಂದಿನ ಕಛೇರಿ ಸಹಾಯಕರು, ಜಿಲ್ಲಾಧಿಕಾರಿಗಳ ಕಛೇರಿ, ತುಮಕೂರು ಜಿಲ್ಲೆ, ಇವರು ದಿನಾಂಕ : 10–12–2004 ರಿಂದ 16–05–2007ರ ವರೆಗೆ ಕಛೇರಿ ಸಹಾಯಕರು, ಜಿಲ್ಲಾಧಿಕಾರಿಗಳ ಕಛೇರಿ, ತುಮಕೂರು ಜಿಲ್ಲೆ ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತ

ದಿನಾಂಕ : 09-07-2005 ರಿಂದ 16-05-2007 ರವರೆಗೆ ಅನಾರೋಗ್ಯದ ನಿಮಿತ್ತ ಎಂದು ಸಾಧಾರಣ ರಜೆಯನ್ನು ಮಂಜೂರು ಮಾಡಲು ಕೋರಿದ್ದು, ಈ ಬಗ್ಗೆ ಮಂಜೂರಾತಿ ಪಡೆಯದೇ ಸೇವೆಗೆ ಅನಧಿಕೃತವಾಗಿ ಗೈರುಹಾಜರಾಗಿರುತ್ತಾರೆ ಎಂದು ಮೇಲೆ ಓದಲಾದ ಕ್ರಸಂ. 1ರ ದಿನಾಂಕ : 23-06-2010ರ ಜಿಲ್ಲಾಧಿಕಾರಿಗಳು, ತುಮಕೂರು ಜಿಲ್ಲೆ ಇವರು ವರದಿ ಮಾಡಿರುತ್ತಾರೆ.

ಸದರಿ ವರದಿಯನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಶ್ರೀ ನಾಗರಾಜಪ್ಪ ಹೊನ್ನಾಳ್, ಹಿಂದಿನ ಕಛೇರಿ ಸಹಾಯಕರು, ಜಿಲ್ಲಾಧಿಕಾರಿಗಳ ಕಛೇರಿ, ತುಮಕೂರು ಜಿಲ್ಲೆ ರವರು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ 1966 ಹಾಗೂ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ 1958ರ ಸೇವಾ ನಿಯಮಗಳನ್ನು ಉಲ್ಲಂಘಿಸಿರುತ್ತಾರೆ. ಇದಲ್ಲದೇ ಇವರು ಒಬ್ಬ ಜವಾಬ್ದಾರಿ ಅಧಿಕಾರಿಯಾಗಿದ್ದು ಇವರ ಗೈರು ಹಾಜರಾತಿಯಿಂದ ಸರ್ಕಾರಿ ಕೆಲಸ ಕಾರ್ಯಗಳಿಗೆ ಅಡಚಣೆ ಉಂಟು ಮಾಡುವ ಮೂಲಕ ಅತೀವ ಕರ್ತವ್ಯ ನಿರ್ಲಕ್ಷ್ಯತೆಯನ್ನು ತೋರಿಸಿರುವುದರಿಂದ ಇವರ ವಿರುದ್ಧದ ಶಿಸ್ತಿನ ಕ್ರಮ ಬಾಕಿ ಇಟ್ಟು ಸೇವೆಯಿಂದ ಅಮಾನತ್ತಿನಲ್ಲಿಡುವುದು ಅವಶ್ಯಕವೆಂದು ಸರ್ಕಾರವು ಮನಗಂಡಿರುವುದರಿಂದ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ : ಕಂಇ 23 ಎಡಿಇ 2011, ಬೆಂಗಳೂರು, ದಿನಾಂಕ : 17-08-2011

ಶ್ರೀ ನಾಗರಾಜಪ್ಪ ಹೊನ್ನಾಳ್, ಹಿಂದಿನ ಕಛೇರಿ ಸಹಾಯಕರು, ಜಿಲ್ಲಾಧಿಕಾರಿಗಳ ಕಛೇರಿ, ತುಮಕೂರು ಜಿಲ್ಲೆ, ಇವರನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 10(1)(ಡಿ) ರಡಿ ಪ್ರದತ್ತವಾದ ಅಧಿಕಾರವನ್ನು ಸರ್ಕಾರವು ಚಲಾಯಿಸಿ ಶಿಸ್ತು ಕ್ರಮವನ್ನು ಬಾಕಿ ಇಟ್ಟು ತತ್‌ಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಅಮಾನತ್ತಿನಲ್ಲಿಟ್ಟು ಆದೇಶಿಸಿದೆ.

ಅಮಾನತ್ತಿನ ಅವಧಿಯಲ್ಲಿ ಶ್ರೀ ನಾಗರಾಜಪ್ಪ ಹೊನ್ನಾಳ್, ಹಿಂದಿನ ಕಛೇರಿ ಸಹಾಯಕರು, ಜಿಲ್ಲಾಧಿಕಾರಿಗಳ ಕಛೇರಿ, ತುಮಕೂರು ಜಿಲ್ಲೆ ರವರು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ 98 ರನ್ವಯ ಜೀವನಾಧಾರ ಭತ್ಯೆಯನ್ನು ಪಡೆಯುತ್ತಾರೆ.

ಅಮಾನತ್ತಿನ ಅವಧಿಯಲ್ಲಿ ಶ್ರೀ ನಾಗರಾಜಪ್ಪ ಹೊನ್ನಾಳ್, ಹಿಂದಿನ ಕಛೇರಿ ಸಹಾಯಕರು, ಜಿಲ್ಲಾಧಿಕಾರಿಗಳ ಕಛೇರಿ, ತುಮಕೂರು ಜಿಲ್ಲೆ, ಇವರು ಕೇಂದ್ರ ಸ್ಥಾನವನ್ನು ಸಕ್ಷಮ ಪ್ರಾಧಿಕಾರಿಯ ಅನುಮತಿ ಪಡೆಯದೇ ಬಿಡತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಎನ್. ಗೋಪಾಲಯ್ಯ

ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್. 2120 ಕಂದಾಯ ಇಲಾಖೆ (ಸೇವೆಗಳು-3)

ಕಂದಾಯ ಸಚಿವಾಲಯ

ವಿಷಯ : 2011ನೇ ಸಾಲಿನಲ್ಲಿ ರಾಜ್ಯದಲ್ಲಿ ಭಾರಿ ಮಳೆಯಿಂದ ಆಗಿರುವ ಹಾನಿಗಳಿಗೆ ತುರ್ತು ಪರಿಹಾರ ಕ್ರಮ ಕೈಗೊಳ್ಳಲು, ರಾಜ್ಯ ವಿಪತ್ತು ಪರಿಹಾರ ನಿಧಿಯಿಂದ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ : ಜಿಲ್ಲಾಧಿಕಾರಿಗಳಿಂದ ಬಂದಿರುವ ಬೇಡಿಕೆ ಪತ್ರಗಳು.

ಪ್ರಸ್ತಾವನೆ :

2011ನೇ ಸಾಲಿನಲ್ಲಿ ಮುಂಗಾರು ಮಳೆಯಿಂದ, ರಾಜ್ಯದಲ್ಲಿ ಉಂಟಾಗಿರುವ ಹಾನಿಗಳಿಗೆ ಜಿಲ್ಲಾಧಿಕಾರಿಗಳು ರಾಜ್ಯ ವಿಪತ್ತು ಪರಿಹಾರ ನಿಧಿಯಿಂದ ಅನುದಾನ ಬಿಡುಗಡೆ ಮಾಡುವಂತೆ ಬೇಡಿಕೆ ಸಲ್ಲಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿಗಳ ಪ್ರಸ್ತಾವನೆಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಮುಂಗಾರು ಮಳೆಯಿಂದ ರಾಜ್ಯದಲ್ಲಿ ಉಂಟಾಗಿರುವ ಹಾನಿಗಳಿಗೆ ರಾಜ್ಯ ವಿಪತ್ತು ಪರಿಹಾರ ನಿಧಿಯಿಂದ ಅನುದಾನ ಬಿಡುಗಡೆ ಮಾಡಲು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಕಂಇ 190 ಟಿಎನ್‌ಆರ್ 2011, ಬೆಂಗಳೂರು, ದಿನಾಂಕ : 20-08-2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಮುಂಗಾರು ಮಳೆಯಿಂದ ರಾಜ್ಯದಲ್ಲಿ ಉಂಟಾಗಿರುವ ಹಾನಿಗಳಿಗೆ ರಾಜ್ಯ ವಿಪತ್ತು ಪರಿಹಾರ ನಿಧಿಯಿಂದ ಈ ಕೆಳಕಂಡಂತೆ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಅನುದಾನ ಬಿಡುಗಡೆ ಮಾಡಲು ಮಂಜೂರಾತಿ ನೀಡಲಾಗಿದೆ.

ಕ್ರಸಂ.	ಜಿಲ್ಲೆಯ ಹೆಸರು	ಬಿಡುಗಡೆ ಮಾಡಿದ ಅನುದಾನ (ರೂ. ಲಕ್ಷಗಳಲ್ಲಿ)
1	ಬಳ್ಳಾರಿ	50.00
2	ಬೀದರ್	100.00
3	ಚಾಮರಾಜನಗರ	50.00
4	ಚಿಕ್ಕಮಗಳೂರು	50.00
5	ಚಿಕ್ಕಬಳ್ಳಾಪುರ	50.00
6	ಚಿತ್ರದುರ್ಗ	50.00
7	ಗದಗ್	50.00
8	ಗುಲ್ಬರ್ಗಾ	50.00
9	ಕಾರವಾರ	100.00
10	ಕೋಲಾರ	100.00
11	ಮಡಿಕೇರಿ	100.00

12	ಮೈಸೂರು	50.00
13	ರಾಮನಗರ	50.00
14	ತುಮಕೂರು	50.00
15	ಉಡುಪಿ	50.00
	ಒಟ್ಟು	950.00

(ರೂ. ಒಂಭೈನೂರ ಐವತ್ತು ಲಕ್ಷಗಳು ಮಾತ್ರ)

1. ಮೇಲಿನಂತೆ ಬಿಡುಗಡೆ ಮಾಡಿದ ಹಣವನ್ನು ಈ ಕೆಳಕಂಡಂತೆ ಆದ್ಯತೆಯ ಮೇರೆಗೆ ಉಪಯೋಗಿಸುವುದು.

(ಅ) ಮಾನವ/ಪ್ರಾಣಿ ಜೀವಹಾನಿ

(ಆ) ಮನೆ ಹಾನಿ

(ಇ) ಬೆಳೆ ಹಾನಿ

(ಈ) ಕುಡಿಯುವ ನೀರಿನ ವ್ಯವಸ್ಥೆ

(ಉ) ಜಾನುವಾರುಗಳ ಸಂರಕ್ಷಣೆ

(ಊ) ಹಾನಿಗೊಳಗಾದ ಮೂಲಭೂತ ಸೌಕರ್ಯಗಳಿಗೆ ತುರ್ತು ರಿಪೇರಿ.

2. ಕೇಂದ್ರ ಸರ್ಕಾರವು ಹೊರಡಿಸಿರುವ ಮಾರ್ಗಸೂಚಿಗಳ ಪ್ರಕಾರ ವೆಚ್ಚ ಮಾಡುವುದು.

3. ಅನುದಾನ ಲಭ್ಯತೆ ಇಲ್ಲದೇ ಯಾವುದೇ ದುರಸ್ತಿ ಕಾಮಗಾರಿಗಳನ್ನು ಎಸ್.ಡಿ.ಆರ್.ಎಫ್./ಎನ್.ಸಿ.ಸಿ.ಎಫ್ ಅಡಿಯಲ್ಲಿ ಕೈಗೊಳ್ಳುವಂತಿಲ್ಲ. ಹಾಗೂ ಕಾಮಗಾರಿಗಳನ್ನು ಬಿಡುಗಡೆಯಾದ ಅನುದಾನಕ್ಕೆ ಸೀಮಿತಗೊಳಿಸುವುದು.

4. ಪ್ರಕೃತಿ ವಿಕೋಪದಿಂದ ಆದಂತಹ ವಿಪತ್ತು ಹಾನಿಗೆ ಮಾತ್ರ ಪರಿಹಾರ ನೀಡುವುದು.

ಮೇಲಿನಂತೆ ಬಿಡುಗಡೆ ಮಾಡಿರುವ ಅನುದಾನವನ್ನು ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಧಿಕಾರಿಗಳು ಪೇಬಿಲ್ ರಸೀದಿ ಬಿಲ್ಲುಗಳನ್ನು ತಯಾರಿಸಿ ಮೇಲು ರುಜು ಮಾಡಿ ಜಿಲ್ಲಾ ಖಜಾನೆಯಿಂದ ಡ್ರಾ ಮಾಡಿ ಎಸ್.ಡಿ.ಆರ್.ಎಫ್ ಖಾತೆಗೆ ಜಮಾ ಮಾಡಿದ ನಂತರ ಪರಿಹಾರ ಕಾರ್ಯಗಳಿಗೆ ಉಪಯೋಗಿಸತಕ್ಕದ್ದು.

ಮೇಲಿನಂತೆ ಬಿಡುಗಡೆ ಮಾಡಿರುವ ಅನುದಾನವನ್ನು 2011-12ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆ 2245-02-110-0-01-100 (ಯೋಜನೇತರ) ಅಡಿಯಲ್ಲಿ ಭರಿಸತಕ್ಕದ್ದು.

ಅನುದಾನ ವೆಚ್ಚ ಮಾಡುವಾಗ ಸರ್ಕಾರವು ಕಾಲಕಾಲಕ್ಕೆ ಹೊರಡಿಸುವ ಮಾರ್ಗಸೂಚಿ/ಆದೇಶ/ಸುತ್ತೋಲೆಗಳನ್ನು ಪಾಲಿಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂ. : ಆಇ 499 ವೆಚ್ಚ-7/2011, ದಿನಾಂಕ : 12-08-2011ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಎ.ಎಸ್.ಮದ್ಭಾವಿ

ಸರ್ಕಾರದ ಅಧೀನ ಕಾರ್ಯದರ್ಶಿ

ಕಂದಾಯ ಇಲಾಖೆ

(ವಿಪತ್ತು ನಿರ್ವಹಣೆ ಮತ್ತು ಸೇವೆಗಳು-2)

ಪಿ.ಆರ್. 2121

ಕಾರ್ಮಿಕ ಸಚಿವಾಲಯ

ವಿಷಯ : ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆಯಲ್ಲಿ ವೃತ್ತಿಪರ ಆರೋಗ್ಯ ತಜ್ಞರ ಹುದ್ದೆಯ ವೇತನ ಶ್ರೇಣಿಯನ್ನು ಉನ್ನತೀಕರಿಸುವ ಕುರಿತು.

ಓದಲಾಗಿದೆ :

1. ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆಯ ನಿರ್ದೇಶಕರ ಪತ್ರ ಸಂಖ್ಯೆ : ಇಎಸ್‌ಟಿ-2/ಇತರೆ/ಸಿಆರ್-55/08-09, ದಿನಾಂಕ : 14-10-2008, ಮತ್ತು 07-10-2009.
2. ಸರ್ಕಾರದ ಅಧಿಸೂಚನೆ ಸಂ : ಕಾಇ 7 ಕಾಬಾಸೇ 2004, ದಿನಾಂಕ : 21-02-2004.
3. ಸರ್ಕಾರದ ಅಧಿಸೂಚನೆ ಸಂ : ಕಾಇ 48 ಕಾಬಾಸೇ 2004, ದಿನಾಂಕ : 07-09-2004.
4. ಸರ್ಕಾರದ ಅಧಿಸೂಚನೆ ಸಂ : ಕಾಇ 7 ಕಾಬಾಸೇ 2006, ದಿನಾಂಕ : 17-03-2006.
5. ಸರ್ಕಾರದ ಅಧಿಸೂಚನೆ ಸಂ : ಕಾಇ 41 ಕಾಬಾಸೇ 2009, ದಿನಾಂಕ : 07-08-2009.
6. ಸರ್ಕಾರದ ಅಧಿಸೂಚನೆ ಸಂ. ಕಾಇ 8 ಎಲ್‌ಎಸ್‌ಐ 2008, ದಿನಾಂಕ : 05-12-2008.

ಪ್ರಸ್ತಾವನೆ :

ಡಾ: ಶ್ರೀನಿವಾಸ್ ಹೆಚ್.ಎಂ. ಕಿರಿಯ ತಜ್ಞರು, ಕಾರ್ಮಿಕ ರಾಜ್ಯ ವಿಮಾ (ವೈದ್ಯಕೀಯ) ಮತ್ತು ವೈದ್ಯಕೀಯ ಸೇವೆಗಳ ಇಲಾಖೆ. ಇವರನ್ನು ಮೇಲೆ (2)ರಲ್ಲಿ ಓದಲಾದ ದಿನಾಂಕ : 21-02-2004ರ ಅಧಿಸೂಚನೆಯಲ್ಲಿ ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆಯಲ್ಲಿ ವೃತ್ತಿಪರ ಆರೋಗ್ಯ ತಜ್ಞರ ಹುದ್ದೆಗೆ ವ್ಯಕ್ತಿ ನಿಯೋಜನೆಯ ಆಧಾರದ ಮೇರೆಗೆ ನೇಮಕಾತಿ ಮಾಡಲಾಗಿದೆ. ಈ ನಿಯೋಜನೆಯನ್ನು ಮೇಲೆ (2) ರಿಂದ (5) ವರೆಗೆ ಓದಲಾದ ಅಧಿಸೂಚನೆಗಳ ಮೂಲಕ ಕಾಲ ಕಾಲಕ್ಕೆ ಮುಂದುವರೆಸಲಾಗಿದೆ. ಡಾ: ಶ್ರೀನಿವಾಸ್ ಹೆಚ್.ಎಂ. ರವರು ನಿಯೋಜನೆ ಮೇರೆಗೆ ಕಾರ್ಖಾನೆಗಳು ಮತ್ತು ಬಾಯ್ಲರುಗಳ [illegible] ಹುದ್ದೆಯ ವೇತನ ಶ್ರೇಣಿ ರೂ. 13,200-25,650 ಆಗಿದ್ದು, ಕಾರ್ಖಾನೆಗಳು, [illegible] ವೃತ್ತಿಪರ ಆರೋಗ್ಯ ತಜ್ಞರ ವೇತನ ಶ್ರೇಣಿಯು ಇದಕ್ಕೆ ಸಮಾನವಾಗಿತ್ತು.

ತದನಂತರ ಸರ್ಕಾರದ ಅಧಿಸೂಚನೆ ಸಂ. ಕಾಇ 8 ಎಲ್ಎಸ್ಐ 2008, ದಿನಾಂಕ : 05-12-2008ರ ಮೂಲಕ ಕಾರಾವಿ ಇಲಾಖೆಯ ವೈದ್ಯಾಧಿಕಾರಿಗಳಿಗೆ ಮುಂಬಡ್ತಿ ಇಲ್ಲದೇ ನಿರಂತರವಾಗಿ 6 ವರ್ಷಗಳ ಹಾಗೂ 13 ವರ್ಷಗಳ ಸೇವೆ ಸಲ್ಲಿಸಿದುದಕ್ಕೆ ಕಾಲಬದ್ಧ ಪದೋನ್ನತಿ ಸೌಲಭ್ಯವನ್ನು ವಿಸ್ತರಿಸಲಾಗಿದ್ದು, ಡಾ: ಶ್ರೀನಿವಾಸ್ ಹೆಚ್.ಎಂ. ಇವರು ಸಹ 2 ಕಾಲಬದ್ಧ ಪದೋನ್ನತಿ ಸೌಲಭ್ಯವನ್ನು ಪಡೆದು ಇವರ ವೇತನವು ದಿನಾಂಕ : 07-12-2007ರಿಂದ ಜಾರಿಗೆ ಬರುವಂತೆ ರೂ. 18150-26925 ಗಳಿಗೆ ನಿಗದಿಯಾಗಿರುತ್ತದೆ ಹಾಗೂ ಕಾರ್ಮಿಕ ರಾಜ್ಯ ವಿಮಾ ಯೋಜನೆ (ವೈದ್ಯಕೀಯ) ಸೇವೆಗಳು ಇಲಾಖೆಯಲ್ಲಿನ ಇವರ ಹುದ್ದೆಯ ಪದನಾಮವು ಹಿರಿಯ ತಜ್ಞರು ಎಂದು ಬದಲಾಗಿರುತ್ತದೆ. ಇದರಿಂದಾಗಿ ಈ ಅಧಿಕಾರಿಯವರು ವೃತ್ತಿಪರ ಆರೋಗ್ಯ ತಜ್ಞರ ಹುದ್ದೆಗೆ ನಿಗದಿಪಡಿಸಿರುವ ವೇತನ ಶ್ರೇಣಿಗಿಂತ ಹೆಚ್ಚಿನ ವೇತನ ಶ್ರೇಣಿಯನ್ನು ಪಡೆಯುತ್ತಿರುವ ಕಾರಣ ಈ ಹುದ್ದೆಯಲ್ಲಿ ನಿಯೋಜನೆಯ ಮೇರೆಗೆ ಮುಂದುವರೆಸಿರುವುದನ್ನು ಕ್ರಮಬದ್ಧಗೊಳಿಸಲು ಸದರಿ ಹುದ್ದೆಯ ವೇತನಶ್ರೇಣಿಯನ್ನು ಉನ್ನತೀಕರಿಸುವ ಪ್ರಸ್ತಾವನೆಯನ್ನು ಪರಿಶೀಲಿಸಲಾಯಿತು. ಆ ಪ್ರಕಾರ ಈ ಕೆಳಗಿನಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ : ಕಾಇ 3 ಕಾಬಾಸೇ 2011, ಬೆಂಗಳೂರು, ದಿನಾಂಕ : 19-08-2011

ಮೇಲೆ ವಿವರಿಸಿರುವ ಕಾರಣಗಳಿಂದಾಗಿ ಕಾರ್ಖಾನೆಗಳು, ಬಾಯ್ಲರುಗಳು ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆಯ ವೃತ್ತಿಪರ ಆರೋಗ್ಯ ತಜ್ಞರ ಹುದ್ದೆಯಲ್ಲಿ ಕಾರ್ಮಿಕ ರಾಜ್ಯ ವಿಮಾ ಯೋಜನೆ (ವೈದ್ಯಕೀಯ) ಸೇವೆಗಳು, ಇಲಾಖೆಯ ಹಿರಿಯ ತಜ್ಞರಾದ ಡಾ: ಶ್ರೀನಿವಾಸ್ ಹೆಚ್.ಎಂ. ಇವರ ಸೇವೆಯು ನಿಯೋಜನೆ ಆಧಾರದ ಮೇರೆಗೆ ಅವಶ್ಯವಿರುವ ತನಕ ಅಥವಾ ಮುಂದಿನ ಆದೇಶದವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ವೃತ್ತಿಪರ ಆರೋಗ್ಯ ತಜ್ಞ ಹುದ್ದೆಯ ವೇತನ ಶ್ರೇಣಿಯನ್ನು 15,200-25,650/- ರಿಂದ ರೂ. 18,150-26925ಕ್ಕೆ ಉನ್ನತೀಕರಿಸಲು ಮಂಜೂರಾತಿ ನೀಡಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂ.ಆಇ 274 ವೆಚ್ಚ-9/11, ದಿನಾಂಕ : 27-07-2011ರ ಮೂಲಕ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ.

ಬಿ. ಶಿವರಾಮ ಗೌಡ

ಸರ್ಕಾರದ ಅಧೀನ ಕಾರ್ಯದರ್ಶಿ

ಕಾರ್ಮಿಕ ಇಲಾಖೆ

(ಕಾರ್ಖಾನೆ ಮತ್ತು ಬಾಯ್ಲರುಗಳು)

ಪಿ.ಆರ್. 2122

ಕಾರ್ಮಿಕ ಸಚಿವಾಲಯ

ವಿಷಯ : ಎಂ.ಇ.ಎಸ್. ಯೋಜನೆಯಡಿ ಸ್ವೀಕರಿಸಿದ ಅರ್ಜಿ ಪರಿಶೀಲನಾ ಶುಲ್ಕವನ್ನು ಬ್ಯಾಂಕಿನ ಉಳಿತಾಯ ಖಾತೆಯಲ್ಲಿ ಇಡುವ ಬಗ್ಗೆ.

ಓದಲಾಗಿದೆ : ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆ ಇವರ ಪತ್ರ ಸಂ. ಉತಇ/ತರಬೇತಿ/ಎಂ.ಇ.ಎಸ್./ವಿವ-10/2008-09, ದಿನಾಂಕ : 23-4-2010.

ಪ್ರಸ್ತಾವನೆ :

ಮೇಲೆ ಓದಲಾದ ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆ ಇವರ ಪತ್ರದಲ್ಲಿ ಎಂ.ಇ.ಎಸ್. ಯೋಜನೆ ಅಡಿಯಲ್ಲಿ ವಿಟಿಪಿ (Vocational Training Provider) ಆಗಿ ಅರ್ಜಿ ಸಲ್ಲಿಸುವ ಖಾಸಗಿ ಕೈಗಾರಿಕಾ ತರಬೇತಿ ಕೇಂದ್ರಗಳು ಹಾಗೂ ಸರ್ಕಾರೇತರ ಸಂಘ ಸಂಸ್ಥೆಗಳಿಂದ ತಲಾ ರೂ. 2,000 ದಂತೆ ಸ್ವೀಕರಿಸಿದ ಅರ್ಜಿ ಪರಿಶೀಲನಾ ಶುಲ್ಕವನ್ನು ಎಂ.ಇ.ಎಸ್. ಪ್ರಗತಿಯ ಉದ್ದೇಶಕ್ಕಾಗಿ ಬಳಸಿಕೊಳ್ಳಲು ಕೇಂದ್ರ ಸರ್ಕಾರದ ಸ್ಪಷ್ಟ ನಿರ್ದೇಶನವಿರುತ್ತದೆಯೆಂದು ತಿಳಿಸುತ್ತಾ ಈ ಹಿನ್ನೆಲೆಯಲ್ಲಿ ಸಂಘ ಸಂಸ್ಥೆಗಳಿಂದ ಸ್ವೀಕರಿಸಿದ ಅರ್ಜಿ ಪರಿಶೀಲನಾ ಶುಲ್ಕದ ಹಣವನ್ನು ಬ್ಯಾಂಕಿನ ಉಳಿತಾಯ ಖಾತೆಯಲ್ಲಿಟ್ಟು ಹಂತ ಹಂತವಾಗಿ ಬಳಸಿಕೊಳ್ಳಲು ಅನುಮತಿ ನೀಡುವಂತೆ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿದ ನಂತರ ಕೆಳಗಿನಂತೆ ಆದೇಶಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ : ಕಾಇ 122 ಇಟಐ 2010(1), ಬೆಂಗಳೂರು, ದಿನಾಂಕ : 26-8-2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಎಂ.ಇ.ಎಸ್. ಯೋಜನೆಯಡಿ ವಿ.ಟಿ.ಪಿ.ಗಳಿಂದ ಸ್ವೀಕರಿಸಲಾಗುವ ಅರ್ಜಿ ಪರಿಶೀಲನಾ ಶುಲ್ಕ ರೂ. 2,000 ಗಳನ್ನು (ಎರಡು ಸಾವಿರ ರೂಪಾಯಿಗಳು ಮಾತ್ರ) ಬ್ಯಾಂಕ್ ಖಾತೆಯಲ್ಲಿಟ್ಟು, ಸಂಸ್ಥೆಯ ಅಭಿವೃದ್ಧಿಗೆ ಬಳಸಿಕೊಳ್ಳುವುದಕ್ಕೆ ಸರ್ಕಾರದ ಮಂಜೂರಾತಿಯನ್ನು ನೀಡಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : ಆಇ 385 ವೆಚ್ಚ-9/2011, ದಿನಾಂಕ : 16-8-2011 ರಲ್ಲಿ ನೀಡಿರುವ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಜೆ.ಎಸ್. ವಿಶ್ವನಾಥಪ್ಪ

ಪೀಠಾಧಿಕಾರಿ,

ಕಾರ್ಮಿಕ ಇಲಾಖೆ (ಉದ್ಯೋಗ ಮತ್ತು ತರಬೇತಿ)

ಪಿ.ಆರ್. 2123

ಆರ್ಥಿಕ ಸಚಿವಾಲಯ

ವಿಷಯ : ಖಜಾನೆ-II, ಅನುಕಲನ ಹಣಕಾಸು ನಿರ್ವಹಣೆ ವ್ಯವಸ್ಥೆಯ ಅನುಷ್ಠಾನಕ್ಕೆ ಸರ್ಕಾರದ ಮಂಜೂರಾತಿ ನೀಡುವ ಬಗ್ಗೆ. (Integrated Financial Management System).

ಪ್ರಸ್ತಾವನೆ :

ಸರ್ಕಾರದ ಸಮಗ್ರ ಹಣಕಾಸು ನಿರ್ವಹಣೆ ವ್ಯವಸ್ಥೆಯನ್ನು ಸ್ಥಾಪಿಸುವ; ಮಹಾಲೇಖಪಾಲರು ಮತ್ತು ಬ್ಯಾಂಕುಗಳಂತಹ ಬಾಹ್ಯ ಏಜೆನ್ಸಿಗಳೊಡನೆ ಸಮನ್ವಯ ಸಾಧಿಸುವ; ನಾಗರೀಕರಿಗೆ ವಿದ್ಯುನ್ಮಾನ ಅಂತರ ಸಂಪರ್ಕ ಸಾಧ್ಯವನ್ನು ಒದಗಿಸುವ ಮೂಲಕ ಮಹತ್ವ ಪೂರ್ಣವಾದ ಸಮರ್ಥ ಆರ್ಥಿಕ ಸುಧಾರಣೆಗಳನ್ನು ತರುವ; ಸರ್ಕಾರದ ಆದಾಯ ಮತ್ತು ಖರ್ಚುವೆಚ್ಚಗಳ ಬಗ್ಗೆ ಮಹತ್ವಪೂರ್ಣವಾದ ಆರ್ಥಿಕ ಸಮಕ್ಷತೆ ಹಾಗೂ ಪರಿಣಾಮಕಾರಿ ಬೆಳವಣಿಗೆಗಳನ್ನು ಉಂಟುಮಾಡುವ ದೃಷ್ಟಿಯಿಂದ ಒಂದು ಸಮಗ್ರ ವ್ಯವಸ್ಥೆ ಹೊಂದುವ ಅಗತ್ಯತೆಯನ್ನು ಸರ್ಕಾರವು ಮನಗಂಡಿದೆ. ಸಾರ್ವಜನಿಕ ಹಣಕಾಸಿನ ದಕ್ಷ, ಪರಿಣಾಮಕಾರಿ ಮತ್ತು ಪಾರದರ್ಶಕ ನಿರ್ವಹಣೆ ಮೂಲಕ ಹಾಗೂ ಹಿತಾಸಕ್ತಿದಾರರ ಹೊಣೆಗಾರಿಕೆಗಳನ್ನು ಹೆಚ್ಚಿಸುವ ಮೂಲಕ ರಾಜ್ಯದ ಅಭಿವೃದ್ಧಿಯನ್ನು ಸುಗಮಗೊಳಿಸಲು ಒಂದು ಸಮಗ್ರ ಹಣಕಾಸು ನಿರ್ವಹಣೆಯ ವ್ಯವಸ್ಥೆಯಾದ ಖಜಾನೆ-II ಹೊಂದುವ ಅವಶ್ಯಕತೆಯನ್ನು ಮನಗಂಡ ಸರ್ಕಾರವು ಸದರೀ ವ್ಯವಸ್ಥೆಯನ್ನು ಆರಂಭಿಸುವ ಸಲುವಾಗಿ ಈ ಮುಂದಿನಂತೆ ಆದೇಶಿಸುತ್ತದೆ.

ಸರ್ಕಾರದ ಆದೇಶ ಸಂಖ್ಯೆ : ಆಇ 138 ಆಖಇ 2011, ಬೆಂಗಳೂರು, ದಿನಾಂಕ : 24ನೇ ಆಗಸ್ಟ್ 2011.

ಪ್ರಸ್ತಾವನೆಯಲ್ಲಿ ವಿವರಿಸಿರುವ ಸನ್ನಿವೇಶಗಳ ಹಿನ್ನೆಲೆಯಲ್ಲಿ ಖಜಾನೆ-2 ಸಮಗ್ರ ಆರ್ಥಿಕ ನಿರ್ವಹಣೆಯ ವ್ಯವಸ್ಥೆ ಯೋಜನೆಯನ್ನು ರೂ. 90.71 ಕೋಟಿಗಳ ವೆಚ್ಚದಲ್ಲಿ ಕೈಗೊಳ್ಳಲು ಈ ಮೂಲಕ ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಎಲ್ಲಾ ಇಲಾಖೆಗಳು ಆರ್ಥಿಕ ಸೂಚನೆಗಳನ್ನು ಹೊಂದಿರುವ ತಮ್ಮ ಆದೇಶಗಳು, ಪತ್ರ ವ್ಯವಹಾರಗಳು, ಸುತ್ತೋಲೆಗಳು, ಇತ್ಯಾದಿಗಳನ್ನು ಕಡ್ಡಾಯವಾಗಿ ಖಜಾನೆ-II ಮೂಲಕವೇ ಹೊರಡಿಸತಕ್ಕದ್ದು.

ಖಜಾನೆ-II ಯೋಜನೆಯ ಅನುಷ್ಠಾನದಲ್ಲಿ ಪಾಲ್ಗೊಳ್ಳುವ ಮುಖ್ಯ ನಿಯಂತ್ರಣಾಧಿಕಾರಿಗಳು, ನಿಯಂತ್ರಣಾಧಿಕಾರಿಗಳು ಹಾಗೂ ಸಂಬಂಧಪಟ್ಟ ಇಲಾಖೆಗಳ ಹಣ ಸೆಳೆಯುವ ಹಾಗೂ ಬಟವಾಡೆ ಅಧಿಕಾರಿಗಳಿಗೆ ಅಗತ್ಯವಾದ ಕಂಪ್ಯೂಟರ್, ಪ್ರಿಂಟರ್, ಇಂಟರನೆಟ್ ಅಥವಾ ಕೆ.ಎಸ್.ಡಬ್ಲ್ಯೂ.ಎ.ಎನ್. ಸಂಪರ್ಕ ಸಾಧನಗಳನ್ನು ಒದಗಿಸಲು ಹಾಗೂ ಈ ಉದ್ದೇಶಕ್ಕಾಗಿ ಕೈಗೊಂಡ ತಾಂತ್ರಿಕ ಮೌಲ್ಯಮಾಪನ, ಅದರ ಕಾರ್ಯವಿಧಾನ ಹಾಗೂ ಅದಕ್ಕೆ ತೆಗೆದುಕೊಂಡ ಸಮಯಗಳಿಗೆ ಈ ಮೂಲಕ ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಎಂ.ಎಸ್. ಶಿವರಾಮ್
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಆಡತಳಿ ಮತ್ತು ಮುಂಗಡ).

ಪಿ.ಆರ್. 2124

FOREST, ECOLOGY & ENVIRONMENT SECRETARIAT

Sub : Implementation of Bio-Medical Waste (Management and Handling) Rules 1998 in Karnataka-reg.

Read : 1. Bio-Medical Waste (Management and Handing) Rules, 1998.

2. Proceedings of the meeting held on 28-4-2011, under the Chairmanship of the Principal Secretary, Forest, Ecology and Environment Department, Government of Karnataka, Bangalore.

Preamble:

The Ministry of Environment and Forests, Government of India have issued the Bio-Medical Waste (Management and Handling) Rules 1998 (BMW Rules), which was amended during the year 2000 and in 2003. The Rules have been framed in view of the fact that unscientific disposal of Bio-Medical Waste (BMW) is a health hazard and hence its treatment and disposal should be done in a scientific manner. In order to achieve the objectives of the BMW rules, several training programmes have been conducted in the past for the staff of both human and animal Health Care Establishments (HCEs). However total implementation of the Rules is yet to be achieved. With improvement of medical facility in the State more and more BMW is being generated and hence the problem requires a greater emphasis and co-ordinated approach among the concerned stakeholders. Hon'ble Lok-Adalat has also given serious attention to the issue. In view of the above, a meeting was also convened under the Chairmanship of the Principal Secretary, Forest, Ecology and Environment Department, Government of Karnataka, on 28-4-2011 wherein a decision was taken to provide an Institutional framework and set up a mechanism at the District level so that the System takes care of proper training and implementation of BMW Rule at District level itself. Accordingly, it was decided in the meeting to constitute a team of 6 members at District level to be called as Trainers Team. This team should initially be trained at Bangalore under the supervision of Environment Management and Policy Research Institute (EMPRI), Bangalore and then assigned with the responsibility of carrying out training on the disposal of BMW to HCEs of their respective districts with the support of EMPRI. The team shall also follow up the implementation of BMW Rules in future. It was further decided that the Deputy Commissioners, Chief Executive Officer of Zilla Panchayats and the District Health Officers shall take keen interest and extend necessary support whenever required. The EMPRI shall act as nodal agency for the training of trainers and of Para Medical staff at District level and shall be responsible for co-ordination at all levels. After examination, Government dicides to constitute trainers team in all the districts. Hence the order :

GOVERNMENT ORDER NO. FEE 22 EPC 2009, BANGALORE, DATED 16-8-2011.

The facts and circumstances explained in the preamble, the Government hereby ordered as follows:-

1. A team consisting of 6 members shall be constituted in each district as 'Trainers team' which shall consist of

- A doctor from the Community Medicine/Microbiology Department in the rank of Associate Professor (or above level) nominated by the Principal of the Medical College in the District.
- A representative from the IMA/ General Practitioners Association of the district.
- Deputy Director/Joint Director of the Department of Animal Husbandry in the Districts
- A Senior Nurse of the District Hospital
- A Senior/Nursing Superintendent of a Private Sector Hospital nominated by the Unit (As per the instructions of the District Health Offices)
- District Nodal Officer of Karnataka Health System Devalopment and Reform Project (KHSDRP)-Co-ordinator.

2. The above team members shall be invited to Bangalore and trained as trainers in a training programme organised by EMPRI.

3. The team member on return to their districts shall take up training programme to all Para-medical staffs in their district in a phased manner, with support of EMPRI.

4. The aforesaid team members shall also be responsible for monitoring the disposal of BMW in the district and shall carry out periodic inspection of Health Care Establishments(HCEs) and shall report to Karnataka State Pollution Control Board/Health Department/Animal Husbandry Department, if lapses are observed.

5. The Department of Health and Family Welfare and the Department of Animal Husbandry shall give necessary instructions to the Departmental officers to support the training programme and the monitoring mechanism at the district level.

6. The District officers of the Health and Family Welfare Department/Animal Husbandry Department shall issue the necessary instructions to HCEs under their control to depute the concerned hospital staff to attend the Training Programmes compulsory, when called.

7. Similar instruction shall also be issued by the district officers of KSPCB to HCEs coming under their jurisdiction.

8. The EMPRI shall partner with M.S. Ramaiah Medical College, in the Department of Community Medicine, Bangalore so as to obtain the technical knowledge, skill and expertise on total BMW management during the training programme. In order to formalise the collaboration, the EMPRI may enter into a 'Memorandum of Understanding' with M.S. Ramaiah Medical College, Bangalore.

9. The Deputy Commissioner, the CEOs of Zilla Panchayats and the District officers of the Health and Family Welfare Department/Animal Husbandry Department shall take keen interest whenever their support is required, for the success of the training programme. They may call a meeting and review implementation of BMW rules whenever needed.

10. The EMPRI shall act as a nodal agency for Trainers Training Programme and District level trainings and shall be responsible for coordination at all levels. The effectiveness of the training programme shall be reviewed at Government level from time to time.

By Order and in the name of the Governor of Karnataka,

B. MANOHAR

Under Secretary to Government,

(Ecology and Environment)

Forest, Ecology & Environment Department.

P.R. No. 2125

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಕರ್ನಾಟಕ ಲೋಕಾಯುಕ್ತ ಸಂಸ್ಥೆಯಲ್ಲಿ ಜಂಟಿ ನಿರ್ದೇಶಕರು (ಸಾಂಖ್ಯಿಕ) ಹುದ್ದೆಗೆ ಶ್ರೀ ಜಯದೇವ ಪ್ರಕಾಶ್‌ರವರನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿರುವುದರ ಷರತ್ತು ಮತ್ತು ನಿಬಂಧನೆಗಳು.

ಓದಲಾಗಿದೆ : ಅಧಿಸೂಚನೆ ಸಂಖ್ಯೆ : ಸಿಆಸುಇ 68 ಸೇಲೋಯು 2011, ದಿನಾಂಕ : 4-6-2011.

ಪ್ರಸ್ತಾವನೆ :

ಮೇಲೆ ಓದಲಾದ ದಿನಾಂಕ : 4-6-2011 ರ ಅಧಿಸೂಚನೆಯಲ್ಲಿ ಶ್ರೀ ಜಯದೇವ ಪ್ರಕಾಶ್, ನಿವೃತ್ತ ಜಂಟಿ ನಿರ್ದೇಶಕರು (ಸಾಂಖ್ಯಿಕ), ಕರ್ನಾಟಕ ಲೋಕಾಯುಕ್ತ ಇವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಒಂದು ವರ್ಷದ ಅವಧಿಗೆ ಕರ್ನಾಟಕ ಲೋಕಾಯುಕ್ತ ಸಂಸ್ಥೆಯಲ್ಲಿ ಖಾಲಿಯಿರುವ ಜಂಟಿ ನಿರ್ದೇಶಕರು (ಸಾಂಖ್ಯಿಕ) ಹುದ್ದೆಗೆ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಲಾಗಿದ್ದು ಇವರ ನೇಮಕಾತಿಯ ಷರತ್ತು ಮತ್ತು ನಿಬಂಧನೆಗಳನ್ನು ನಿಗದಿಪಡಿಸಿ ಈ ಕೆಳಕಂಡಂತೆ ಆದೇಶಿಸಿದೆ :-

ಸರ್ಕಾರಿ ಆದೇಶ ಸಂಖ್ಯೆ : ಸಿಆಸುಇ 68 ಸೇಲೋಯು 2011, ಬೆಂಗಳೂರು, ದಿನಾಂಕ : 24-8-2011.

ಕರ್ನಾಟಕ ಲೋಕಾಯುಕ್ತ ಸಂಸ್ಥೆಯಲ್ಲಿರುವ ಜಂಟಿ ನಿರ್ದೇಶಕರ (ಸಾಂಖ್ಯಿಕ) ಹುದ್ದೆಯಲ್ಲಿ ಗುತ್ತಿಗೆ ಆಧಾರದ ಮೇಲೆ ದಿನಾಂಕ : 6-6-2011 ರಿಂದ ಕರ್ತವ್ಯ ನಿರ್ವಹಿಸುತ್ತಿರುವ ಶ್ರೀ ಜಯದೇವ ಪ್ರಕಾಶ್, ಇವರ ನೇಮಕಾತಿಯ ಷರತ್ತು ಮತ್ತು ನಿಬಂಧನೆಗಳು ಈ ಕೆಳಕಂಡಂತಿರುತ್ತವೆ :

1. ಶ್ರೀ ಜಯದೇವ ಪ್ರಕಾಶ್ ರವರ ಗುತ್ತಿಗೆ ಆಧಾರದ ನೇಮಕಾತಿಯು ದಿನಾಂಕ 6-6-2011 ರಿಂದ 5-6-2012 ರ ಅವಧಿಯವರೆಗೆ ಅಥವಾ ಮುಂದಿನ ಆದೇಶ ಹೊರಡಿಸುವವರೆಗೆ ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಮಾತ್ರ ಇದ್ದು, ಇದೊಂದು ತಾತ್ಕಾಲಿಕ ನೇಮಕಾತಿ ಆಗಿರುತ್ತದೆ.

2. ಶ್ರೀ ಜಯದೇವ ಪ್ರಕಾಶ್ ಇವರು ಪಡೆಯುತ್ತಿರುವ ನಿವೃತ್ತಿ ವೇತನದೊಂದಿಗೆ ರೂ. 11,400/- ಮರುನೇಮಕಾತಿ ವೇತನವನ್ನು ಪಡೆಯಲು ಅರ್ಹರಾಗಿರುತ್ತಾರೆ. ಈ ವೇತನದ ಜೊತೆಗೆ ಅವರು ನಿವೃತ್ತಿ ಹೊಂದುವಾಗ ಪಡೆಯುತ್ತಿದ್ದ ಮೂಲ ವೇತನದ ಮೇಲೆ ಕಾಲಕಾಲಕ್ಕೆ ಲಭ್ಯವಾಗುವ

ತುಟ್ಟಿಭತ್ಯೆ, ಮನೆ ಬಾಡಿಗೆ ಭತ್ಯೆ, ನಗರ ಪರಿಹಾರ ಭತ್ಯೆಯನ್ನು ಪಡೆಯಲು ಅರ್ಹರಾಗಿರುತ್ತಾರೆ. ಆದರೆ ಅವರು ಪಡೆಯುತ್ತಿರುವ ನಿವೃತ್ತಿ ವೇತನದ ಮೇಲೆ ತುಟ್ಟಿಭತ್ಯೆ ಸೇರಿದಂತೆ ಯಾವುದೇ ಇತರ ಭತ್ಯೆಗಳು ಲಭ್ಯವಿರುವುದಿಲ್ಲ.

3. ಸದರಿ ಗುತ್ತಿಗೆ ನೌಕರರು ಸಾರ್ವಜನಿಕ ಹಿತದೃಷ್ಟಿಯಿಂದ ಪ್ರಯಾಣ ಮಾಡಲೇಬೇಕಾದಲ್ಲಿ ಮಾತ್ರ ಅವರು ನೇಮಕಾತಿ ಹೊಂದಿರುವ ಹುದ್ದೆಯ ಕಾಲಿಕ ವೇತನ ಶ್ರೇಣಿಯ ಕನಿಷ್ಠ ವೇತನದ ಮೇಲೆ ನಿಯಮಾನುಸಾರ ಲಭ್ಯವಿರುವ ಪ್ರಯಾಣ ಭತ್ಯೆ ಮತ್ತು ದಿನಭತ್ಯೆಯನ್ನು ಪಡೆಯಲು ಅರ್ಹರಾಗಿರುತ್ತಾರೆ.

4. ಸದರಿ ಗುತ್ತಿಗೆ ನೌಕರರುಗಳು ವಾರ್ಷಿಕ 15 ದಿನಗಳ ಸಾಂದರ್ಭಿಕ ರಜೆ ಮತ್ತು ಕೆ.ಸಿ.ಎಸ್.ಆರ್. ನಿಯಮ 150ರ ಪ್ರಕಾರ ಗಳಿಕೆ ರಜೆ ಪಡೆಯಲು ಅರ್ಹರಾಗಿರುತ್ತಾರೆ.

5. ಒಪ್ಪಂದದ ಷರತ್ತು ಮತ್ತು ನಿಬಂಧನೆಗಳಲ್ಲಿ ನೀಡಿರುವ ಸೌಲಭ್ಯಗಳ ಹೊರತಾಗಿ ಬೇರಾವುದೇ ಸೌಲಭ್ಯಕ್ಕೆ ಅಂದರೆ ವೇತನ ಬಡ್ತಿ, ಪದೋನ್ನತಿ, ಪಿಂಚಣಿ ಇತ್ಯಾದಿ ಸೌಲಭ್ಯಗಳಿಗೆ ಸದರಿ ಗುತ್ತಿಗೆ ನೌಕರರು ಅರ್ಹರಾಗಿರುವುದಿಲ್ಲ.

6. ಸದರಿ ನೌಕರರು ದುರ್ವರ್ತನೆ, ನಿರ್ಲಕ್ಷತೆಯ ನಿಮಿತ್ತ ಸರ್ಕಾರಕ್ಕೆ ಸಂಬಂಧಿಸಬಹುದಾದ ಎಲ್ಲಾ ನಷ್ಟಗಳನ್ನು ಸರ್ಕಾರಕ್ಕೆ ಸದರಿ ನೌಕರರು ಭರಿಸಿಕೊಡಲು ಬದ್ಧರಾಗಿರತಕ್ಕದ್ದು.

7. ಸದರಿ ಮರುನೇಮಕಾತಿ ಅವಧಿಯ ಸೇವೆಯನ್ನು ನಿವೃತ್ತಿ ವೇತನ ಹಾಗೂ ಇತ್ಯಾದಿ ಸೌಲಭ್ಯಗಳಿಗೆ ಅರ್ಹತಾದಾಯಕ ಸೇವೆಯೆಂದು ಪರಿಗಣಿಸುವುದಿಲ್ಲ.

8. ಅವರ ಕರ್ತವ್ಯ, ಕಾರ್ಯ ಮತ್ತು ಪ್ರಕಾರ್ಯಗಳನ್ನು ಶ್ರದ್ಧೆ, ಭಕ್ತಿ ಮತ್ತು ಆಸಕ್ತಿಯಿಂದ ಅವರು ನೆರವೇರಿಸುವುದು.

9. ಅವರು ಕರ್ತವ್ಯಗಳನ್ನು ಪಾಲಿಸುತ್ತಿರುವ ಅಥವಾ ನೆರವೇರಿಸುತ್ತಿರುವಾಗ ಅವರಿಗೆ ಲಭ್ಯವಾಗಬಹುದಾದ ಅಥವಾ ದೊರಕಬಹುದಾದ ಅಧಿಕೃತ ಮಾಹಿತಿಯನ್ನು ಗೌಪ್ಯವಾಗಿಟ್ಟು ಕಟ್ಟುನಿಟ್ಟಾಗಿ ಪಾಲಿಸಬೇಕು.

10. 1966ರ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ ಮತ್ತು 1957ರ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗೆ ಅವರು ಬದ್ಧರಾಗಿರುತ್ತಾರೆ.

11. ಈ ಒಪ್ಪಂದದ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಗುತ್ತಿಗೆ ನೇಮಕಾತಿಯು ತಾನಾಗಿಯೇ ಮುಕ್ತಾಯವಾಗುತ್ತದೆ.

12. ಅವರ ದುರ್ನಡತೆಯಿಂದಾಗಲೀ ಅಥವಾ ನಿರ್ಲಕ್ಷತೆ, ಉದಾಸೀನತೆಯಿಂದಾಗಲೀ ಸರ್ಕಾರಕ್ಕೆ ಸಂಬಂಧಿಸಿದಂತೆ ಆರ್ಥಿಕ ನಷ್ಟವನ್ನು ಉಂಟು ಮಾಡಿದ್ದಲ್ಲಿ, ಅದನ್ನು ಸರ್ಕಾರಕ್ಕೆ ತುಂಬಿಕೊಡಲು ಅವರು ಹೊಣೆಯಾಗಿರುತ್ತಾರೆ.

13. ಈ ಆದೇಶವನ್ನು ಸ್ವೀಕರಿಸಿದ ದಿನಾಂಕದಿಂದ ಏಳು ದಿನಗಳ ಒಳಗಾಗಿ ಐವತ್ತು (ರೂ.50/-) ರೂಪಾಯಿಗಳ ಮೌಲ್ಯದ ಛಾಪಾ ಕಾಗದದಲ್ಲಿ ಸದರಿ ನೇಮಕಾತಿಯ ಷರತ್ತು ಮತ್ತು ನಿಬಂಧನೆಗಳನ್ನು ಒಳಗೊಂಡಿರುವ ಕರಾರು ಪತ್ರವನ್ನು ಕ್ರಮಬದ್ಧ ರೀತಿಯಲ್ಲಿ ಸದರಿ ನೌಕರರಿಂದ ಬರೆಯಿಸಿಕೊಳ್ಳತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : ಆಇ 872 ಸೇ-3/11 ದಿನಾಂಕ : 11-8-2011 ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಪಿ. ಮಾರ್ಕಂಡೇಯ
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವಾ ನಿಯಮಗಳು-2).

ಪಿ.ಆರ್. 2126

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ವಿಷಯ : ಶ್ರೀ ಎ.ಆರ್. ದೇಶಪಾಂಡೆ, ನಿವೃತ್ತ ಜಿಲ್ಲಾ ನ್ಯಾಯಾಧೀಶರು, ಇವರನ್ನು ಕರ್ನಾಟಕ ಲೋಕಾಯುಕ್ತ ಸಂಸ್ಥೆಯಲ್ಲಿ ಅಪರ ನಿಬಂಧಕರ (ವಿಚಾರಣೆಗಳು) ಹುದ್ದೆಗೆ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿರುವುದರ ಷರತ್ತು ಮತ್ತು ನಿಬಂಧನೆಗಳು.

ಓದಲಾಗಿದೆ : ಅಧಿಸೂಚನೆ ಸಂಖ್ಯೆ : ಸಿಆಸುಇ 232 ಸೇಲೋಯು 2010, ದಿನಾಂಕ : 3-1-2011.

ಪ್ರಸ್ತಾವನೆ :

ಮೇಲೆ ಓದಲಾದ ದಿನಾಂಕ : 3-1-2011 ರ ಅಧಿಸೂಚನೆಯಲ್ಲಿ ಶ್ರೀ ಎ.ಆರ್. ದೇಶಪಾಂಡೆ, ನಿವೃತ್ತ ಜಿಲ್ಲಾ ನ್ಯಾಯಾಧೀಶರು, ಇವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಎರಡು ವರ್ಷಗಳ ಅವಧಿಗೆ ಕರ್ನಾಟಕ ಲೋಕಾಯುಕ್ತ ಸಂಸ್ಥೆಯಲ್ಲಿ ಖಾಲಿಯಿರುವ ಅಪರ ನಿಬಂಧಕ (ವಿಚಾರಣೆಗಳು) ಹುದ್ದೆಗೆ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಲಾಗಿದ್ದು ಇವರ ನೇಮಕಾತಿಯ ಷರತ್ತು ಮತ್ತು ನಿಬಂಧನೆಗಳನ್ನು ನಿಗದಿಪಡಿಸಿ ಈ ಕೆಳಕಂಡಂತೆ ಆದೇಶಿಸಿದೆ :-

ಸರ್ಕಾರಿ ಆದೇಶ ಸಂಖ್ಯೆ : ಸಿಆಸುಇ 232(1) ಸೇಲೋಯು 2010, ಬೆಂಗಳೂರು, ದಿನಾಂಕ : 24-8-2011.

ಕರ್ನಾಟಕ ಲೋಕಾಯುಕ್ತ ಸಂಸ್ಥೆಯಲ್ಲಿರುವ ಅಪರ ನಿಬಂಧಕರ (ವಿಚಾರಣೆಗಳು) ಹುದ್ದೆಯಲ್ಲಿ ಗುತ್ತಿಗೆ ಆಧಾರದ ಮೇಲೆ ದಿನಾಂಕ 21-1-2011 ರಿಂದ ಕರ್ತವ್ಯ ನಿರ್ವಹಿಸುತ್ತಿರುವ ಶ್ರೀ ಎ.ಆರ್. ದೇಶಪಾಂಡೆ, ನಿವೃತ್ತ ಜಿಲ್ಲಾ ನ್ಯಾಯಾಧೀಶರು ಇವರ ನೇಮಕಾತಿಯ ಷರತ್ತು ಮತ್ತು ನಿಬಂಧನೆಗಳು ಈ ಕೆಳಕಂಡಂತಿರುತ್ತವೆ :

1. ಶ್ರೀ ಎ.ಆರ್. ದೇಶಪಾಂಡೆ, ರವರ ಗುತ್ತಿಗೆ ಆಧಾರದ ನೇಮಕಾತಿಯು ದಿನಾಂಕ 21-1-2011 ರಿಂದ 20-1-2013 ರ ಅವಧಿಯವರೆಗೆ ಅಥವಾ ಮುಂದಿನ ಆದೇಶ ಹೊರಡಿಸುವವರೆಗೆ ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಮಾತ್ರ ಇದ್ದು, ಇದೊಂದು ತಾತ್ಕಾಲಿಕ ನೇಮಕಾತಿ ಆಗಿರುತ್ತದೆ.

2. ಶ್ರೀ ಎ.ಆರ್. ದೇಶಪಾಂಡೆ, ಇವರು ಪಡೆಯುತ್ತಿರುವ ನಿವೃತ್ತಿ ವೇತನದೊಂದಿಗೆ ರೂ. 22,105/- ಮರುನೇಮಕಾತಿ ವೇತನವನ್ನು ಪಡೆಯಲು ಅರ್ಹರಾಗಿರುತ್ತಾರೆ. ಈ ವೇತನದ ಜೊತೆಗೆ ಅವರು ನಿವೃತ್ತಿ ಹೊಂದುವಾಗ ಪಡೆಯುತ್ತಿದ್ದ ಮೂಲ ವೇತನದ ಮೇಲೆ ಕಾಲಕಾಲಕ್ಕೆ ಲಭ್ಯವಾಗು

ತುಟ್ಟಿಭತ್ಯೆ, ಮನೆ ಬಾಡಿಗೆ ಭತ್ಯೆ, ನಗರ ಪರಿಹಾರ ಭತ್ಯೆಯನ್ನು ಪಡೆಯಲು ಅರ್ಹರಾಗಿರುತ್ತಾರೆ. ಆದರೆ ಅವರು ಪಡೆಯುತ್ತಿರುವ ನಿವೃತ್ತಿ ವೇತನದ ಮೇಲೆ ತುಟ್ಟಿಭತ್ಯೆ ಸೇರಿದಂತೆ ಯಾವುದೇ ಇತರ ಭತ್ಯೆಗಳು ಲಭ್ಯವಿರುವುದಿಲ್ಲ.

3. ಸದರಿ ಗುತ್ತಿಗೆ ನೌಕರರು ಸಾರ್ವಜನಿಕ ಹಿತದೃಷ್ಟಿಯಿಂದ ಪ್ರಯಾಣ ಮಾಡಲೇಬೇಕಾದಲ್ಲಿ ಮಾತ್ರ ಅವರು ನೇಮಕಾತಿ ಹೊಂದಿರುವ ಹುದ್ದೆಯ ಕಾಲಿಕ ವೇತನ ಶ್ರೇಣಿಯ ಕನಿಷ್ಠ ವೇತನದ ಮೇಲೆ ನಿಯಮಾನುಸಾರ ಲಭ್ಯವಿರುವ ಪ್ರಯಾಣ ಭತ್ಯೆ ಮತ್ತು ದಿನಭತ್ಯೆಯನ್ನು ಪಡೆಯಲು ಅರ್ಹರಾಗಿರುತ್ತಾರೆ.

4. ಸದರಿ ಗುತ್ತಿಗೆ ನೌಕರರುಗಳು ವಾರ್ಷಿಕ 15 ದಿನಗಳ ಸಾಂದರ್ಭಿಕ ರಜೆ ಮತ್ತು ಕೆ.ಸಿ.ಎಸ್.ಆರ್. ನಿಯಮ 150ರ ಪ್ರಕಾರ ಗಳಿಕೆ ರಜೆ ಪಡೆಯಲು ಅರ್ಹರಾಗಿರುತ್ತಾರೆ.

5. ಒಪ್ಪಂದದ ಷರತ್ತು ಮತ್ತು ನಿಬಂಧನೆಗಳಲ್ಲಿ ನೀಡಿರುವ ಸೌಲಭ್ಯಗಳ ಹೊರತಾಗಿ ಬೇರಾವುದೇ ಸೌಲಭ್ಯಕ್ಕೆ ಅಂದರೆ ವೇತನ ಬಡ್ತಿ, ಪದೋನ್ನತಿ, ಪಿಂಚಣಿ ಇತ್ಯಾದಿ ಸೌಲಭ್ಯಗಳಿಗೆ ಸದರಿ ಗುತ್ತಿಗೆ ನೌಕರರು ಅರ್ಹರಾಗಿರುವುದಿಲ್ಲ.

6. ಸದರಿ ನೌಕರರು ದುರ್ವರ್ತನೆ, ನಿರ್ಲಕ್ಷತೆಯ ನಿಮಿತ್ತ ಸರ್ಕಾರಕ್ಕೆ ಸಂಬಂಧಿಸಬಹುದಾದ ಎಲ್ಲಾ ನಷ್ಟಗಳನ್ನು ಸರ್ಕಾರಕ್ಕೆ ಸದರಿ ನೌಕರರು ಭರಿಸಿಕೊಡಲು ಬದ್ಧರಾಗಿರತಕ್ಕದ್ದು.

7. ಸದರಿ ಮರುನೇಮಕಾತಿ ಅವಧಿಯ ಸೇವೆಯನ್ನು ನಿವೃತ್ತಿ ವೇತನ ಹಾಗೂ ಇತ್ಯಾದಿ ಸೌಲಭ್ಯಗಳಿಗೆ ಅರ್ಹತಾದಾಯಕ ಸೇವೆಯೆಂದು ಪರಿಗಣಿಸುವುದಿಲ್ಲ.

8. ಅವರ ಕರ್ತವ್ಯ, ಕಾರ್ಯ ಮತ್ತು ಪ್ರಕಾರ್ಯಗಳನ್ನು ಶ್ರದ್ಧೆ, ಭಕ್ತಿ ಮತ್ತು ಆಸಕ್ತಿಯಿಂದ ಅವರು ನೆರವೇರಿಸುವುದು.

9. ಅವರು ಕರ್ತವ್ಯಗಳನ್ನು ಪಾಲಿಸುತ್ತಿರುವ ಅಥವಾ ನೆರವೇರಿಸುತ್ತಿರುವಾಗ ಅವರಿಗೆ ಲಭ್ಯವಾಗಬಹುದಾದ ಅಥವಾ ದೊರಕಬಹುದಾದ ಅಧಿಕೃತ ಮಾಹಿತಿಯನ್ನು ಗೌಪ್ಯವಾಗಿಟ್ಟು ಕಟ್ಟುನಿಟ್ಟಾಗಿ ಪಾಲಿಸಬೇಕು.

10. 1966ರ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ ಮತ್ತು 1957ರ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗೆ ಅವರು ಬದ್ಧರಾಗಿರುತ್ತಾರೆ.

11. ಈ ಒಪ್ಪಂದದ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಗುತ್ತಿಗೆ ನೇಮಕಾತಿಯು ತಾನಾಗಿಯೇ ಮುಕ್ತಾಯವಾಗುತ್ತದೆ.

12. ಅವರ ದುರ್ನಡತೆಯಿಂದಾಗಲೀ ಅಥವಾ ನಿರ್ಲಕ್ಷತೆ, ಉದಾಸೀನತೆಯಿಂದಾಗಲೀ ಸರ್ಕಾರಕ್ಕೆ ಸಂಬಂಧಿಸಿದಂತೆ ಆರ್ಥಿಕ ನಷ್ಟವನ್ನು ಉಂಟು ಮಾಡಿದ್ದಲ್ಲಿ, ಅದನ್ನು ಸರ್ಕಾರಕ್ಕೆ ತುಂಬಿಕೊಡಲು ಅವರು ಹೊಣೆಯಾಗಿರುತ್ತಾರೆ.

13. ಈ ಆದೇಶವನ್ನು ಸ್ವೀಕರಿಸಿದ ದಿನಾಂಕದಿಂದ ಏಳು ದಿನಗಳ ಒಳಗಾಗಿ ಐವತ್ತು (ರೂ.50/-) ರೂಪಾಯಿಗಳ ಮೌಲ್ಯದ ಛಾಪಾ ಕಾಗದದಲ್ಲಿ ಸದರಿ ನೇಮಕಾತಿಯ ಷರತ್ತು ಮತ್ತು ನಿಬಂಧನೆಗಳನ್ನು ಒಳಗೊಂಡಿರುವ ಕರಾರು ಪತ್ರವನ್ನು ಕ್ರಮಬದ್ಧ ರೀತಿಯಲ್ಲಿ ಸದರಿ ನೌಕರರಿಂದ ಬರೆಯಿಸಿಕೊಳ್ಳತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : ಆಇ 647 ವೆಚ್ಚ-12/11 ದಿನಾಂಕ : 5-8-2011 ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ. ಮಾರ್ಕಂಡೇಯ

ಪಿ.ಆರ್. 2127

ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವಾ ನಿಯಮಗಳು-2).

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಶ್ರೀ ಕೆಂಚೇಗೌಡ, ನಿವೃತ್ತ ಜಿಲ್ಲಾ ನ್ಯಾಯಾಧೀಶರು, ಇವರನ್ನು ಕರ್ನಾಟಕ ಲೋಕಾಯುಕ್ತ ಸಂಸ್ಥೆಯಲ್ಲಿ ಅಪರ ನಿಬಂಧಕರ (ವಿಚಾರಣೆಗಳು) ಹುದ್ದೆಗೆ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿರುವುದರ ಷರತ್ತು ಮತ್ತು ನಿಬಂಧನೆಗಳು.

ಓದಲಾಗಿದೆ : ಅಧಿಸೂಚನೆ ಸಂಖ್ಯೆ: ಸಿಆಸುಇ 232 ಸೇಲೋಯು 2010, ದಿನಾಂಕ: 3-1-2011

ಪ್ರಸ್ತಾವನೆ :

ಮೇಲೆ ಓದಲಾದ ದಿ: 3-1-2011ರ ಅಧಿಸೂಚನೆಯಲ್ಲಿ ಶ್ರೀ ಕೆಂಚೇಗೌಡ, ನಿವೃತ್ತ ಜಿಲ್ಲೆ ನ್ಯಾಯಾಧೀಶರು, ಇವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಎರಡು ವರ್ಷಗಳ ಅವಧಿಗೆ ಕರ್ನಾಟಕ ಲೋಕಾಯುಕ್ತ ಸಂಸ್ಥೆಯಲ್ಲಿ ಖಾಲಿಯಿರುವ ಅಪರ ನಿಬಂಧಕರ (ವಿಚಾರಣೆಗಳು) ಹುದ್ದೆಗೆ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಲಾಗಿದ್ದು ಇವರ ನೇಮಕಾತಿಯ ಷರತ್ತು ಮತ್ತು ನಿಬಂಧನೆಗಳನ್ನು ನಿಗದಿಪಡಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ : ಸಿಆಸುಇ 232(3) ಸೇಲೋಯು 2010, ಬೆಂಗಳೂರು, ದಿನಾಂಕ : 24/08/2011

ಕರ್ನಾಟಕ ಲೋಕಾಯುಕ್ತ ಸಂಸ್ಥೆಯಲ್ಲಿರುವ ಅಪರ ನಿಬಂಧಕರ (ವಿಚಾರಣೆಗಳು) ಹುದ್ದೆಯಲ್ಲಿ ಗುತ್ತಿಗೆ ಆಧಾರದ ಮೇಲೆ ದಿನಾಂಕ 6-1-2011 ರಿಂದ ಕರ್ತವ್ಯ ನಿರ್ವಹಿಸುತ್ತಿರುವ ಶ್ರೀ ಕೆಂಚೇಗೌಡ, ನಿವೃತ್ತ ಜಿಲ್ಲಾ ನ್ಯಾಯಾಧೀಶರು ಇವರ ನೇಮಕಾತಿಯ ಷರತ್ತು ಮತ್ತು ನಿಬಂಧನೆಗಳು ಈ ಕೆಳಕಂಡಂತಿರುತ್ತವೆ.

1. ಶ್ರೀ ಕೆಂಚೇಗೌಡರವರ ಗುತ್ತಿಗೆ ಆಧಾರದ ನೇಮಕಾತಿಯು ದಿನಾಂಕ 6-1-2011 ರಿಂದ 5-1-2013 ರ ಅವಧಿಯವರೆಗೆ ಅಥವಾ ಮುಂದಿನ ಆದೇಶ ಹೊರಡಿಸುವವರೆಗೆ ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಮಾತ್ರ ಇದ್ದು, ಇದೊಂದು ತಾತ್ಕಾಲಿಕ ನೇಮಕಾತಿ ಆಗಿರುತ್ತದೆ.
2. ಶ್ರೀ ಕೆಂಚೇಗೌಡ ಇವರು ಪಡೆಯುತ್ತಿರುವ ನಿವೃತ್ತಿ ವೇತನದೊಂದಿಗೆ ರೂ. 23,511/- ಮರುನೇಮಕಾತಿ ವೇತನವನ್ನು ಪಡೆಯಲು ಅರ್ಹರಾಗಿರುತ್ತಾರೆ. ಈ ವೇತನದ ಜೊತೆಗೆ ಅವರು ನಿವೃತ್ತಿ ಹೊಂದುವಾಗ ಪಡೆಯುತ್ತಿದ್ದ ಮೂಲ ವೇತನ ಕಾಲಕಾಲಕ್ಕೆ ಲಭ್ಯವಾಗುವ

ತುಟ್ಟಿಭತ್ಯೆ, ಮನೆ ಬಾಡಿಗೆ ಭತ್ಯೆ, ನಗರ ಪರಿಹಾರ ಭತ್ಯೆಯನ್ನು ಪಡೆಯಲು ಅರ್ಹರಾಗಿರುತ್ತಾರೆ. ಆದರೆ ಅವರು ಪಡೆಯುತ್ತಿರುವ ನಿವೃತ್ತಿ ವೇತನದ ಮೇಲೆ ತುಟ್ಟಿಭತ್ಯೆ ಸೇರಿದಂತೆ ಯಾವುದೇ ಇತರ ಭತ್ಯೆಗಳು ಲಭ್ಯವಿರುವುದಿಲ್ಲ.

3. ಸದರಿ ಗುತ್ತಿಗೆ ನೌಕರರು ಸಾರ್ವಜನಿಕ ಹಿತದೃಷ್ಟಿಯಿಂದ ಪ್ರಯಾಣ ಮಾಡಲೇಬೇಕಾದಲ್ಲಿ ಮಾತ್ರ ಅವರು ನೇಮಕಾತಿ ಹೊಂದಿರುವ ಹುದ್ದೆಯ ಕಾಲಿಕ ವೇತನ ಶ್ರೇಣಿಯ ಕನಿಷ್ಠ ವೇತನದ ಮೇಲೆ ನಿಯಮಾನುಸಾರ ಲಭ್ಯವಿರುವ ಪ್ರಯಾಣ ಭತ್ಯೆ ಮತ್ತು ದಿನಭತ್ಯೆಯನ್ನು ಪಡೆಯಲು ಅರ್ಹರಾಗಿರುತ್ತಾರೆ.
4. ಸದರಿ ಗುತ್ತಿಗೆ ನೌಕರರುಗಳು ವಾರ್ಷಿಕ 15 ದಿನಗಳ ಸಾಂದರ್ಭಿಕ ರಜೆ ಮತ್ತು ಕೆ.ಸಿ.ಎಸ್.ಆರ್ಸ್. ನಿಯಮ 150 ರ ಪ್ರಕಾರ ಗಳಿಕೆ ರಜೆ ಪಡೆಯಲು ಅರ್ಹರಾಗಿರುತ್ತಾರೆ.
5. ಒಪ್ಪಂದದ ಷರತ್ತು ಮತ್ತು ನಿಬಂಧನೆಗಳಲ್ಲಿ ನೀಡಿರುವ ಸೌಲಭ್ಯಗಳ ಹೊರತಾಗಿ ಬೇರಾವುದೇ ಸೌಲಭ್ಯಕ್ಕೆ ಅಂದರೆ ವೇತನ ಬಡ್ತಿ, ಪದೋನ್ನತಿ, ಪಿಂಚಣಿ ಇತ್ಯಾದಿ ಸೌಲಭ್ಯಗಳಿಗೆ ಸದರಿ ಗುತ್ತಿಗೆ ನೌಕರರು ಅರ್ಹರಾಗಿರುವುದಿಲ್ಲ.
6. ಸದರಿ ನೌಕರರು ದುರ್ವರ್ತನೆ, ನಿರ್ಲಕ್ಷತೆಯ ನಿಮಿತ್ತ ಸರ್ಕಾರಕ್ಕೆ ಸಂಬಂಧಿಸಬಹುದಾದ ಎಲ್ಲಾ ನಷ್ಟಗಳನ್ನು ಸರ್ಕಾರಕ್ಕೆ ಸದರಿ ನೌಕರರು ಭರಿಸಿಕೊಡಲು ಬದ್ಧರಾಗಿರತಕ್ಕದ್ದು.
7. ಸದರಿ ಮರುನೇಮಕಾತಿ ಅವಧಿಯ ಸೇವೆಯನ್ನು ನಿವೃತ್ತಿ ವೇತನ ಹಾಗೂ ಇತ್ಯಾದಿ ಸೌಲಭ್ಯಗಳಿಗೆ ಅರ್ಹತಾದಾಯಕ ಸೇವೆಯೆಂದು ಪರಿಗಣಿಸುವುದಿಲ್ಲ.
8. ಅವರ ಕರ್ತವ್ಯ, ಕಾರ್ಯ ಮತ್ತು ಪ್ರಕಾರ್ಯಗಳನ್ನು ಶ್ರದ್ಧೆ, ಭಕ್ತಿ ಮತ್ತು ಆಸಕ್ತಿಯಿಂದ ಅವರು ನೆರವೇರಿಸುವುದು.
9. ಅವರು ಕರ್ತವ್ಯಗಳನ್ನು ಪಾಲಿಸುತ್ತಿರುವ ಅಥವಾ ನೆರವೇರಿಸುತ್ತಿರುವಾಗ ಅವರಿಗೆ ಲಭ್ಯವಾಗಬಹುದಾದ ಅಥವಾ ದೊರಕಬಹುದಾದ ಅಧಿಕೃತ ಮಾಹಿತಿಯನ್ನು ಗೌಪ್ಯವಾಗಿಟ್ಟು ಕಟ್ಟುನಿಟ್ಟಾಗಿ ಪಾಲಿಸಬೇಕು.
10. 1966ರ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ ಮತ್ತು 1957 ರ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗೆ ಅವರು ಬದ್ಧರಾಗಿರುತ್ತಾರೆ.
11. ಈ ಒಪ್ಪಂದದ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಗುತ್ತಿಗೆ ನೇಮಕಾತಿಯು ತಾನಾಗಿಯೇ ಮುಕ್ತಾಯವಾಗುತ್ತದೆ.
12. ಅವರ ದುರ್ನಡತೆಯಿಂದಾಗಲೀ ಅಥವಾ ನಿರ್ಲಕ್ಷತೆ, ಉದಾಸೀನತೆಯಿಂದಾಗಲೀ ಸರ್ಕಾರಕ್ಕೆ ಸಂಬಂಧಿಸಿದಂತೆ ಆರ್ಥಿಕ ನಷ್ಟವನ್ನು ಉಂಟು ಮಾಡಿದ್ದಲ್ಲಿ, ಅದನ್ನು ಸರ್ಕಾರಕ್ಕೆ ತುಂಬಿಕೊಡಲು ಅವರು ಹೊಣೆಯಾಗಿರುತ್ತಾರೆ.
13. ಈ ಆದೇಶವನ್ನು ಸ್ವೀಕರಿಸಿದ ದಿನಾಂಕದಿಂದ ಏಳು ದಿನಗಳ ಒಳಗಾಗಿ ಐವತ್ತು (ರೂ. 50/-) ರೂಪಾಯಿಗಳ ಮೌಲ್ಯದ ಛಾಪಾ ಕಾಗದದಲ್ಲಿ ಸದರಿ ನೇಮಕಾತಿಯ ಷರತ್ತು ಮತ್ತು ನಿಬಂಧನೆಗಳನ್ನು ಒಳಗೊಂಡಿರುವ ಕರಾರು ಪತ್ರವನ್ನು ಕ್ರಮಬದ್ಧ ರೀತಿಯಲ್ಲಿ ಸದರಿ ನೌಕರರಿಂದ ಬರೆಯಿಸಿಕೊಳ್ಳತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : ಆಇ 647 ವೆಚ್ಚ -12/11 ದಿನಾಂಕ: 5-08-2011 ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಪಿ.ಮಾರ್ಕಂಡೇಯ
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವಾ ನಿಯಮಗಳು-2)

ಪಿ.ಆರ್. 2128

ಒಳಾಡಳಿತ ಸಚಿವಾಲಯ

ವಿಷಯ : ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯ ವಿವಿಧ ವೃಂದದ ಅಭಿಯೋಜನಾಧಿಕಾರಿಗಳಿಗೆ ಹೆಚ್ಚುವರಿಯಾಗಿ ವಿವಿಧ ಭತ್ಯೆಗಳನ್ನು ಮಂಜೂರು ಮಾಡುವ ಕುರಿತು.

ಓದಲಾಗಿದೆ : 1. ಕರ್ನಾಟಕ ರಾಜ್ಯ ಅಭಿಯೋಜನಾಧಿಕಾರಿಗಳ ಸಂಘ (ರಿ), ಬೆಂಗಳೂರು ಇವರ ಪತ್ರಗಳ ದಿನಾಂಕ 17-12-2009, 04-10-2010 ಮತ್ತು ದಿನಾಂಕ 08-12-2010.

2. ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ ಇವರ ಪತ್ರ ಸಂಖ್ಯೆ: ಡಿಪಿಎನ್/ಲೆಕ್ಕ-1/295 /2008-09, ದಿನಾಂಕ: 19-12-2009.

ಪ್ರಸ್ತಾವನೆ:

ಮೇಲೆ ಓದಲಾದ (1)ರಲ್ಲಿ ಕರ್ನಾಟಕ ರಾಜ್ಯ ಅಭಿಯೋಜನಾಧಿಕಾರಿಗಳ ಸಂಘ (ರಿ), ಬೆಂಗಳೂರು ಇವರು ತಮ್ಮ ಪತ್ರಗಳಲ್ಲಿ ಸರ್ಕಾರಿ ವ್ಯಾಜ್ಯಗಳ ಇಲಾಖೆಯ ಅಭಿಯೋಜಕರುಗಳಿಗೆ ನ್ಯಾಯಾಧೀಶರ ಸರಿಸಮಾನವಾದ ವೇತನ ಮತ್ತು ನ್ಯಾಯವಾದಿಯಾಗಿ ವೃತ್ತಿ ಕೈಗೊಳ್ಳದಿರುವ ಭತ್ಯೆ (Non-Practising Allowance), ವೈಯಕ್ತಿಕ ಉಪಯೋಗಕ್ಕೆ ಕಾನೂನು ಮಾಸಿಕ ಪತ್ರಿಕೆಗಳು ಮತ್ತು ದಿನಪತ್ರಿಕೆ ಹಾಗೂ ನಿಯತಕಾಲಿಕೆ ಭತ್ಯೆ, ಕನ್ವೆಯನ್ಸ್ ಭತ್ಯೆ, ದೂರವಾಣಿ ಸೌಲಭ್ಯ (ಕಛೇರಿ ಹಾಗೂ ಮನೆಗೆ ಸಂಪರ್ಕ) ರೋಬ್ (ಸಮವಸ್ತ್ರ ಹಾಗೂ ಅದರ ನಿರ್ವಹಣೆ ಭತ್ಯೆ), ಹೋಂ ಆರ್ಡರ್‌ಲಿ ಭತ್ಯೆ ಹಾಗೂ ಕಛೇರಿ ಅತಿಥಿ ಭತ್ಯೆಗಳನ್ನು ಮಂಜೂರು ಮಾಡುವಂತೆ ಕೋರಿರುತ್ತಾರೆ.

ಮೇಲೆ ಓದಲಾದ (2)ರ ಪತ್ರದಲ್ಲಿ ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ, ಬೆಂಗಳೂರು ಇವರು ಕರ್ನಾಟಕ ರಾಜ್ಯ ಅಭಿಯೋಜನಾಧಿಕಾರಿಗಳ ಸಂಘವು ಸಲ್ಲಿಸಿರುವ ಮನವಿಗಳು ನ್ಯಾಯಯುತವಾಗಿರುವುದರಿಂದ ಅದನ್ನು ಪರಿಗಣಿಸಬೇಕೆಂದು ಸರ್ಕಾರವನ್ನು ಕೋರಿರುತ್ತಾರೆ.

ಅಭಿಯೋಜನಾಧಿಕಾರಿಗಳ ವೇತನ ಶ್ರೇಣಿ ಪರಿಷ್ಕರಣೆ ಕೋರಿಕೆಯನ್ನು ಈಗಾಗಲೇ ರಚಿಸಲಾಗಿರುವ ಅಧಿಕಾರಿ ವೇತನ ಸಮಿತಿಯ ಮುಂದೆ [illegible] ಮಂಡಿಸುವಂತೆ ತಿಳಿಸಿದೆ. ಆದಾಗ್ಯೂ ಅಭಿಯೋಜನಾಧಿಕಾರಿಗಳಿಗೆ ಪ್ರೋತ್ಸಾಹವಾಗಿ ಈ ಕೆಳಕಂಡ ಭತ್ಯೆಗಳನ್ನು ಮಂಜೂರು ಮಾಡಲು ಈ ಮಂಜೂರಾತಿಯ ಮುಂದೆ ಅಭಿಯೋಜನಾಧಿಕಾರಿಗಳ ವೇತನ ಶ್ರೇಣಿಗಳು ಪರಿಷ್ಕೃತಗೊಂಡಲ್ಲಿ ಈ ಭತ್ಯೆಗಳನ್ನು ಸೂಕ್ತವಾದ ರೀತಿಯಲ್ಲಿ ಮಿತಗೊಳಿಸುವ ಷರತ್ತಿಗೆ ಒಳಪಟ್ಟು ಮಂಜೂರು ಮಾಡಲು ಆರ್ಥಿಕ ಇಲಾಖೆಯು ಒಪ್ಪಿರುತ್ತದೆ.

(1)	Non-Practising Allowance	–	Rs. 5,500/- p.m.
(2)	Telephone Allowance	–	Rs. 750/- p.m.
(3)	Robo Allowance	–	Rs. 250/-p.m. (Rs. 3000/-p.a)
(4)	Journals Allowance	–	Rs. 500/- p.m.
	Total	–	Rs. 7000/- p.m.

ಆದುದರಿಂದ ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ : ಒಇ 45 ಪಿಪಿಇ 2009, ಬೆಂಗಳೂರು, ದಿನಾಂಕ : 27/08/2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯ ವಿವಿಧ ವೃಂದದ ಅಭಿಯೋಜನಾಧಿಕಾರಿಗಳಿಗೆ ಕೆಳಕಂಡಂತೆ ವಿವಿಧ ಭತ್ಯೆಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಮಂಜೂರು ಮಾಡಿದೆ.

(1)	Non-Practising Allowance	–	Rs. 5,500/- p.m.
(2)	Telephone Allowance	–	Rs. 750/- p.m.
(3)	Robo Allowance	–	Rs. 250/-p.m. (Rs. 3000/-p.a)
(4)	Journals Allowance	–	Rs. 500/- p.m.
	Total	–	Rs. 7,000/- p.m.

ಈ ಮಂಜೂರಾತಿಯು ಮುಂದೆ ಅಭಿಯೋಜನಾಧಿಕಾರಿಗಳ ವೇತನ ಶ್ರೇಣಿಗಳು ಪರಿಸ್ಕೃತಗೊಂಡಲ್ಲಿ ಈ ಭತ್ಯೆಗಳನ್ನು ಸೂಕ್ತವಾದ ರೀತಿಯಲ್ಲಿ ಮಿತಗೊಳಿಸುವ ಷರತ್ತಿಗೊಳಪಟ್ಟಿರುತ್ತದೆ, ಇನ್ನು ಅಭಿಯೋಜನಾಧಿಕಾರಿಗಳ ವೇತನ ಶ್ರೇಣಿ ಪರಿಷ್ಕೃರಣೆ ಕೋರಿಕೆಯನ್ನು ಈಗಾಗಲೇ ರಚಿಸಲಾಗಿರುವ ಅಧಿಕಾರಿ ವೇತನ ಸಮಿತಿ ಮುಂದೆ ಮಂಡಿಸಲು ಇಲಾಖೆಯು ಕ್ರಮವಹಿಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 9 ಸೇ. 2/2011, ದಿನಾಂಕ 19-07-2011 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಹೆಚ್. ಕೆ. ನಿಂಗಪ್ಪ
ಸರ್ಕಾರದ ಅಧೀನ ಕಾರ್ಯದರ್ಶಿ
ಒಳಾಡಳಿತ ಇಲಾಖೆ
(ಪೊಲೀಸ್ ಸೇವೆಗಳು-'ಬಿ')

ಪಿ.ಆರ್. 2129

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ಎಸ್.ಆರ್. ಲಮಾಣಿ, ಮಾಜಿ ಎ.ಪಿ.ಸಿ., ಡಿ.ಎ.ಆರ್. ಗದಗ ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ :
1. ಶಿಸ್ತು ಪ್ರಾಧಿಕಾರ ಹಾಗೂ ಜಿಲ್ಲಾ ಪೋಲಿಸ್ ಅಧೀಕ್ಷಕರು, ಗದಗ, ಇವರ ಆದೇಶ ಸಂಖ್ಯೆ: ಡಿಇ/ಪಿಆರ್-6/49/11/2003 (ಓ.ಬಿ. ಸಂಖ್ಯೆ 521/2003) ದಿ: 30-12-2003.
2. ಮೇಲ್ಮನವಿ ಪ್ರಾಧಿಕಾರ ಹಾಗೂ ಪೋಲಿಸ್ ಮಹಾ ನಿರೀಕ್ಷಕರು, ಉತ್ತರ ವಲಯ, ಬೆಳಗಾವಿ, ಇವರ ಆದೇಶ ಸಂಖ್ಯೆ: ಅಪೀಲು/34/ಉವ/2004 ದಿ: 08-09-2005.
3. ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿ: 26-07-2010.
4. ಮಹಾ ನಿರ್ದೇಶಕರು, ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಅಪೀಲು(2)/49/2010-11 ದಿನಾಂಕ: 16-05-2011.

ಪ್ರಸ್ತಾವನೆ:

ಶ್ರೀ ಎಸ್.ಆರ್. ಲಮಾಣಿ, ಇವರು ಜಿಲ್ಲಾ ಸಶಸ್ತ್ರ ಪಡೆ, ಗದಗದಲ್ಲಿ ಎ.ಪಿ.ಸಿ. ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಕರ್ತವ್ಯಕ್ಕೆ ಅನಧಿಕೃತವಾಗಿ ಗೈರುಹಾಜರಾಗಿ ಕರ್ತವ್ಯದಲ್ಲಿ ಅಶಿಸ್ತು ಹಾಗೂ ನಿರ್ಲಕ್ಷತನ ಪ್ರದರ್ಶಿಸಿದ ಕಾರಣದ ಮೇಲೆ ಇವರ ವಿರುದ್ಧ ಕರ್ನಾಟಕ ರಾಜ್ಯ ಪೋಲಿಸ್ (ಶಿಸ್ತು ನಡವಳಿ) ನಿಯಮಗಳು 1965ರ ನಿಯಮ 6 ರಡಿಯಲ್ಲಿ ಇಲಾಖಾ ವಿಚಾರಣೆಗೆ ಆದೇಶಿಸಿ, ಈ ಕೆಳಕಂಡ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷಾರೋಪಣೆ:

"ಆಪಾದಿತರಾದ ನೀವು ದಿ: 10-03-2003 ರಂದು ಎಸ್.ಪಿ., ಬಂಗಲೇ ಗಾರ್ಡ್ ಕರ್ತವ್ಯದಲ್ಲಿದ್ದಾಗ ಸಾಯಂಕಾಲ 6 ರಿಂದ 9 ಗಂಟೆಯವರೆಗಿನ ಪಹರೆ ಕರ್ತವ್ಯ ಮುಗಿಸಿಕೊಂಡು ಹೋದವರು ಮರಳಿ ಗಾರ್ಡ್ ಕರ್ತವ್ಯಕ್ಕೆ ಬಾರದೇ ಅನಧಿಕೃತ

ಗೈರುಹಾಜರ ಉಳಿದು 21 ದಿವಸ ಗತಿಸಿದ್ದರಿಂದ ನಿಮಗೆ ದಿನಾಂಕ: 28-4-2003 ರಂದು ಕರ್ತವ್ಯ ಫಲಾಯನ ಪತ್ರ ಜಾರಿ ಮಾಡಿದ್ದರೂ ಸಹ ನೀವು 7 ದಿವಸಗಳ ಒಳಗಾಗಿ ಮೇಲಧಿಕಾರಿಗಳಾದ ಆರಕ್ಷಕ ಅಧೀಕ್ಷಕರವರ ಮುಂದೆ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದೇ ಶಿಸ್ತಿನ ಇಲಾಖೆಯ ಪೇದೆಯಾದ ನೀವು ಮೇಲಧಿಕಾರಿಗಳ ಆದೇಶ ಉಲ್ಲಂಘನೆ ಮಾಡಿ ದಿ: 10-06-03ರ ವರೆಗೆ ಕರ್ತವ್ಯಕ್ಕೆ ಅನಧಿಕೃತ ಗೈರುಹಾಜರ ಉಳಿದು ಈ ಬಗ್ಗೆ ಯಾವುದೇ ಮಾಹಿತಿ ನೀಡದೇ ನಿಮ್ಮ ಕರ್ತವ್ಯದಲ್ಲಿ ಅಶಿಸ್ತನ್ನು ಪ್ರದರ್ಶಿಸಿ ಘೋರ ಕರ್ತವ್ಯಚ್ಯುತಿ ಹಾಗೂ ಕರ್ತವ್ಯ ನಿರ್ಲಕ್ಷತನ ತೋರಿಸಿರುತ್ತೀರಿ.

ನೀವು ಮೇಲಿಂದ ಮೇಲೆ ಕರ್ತವ್ಯಕ್ಕೆ ಅನಧಿಕೃತ ಗೈರುಹಾಜರ ಉಳಿದಿರುವ ಅವಧಿಯನ್ನು ಅನೇಕ ಬಾರಿ ವೇತನ ರಹಿತ ರಜೆ ಅಂತಾ ಪರಿಗಣಿಸಿದ್ದರೂ ಕೂಡಾ ನಿಮ್ಮ ಪ್ರವೃತ್ತಿಯನ್ನು ಮುಂದುವರೆಸಿಕೊಂಡು ಮೇಲಧಿಕಾರಿಗಳ ಆದೇಶ ಅಮಾನ್ಯ ಮಾಡಿ ನಿಮ್ಮ ಕರ್ತವ್ಯದಲ್ಲಿ ಘೋರ ಕರ್ತವ್ಯಚ್ಯುತಿ ಮತ್ತು ನಿರ್ಲಕ್ಷತನ ಪ್ರದರ್ಶಿಸಿದ್ದು ಇರುತ್ತದೆ."

ಮೇಲ್ಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳು ಆರೋಪ ಸಾಬೀತಾಗಿದೆ ಎಂದು ಸಲ್ಲಿಸಿದ ವರದಿ ಆಧಾರದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತುಪ್ರಾಧಿಕಾರಿ ಹಾಗೂ ಜಿಲ್ಲಾ ಪೋಲಿಸ್ ಅಧೀಕ್ಷಕರು, ಗದಗ, ಇವರು ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ದಿನಾಂಕ: 30-12-2003ರ ಆದೇಶದಲ್ಲಿ ಅರ್ಜಿದಾರರನ್ನು ಸೇವೆಯಿಂದ ವಜಾಗೊಳಿಸಲಾಗಿದೆ ದಿನಾಂಕ 10-03-2003 ರಿಂದ 10-06-2003ರ ವರೆಗೆ ಗೈರುಹಾಜರಾದ 93 ದಿನಗಳನ್ನು ವೇತನರಹಿತ ರಜೆ ಎಂದು ಪರಿಗಣಿಸಲಾಗಿದೆ.

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೋಲಿಸ್ ಮಹಾ ನಿರೀಕ್ಷಕರು, ಉತ್ತರ ವಲಯ, ಬೆಳಗಾವಿ, ಇವರು ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ದಿನಾಂಕ: 08-09-2005ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ಇಲಾಖಾ ವಿಚಾರಣೆ ದಾಖಲೆಗಳನ್ನು ಪರಿಶೀಲಿಸಲಾಗಿದೆ. ಸದರಿ ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿ ಪರಿಗಣಿಸುವಂತಹ ಯಾವುದೇ ಸಮರ್ಥನೀಯ ಹೊಸ ಅಂಶಗಳು ಇರುವುದಿಲ್ಲ. ಅರ್ಜಿದಾರರು ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ, ಅತೀವ ನಿರ್ಲಕ್ಷತೆ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿರುವುದು ಸಾಬೀತಾಗಿರುತ್ತದೆ. ಆದ್ದರಿಂದ ಶಿಸ್ತು ಪ್ರಾಧಿಕಾರಿಯು ವಿಧಿಸಿರುವ ದಂಡನೆ ಆದೇಶದಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯತೆ ಕಂಡು ಬರುತ್ತಿಲ್ಲವಾದ್ದರಿಂದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಒಇ 138 ಪೊಸಿಅ 2010, ಬೆಂಗಳೂರು, ದಿನಾಂಕ : 24/08/2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಕರ್ನಾಟಕ ಪೋಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಎಸ್.ಆರ್. ಲಮಾಣಿ, ಮಾಜಿ ಎ.ಪಿ.ಸಿ. ಡಿ.ಎ.ಆರ್. ಗದಗ, ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಟಿ.ಎನ್. ರವಿಪ್ರಕಾಶ್
ಸರ್ಕಾರದ ಅಧೀನ ಕಾರ್ಯದರ್ಶಿ
ಒಳಾಡಳಿತ ಇಲಾಖೆ (ಪೋಲಿಸ್ ಸೇವೆಗಳು)

ಪಿ.ಆರ್. 2130

ಒಳಾಡಳಿತ ಸಚಿವಾಲಯ

ತಿದ್ದುಪಡಿ

ಸಂಖ್ಯೆ: ಹೆಚ್‌ಡಿ/137/ಪಿಓಪಿ/2011, ಬೆಂಗಳೂರು, ದಿನಾಂಕ 23/08/2011

ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 05 ಪಿಓಪಿ 2011, ದಿನಾಂಕ: 14/01/2011 ರ ಆದೇಶದ ಅನುಬಂಧ-ಋ ರ ಕ್ರಮ ಸಂಖ್ಯೆ 4, 5, 6, 7, ಹಾಗೂ 8 ರಲ್ಲಿ ಕ್ರಮವಾಗಿ ನಮೂದಿಸಿರುವ ಆರ್.ಪಿ.ಐ., ಆರ್.ಎಸ್.ಐ., ಎಆರ್‌ಎಸ್‌ಐ, ಎ.ಹೆಚ್.ಸಿ/ಹೆಚ್.ಸಿ. (ವೈರ್‌ಲೆಸ್) ಹಾಗೂ ಎಪಿಸಿ/ಪಿಸಿ (ವೈರ್‌ಲೆಸ್) ಎಂಬುದರ ಬದಲಾಗಿ ಕ್ರಮವಾಗಿ 1] ಕೆ.ಎಸ್.ಐ.ಎಸ್.ಎಫ್. ಪೋಲಿಸ್ ಇನ್ಸ್‌ಪೆಕ್ಟರ್, 2] ಕೆ.ಎಸ್.ಐ.ಎಸ್.ಎಫ್.-ಪೋಲಿಸ್ ಸಬ್-ಇನ್ಸ್‌ಪೆಕ್ಟರ್, 3] ಕೆ.ಎಸ್.ಐ.ಎಸ್.ಎಫ್.= ಅಸಿಸ್ಟಂಟ್ ಸಬ್-ಇನ್ಸ್‌ಪೆಕ್ಟರ್ ಆಫ್ ಪೋಲಿಸ್ , 4] ಕೆ.ಎಸ್.ಐ.ಎಸ್.ಎಫ್.-ಹೆಡ್ ಕಾನ್ಸ್‌ಟೇಬಲ್ ಹಾಗೂ 5] ಕೆ.ಎಸ್.ಐ.ಎಸ್.ಎಫ್.- ಪೋಲಿಸ್ ಕಾನ್ಸ್‌ಟೇಬಲ್ ಎಂದು ತಿದ್ದುಪಡಿ ಮಾಡಿಕೊಂಡು ಓದಿಕೊಳ್ಳತಕ್ಕದ್ದು. ಮತ್ತು ಅನುಬಂಧ- IV ರ ಕ್ರಮ ಸಂಖ್ಯೆ 1, 2, 3, ಮತ್ತು 4ರಲ್ಲಿ ಕ್ರಮವಾಗಿ ನಮೂದಿಸಿರುವ RSI, ARSI, AHC/HC and APC/PC ಎಂಬುದರ ಬದಲಾಗಿ ಕ್ರಮವಾಗಿ K.S.I.S.F.- Police Sub-Inspector, K.S.I.S.F.- Assistant Sub-Inspector of Police, K.S.I.S.F. – Head Constable and K.S.I.S.F.- Police Constable ಎಂದು ತಿದ್ದುಪಡಿ ಮಾಡಿಕೊಂಡು ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಬಿ. ರಾಜಮ್ಮ
ಸರ್ಕಾರದ ಅಧೀನ ಕಾರ್ಯದರ್ಶಿ
ಒಳಾಡಳಿತ ಇಲಾಖೆ (ಪೋಲಿಸ್ ವೆಚ್ಚ)

ಪಿ.ಆರ್. 2131

ಸಮಾಜ ಕಲ್ಯಾಣ ಸಚಿವಾಲಯ

ತಿದ್ದುಪಡಿ ಆದೇಶ

ಸಂಖ್ಯೆ: ಸಕಇ/21/ಮೊದೇಶಾ/2011, ಬೆಂಗಳೂರು, ದಿನಾಂಕ 20-08-2011

ಸರ್ಕಾರದ ಆದೇಶ ಸಂಖ್ಯೆ: ಸಕಇ/21/ಮೊದೇಶಾ/2011, ದಿನಾಂಕ 31-05-2011ರ ಆದೇಶ ಭಾಗದ ಎರಡನೇ ಸಾಲಿನಲ್ಲಿ (SDMA) ಎಂಬುದನ್ನು (SDMC) ಎಂಬುದಾಗಿ ತಿದ್ದುಪಡಿ ಮಾಡಲಾಗಿದ್ದು ಅದರಂತೆ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ.ಎಂ. ಬಾಟೆ

ಸರ್ಕಾರದ ಅಧೀನ ಕಾರ್ಯದರ್ಶಿ-3

ಸಮಾಜ ಕಲ್ಯಾಣ ಇಲಾಖೆ

ಪಿ.ಆರ್. 2132

FOREST, ECOLOGY AND ENVIRONMENT SECRETARIAT

Sub : Renewal of Mining lease No. 2396 of M/s National Mineral Development Corporation (NMDC), Donimalai over an extent of 608.00 ha. of forest land in Donimalai Reserve Forest, Sandur Range, Bellary District-Reg.

Read :
1. Letter No. A5(1) MNG.CR. 11/2007-08 dated: 27-11-2008 and 19-12-2008 of the Principal Chief Conservator of Forests, Bangalore.
2. Government of India, Ministry of Environment and Forests, New Delhi letter No. 8-107/91-FC(Pt), dated : 06-02-2008.
3. Letter No. F. No. 8-46/1996-FC (Pt), dated : 18-10-2010 from Ministry of Environment and Forests, New Delhi.
4. Letter No. A5 (1) MNG. CR. 11/2007-08, dated 17-02-2011 of the Principal Chief Conservator of Forests, Bangalore.
5. Letter No. A5 (1) MNG. CR. 11/2007-08, dated 23-08-2011 of the Principal Chief Conservator of Forests, Bangalore.
6. Interim Order of Hon'ble Supreme Court of India on 05-08-2011 in W.P. No. 562/2009.

Preamble :

Principal Chief Conservator of Forests has sent proposal vide his letter dated: 27-11-2008 read at (1) above for renewal of Mining lease No. 2396 of M/s National Mineral Development Corporation (NMDC), Donimalai over an extent of 608.00 ha. of forest land in Donimalai Reserve Forest, Sandur Taluk, Bellary District subject to certain conditions and in his letter dated 19-12-2008 he has suggested the company may be asked to bear the cost of the shifting and relocation of the Zoo to the new location as per the plan given by the Central Zoo Authority under the para 5.15 of the New Mining Policy of the State Government to encourage the companies to practice corporate social responsibility (CSR).

Government of India, Ministry of Environment and Forests, New Delhi vide Government letter dated : 06-02-2008 read at (2) above conveyed its final approval without obtaining the proposal of the State Government, fo Renewal of Mining Lease No. 2396 for diversion of 608.00 ha. of forest land in Donimalai Reserve Forest in favour of NMDC Ltd. granting of extension of mining lease for Donimalai Iron Ore Mine beyond 03-11-2008 with conditions already approved under MMRD Act and as per the conditions prescribed by the State Government.

Central Government has imposed Moratorium on fresh mining lease applications in Bellary area of Karnataka dated: 18-10-2010 read at (3) above.

Principal Chief Conservator of Forests in his letter dated: 17-02-2011 read at (4) above, has reported that NMDC remitted a sum of Rs. 46,34,20,000-00 towards NPV. Principal Chief Conservator of Forests conformed the following payments made by the User agency vide in his letter dated: 23-08-2011 read at (5) above.

Sl.No.	Particulars	Amount in Rs.
1	Cost of raising compensatory afforestation charge over 126.50 ha. vide D.D. No. 071740 dated 03-07-1995 of Canara Bank, Donimalai at Rs. 25,000-00 per ha.	31,62,500-00
2	Cost of raising penal Compensatory afforestation over 253.00 ha. of degraded forest land (126.50x2) vide D.D. No. 071739 dated 3-7-1995 of Canara Bank Donimalai.	63,25,000-00
3	Cost of safety Zone Charges vide D.D. No. 021504 dated 4-12-1999 of Canara Bank Donimalai.	25,90,600-00
	Total	**1,20,78,100-00**

Hon'ble Supreme Court of India, has passed an Interim Order on 05-08-2011 in W.P. No. 562/2009 directing that only the National Development Mining Corporation Limited shall supply Iron ore to the companies for Domestic Consumption read at (6) above.

All details of the proposal have been examined and hence the order.

Government Order No. FEE 154 FFM 2008, Bangalore, dated 25-08-2011

In view of the approval accorded to the proposal by the Government of India Ministry of Environment and Forests, New Delhi, State Government are pleased to accord its approval under Section 2 of Forest (Conservation) Act, 1980 for renewal of Mining lease No. 2396 of M/s National Mineral Development Corporation (NMDC), Donimalai, Sandur Taluk Bellary District over an extent of 608.00 ha. of forest land in Donimalai Reserve Forest of Sandur Range with subject to the following conditions.

1. Legal status of forest land will remain unchanged.
2. Lessee shall undertake mining activity over an extent of 180.00 ha. (one hundred and eighty hectors) only out of 608.00 ha. of the forest land renewed.
3. Compensatory afforestation shall be raised at the cost of user agency over equivalent non-forest land at the rate of prevailing at the time of approval (at present it is Rs. 1,05,000/- per ha.)
4. The lease period under the Forest (Conservation) Act 1980 is for a period of 20 years with effect from 04-11-2008 and is Co-terminus with the MMRD lease.
5. The demarcation of mining leased area will be done on the ground using four feet high reinforced concrete pillars, with serial numbers, forward and back bearings and distance from pillar to pillar recorded on the pillars at the cost of user agency. GPS readings for the mine area shall be taken and recorded by the Forest Department.
6. Considering the recommendation of the State Government and to maintain the green cover, and keeping in mind that the Compensatory afforestation land has not been provided at the time of obtaining lease earlier, suitable equivalent non-forest land in lieu of the broken up forest land of 608.00 ha.shall be identified by the user agency. The identified non-forest land shall be transferred and mutated in favour of Forest Department.
7. Cost of raising compensatory afforestation over 608.00 ha. of identified non-forest land shall be deposited by the user agency and the same shall be transferred to Adhoc CAMPA in account number CA 1582 of Corporation Bank, Block-II, CGO Complex, Phase-I, Lodhi Road, New Delhi- 110 003.
8. Compensatory afforestation over equivalent extent of non-forest land in the already broken up forest land of 608.00 ha. and to include the condition of Compensatory Afforestation land identification, mutation and payment towards compensatory afforestation cost.
9. The compensatory afforestation shall be raised over 608.00 ha. of identified non-forest land at the cost of user agency.
10. The Non-forest land for Compensatory Afforestation shall be notified as PF/RF under Indian Forest Act, 1927 or the State Forest Act within a period of 6 months and Nodal Officer (FCA) shall report the compliance within 6 months.
11. The Forest Department shall maintain area up to 7.5 mts. as safety zone all along the boundary and will also raise and maintain the plantation over an area, one and half times of the extent of the safety zone in degraded forest land elsewhere at the project cost.
12. TThe funds received from the user agency towards Net Present Value under this project shall be transferred to Ad-hoc CAMPA in account number CA 1582 of Corporation Bank Block-II, CGO Complex, Phase-I, Lodhi Road, New Delhi-110 003.
13. The additional amount of the Net Present Value (NPV) of the diverted forest land if any, due as per the orders of Hon'ble Supreme Court dated : 28-03-2008 and 09-05-2008 in IA Nos. 826 in 566 with related IA's is in W.P. (Civil) No. 202/1995 shall be realised from the user agency and transferred to Ad-hoc CAMPA in account number CA-1578 of Corporation Bank, Block-II, CGO Complex, Phase-I Lodhi Road, New Delhi- 110 003 under intimation to the Government of India.
14. No new construction of building for any purpose will be taken up in the forest area diverted for the project.
15. A revised mining plan shall be prepared and approved by IBM. The mining activity in the forest area shall be carried out as per the approved mining plan.
16. User agency shall obtain environmental clearance under the Environment (Protection) Act, 1986.
17. The consent of State Pollution Control Board (SPCB) shall be obtained under Air and Water Act before commencement of mining operation and it shall be renewed every year.
18. No labour camps shall be established on the leased/diverted forest land.
19. Reclamation plan shall be executed by the user agency from the very first year of mining and an annual report shall be sent to the Nodal Officer and the Regional Office, Bangalore.

20. User agency shall protect the top soil at the project cost.
21. User agency shall ensure that there should be no damage to the wildlife.
22. A comprehensive monitoring shall be done at the end of five years to study the impact of mining on the surrounding flora and fauna and its watershed. If it is found that the lessee has violated or is not complying with the stipulated conditions, then the approval given under the Forest (Conservation) Act, 1980 shall be revoked.
23. The total forest area utilized for the project shall not exceed 608.00 ha. In case the land is not taken over by the user agency or the same is not used for the stipulated purpose within a period of two years, then the area shall be taken back by the Forest Department.
24. Lessee shall pay usual lease rent and other charges as prescribed by the Government from time to time.
25. Lessee shall open a firewood depot to supply firewood to the employees and labourers at the subsidized rates and the quantity to be prescribed by the Deputy Conservator of Forests concerned.
26. Lessee shall undertake the afforestation measures in the vacant area of the lease.
27. Lessee shall carryout soil and water conservation measures and other necessary measures as advised by the Forest Department from time to time.
28. Lessee shall undertake to protect rigidly the leased area and forest area surrounding the area up to one Km from the leased area.
29. Lessee shall not cut any trees without prior permission of the Forest Department and all produce of permitted felling shall be handed over to the Forest Department under cover of receipt.
30. Lessee shall execute an agreement with the Forest Department binding himself to abide by all usual conditions and terms as per orders of the Government as well as the Principal Chief Conservator of Forests.
31. Lessee shall take-up the planting work on the static dumps during the advance mining operations.
32. In case violation of conditions of agreement, State Government (Department of Forests, Ecology and Enviornment) shall have right to suspend the mining activities.
33. Lessee shall reclaim the forest area to be surrendered before handing over to the Forest Department.
34. Lessee has to pay extraction cost to the Forest Department for felling of trees if any in the mining area.
35. Lessee has to pay all the dues against him before the end of lease period including reclamation and rehabilitation charges.
36. User agency shall carryout rehabilitation and reclamation works on 5th, 10th, 15th & 19th year and if works found to be unsatisfactory then the permission granted under Forest (Conservation) Act 1980 will be revoked by the Government of Karnataka.
37. Any other condition imposed by the Government of India, Government of Karnataka and Principal Chief Conservator of Forests will have to be abided by the lessee.

By Order and in the name of the Governor of Karnataka
G.H. Anasuyamma.
Under Secretary to Government
Forests, Ecology and Environment Department

P.R. 2133

ಕಂದಾಯ ಸಚಿವಾಲಯ

ವಿಷಯ : ಶ್ರೀ ಸಿ.ವಿ. ಪಾಟೀಲ್, ಹಿಂದಿನ ತಹಶೀಲ್ದಾರ್, ರಾಯಭಾಗ ಇವರ ವಿರುದ್ಧ ಇಲಾಖಾ ವಿಚಾರಣೆಗೆ ಸಂಬಂಧಿಸಿದಂತೆ ದಂಡನೆ ವಿಧಿಸಿದ ಆದೇಶವನ್ನು ರದ್ದುಪಡಿಸುವ ಬಗ್ಗೆ.

ಓದಲಾಗಿದೆ :
1. ಸರ್ಕಾರದ ಆದೇಶ ಸಂಖ್ಯೆ: ಕಂಇ 14 ಎಡಿಇ 1991 ದಿನಾಂಕ: 29-06-1991.
2. ಸರ್ಕಾರದ ಆದೇಶ ಸಂಖ್ಯೆ: ಕಂಇ 14 ಎಡಿಇ 1991 ದಿನಾಂಕ: 16-01-1997.
3. ಕೆ.ಎ.ಟಿ. ಅರ್ಜಿ ಸಂಖ್ಯೆ: 2869/1998ರ ಆದೇಶ ದಿನಾಂಕ: 23-01-2009.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ದಿನಾಂಕ: 29-06-1991ರ ಸರ್ಕಾರದ ಆದೇಶದಲ್ಲಿ, ಶ್ರೀ ಸಿ.ವಿ. ಪಾಟೀಲ್, ಹಿಂದಿನ ತಹಶೀಲ್ದಾರ್, ರಾಯಭಾಗ ಎಂದು ಕೆಲಸ ನಿರ್ವಹಿಸುತ್ತಿದ್ದಾಗ ತಮ್ಮ ಅಧಿಕಾರ ಸ್ಥಾನವನ್ನು ದುರುಪಯೋಗ ಪಡಿಸಿಕೊಂಡು ಇತರರೊಂದಿಗೆ ಸೇರಿ ಕೃಷಿ ಜಮೀನುಗಳನ್ನು ಕೃಷಿಯೇತರ ಉದ್ದೇಶಕ್ಕಾಗಿ ಪರಿವರ್ತಿಸಿ ಕರ್ತವ್ಯಲೋಪ ಎಸಗಿದ ಆರೋಪಗಳ ಮೇಲೆ ಶ್ರೀ ಸಿ.ವಿ. ಪಾಟೀಲ್, ತಹಶೀಲ್ದಾರ್ ಮತ್ತು ಇತರ 6 ಜನ ಅಧಿಕಾರಿ/ನೌಕರರ ವಿರುದ್ಧ ಜಂಟಿ ಇಲಾಖಾ ವಿಚಾರಣೆ ಜರುಗಿಸಲು ವಿಭಾಗಾಧಿಕಾರಿ, ಬೆಳಗಾಂ ಇವರನ್ನು ಶಿಸ್ತು ಪ್ರಾಧಿಕಾರಿಯನ್ನಾಗಿ ನೇಮಿಸಿ ಆದೇಶಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ದಿನಾಂಕ: 16-01-1997ರ ಸರ್ಕಾರದ ಆದೇಶದಲ್ಲಿ, ವಿಭಾಗಾಧಿಕಾರಿಗಳು, ಬೆಳಗಾಂ ರವರು ನೀಡಿರುವ ವಿಚಾರಣಾ ವರದಿಯನ್ನು ಸರ್ಕಾರವು ಒಪ್ಪಿ, ಶ್ರೀ ಸಿ.ವಿ. ಪಾಟೀಲ್, ತಹಶೀಲ್ದಾರ್ ಇವರ ವಿರುದ್ಧದ ಆರೋಪಗಳು

ಸಾಬೀತಾಗಿರುವುದರಿಂದ, ಸರ್ಕಾರವು ಶ್ರೀ ಸಿ.ವಿ. ಪಾಟೀಲ್, ತಹಶೀಲ್ದಾರ್ ಇವರ ಮುಂದಿನ ಒಂದು ವಾರ್ಷಿಕ ವೇತನ ಬಡ್ತಿಯನ್ನು ಮುಂದಿನ ವೇತನ ಬಡ್ತಿಗಳ ಮೇಲೆ ಪರಿಣಾಮ ಬೀರದಂತೆ (without cumulative effect) ತಡೆಹಿಡಿಯಲು ಆದೇಶಿಸಲಾಗಿತ್ತು.

ಶ್ರೀ ಸಿ.ವಿ. ಪಾಟೀಲ್, ತಹಶೀಲ್ದಾರ್‌ರವರು ಸರ್ಕಾರದ ಆದೇಶ ಸಂಖ್ಯೆ: ಕಂಇ 14 ಎಡಿಇ 1991, ದಿನಾಂಕ: 16–01–1997ರ ವಿರುದ್ಧ ಮಾನ್ಯ ಕೆ.ಎ.ಟಿ.ಯಲ್ಲಿ ಅರ್ಜಿ ಸಂಖ್ಯೆ: 2869/1998ನ್ನು ದಾಖಲಿಸಿದ್ದರು. ಮಾನ್ಯ ಕೆ.ಎ.ಟಿಯು ದಿನಾಂಕ: 23–01–2009 ರಂದು ತೀರ್ಪು ನೀಡಿದ್ದು, ಸದರಿ ತೀರ್ಪಿನ ಉಧೃತ ಭಾಗವು ಈ ಕೆಳಕಂಡಂತಿರುತ್ತದೆ:

> "For the above said reasons, the application is allowed and the Order of the Disciplinary Authority bearing No. RD 14 ADE 91 dated 16-01-1997 (Annexure 'A9') is hereby quashed. All consequential Benefits flow from the order."

ಮಾನ್ಯ ಕೆ.ಎ.ಟಿಯ ದಿನಾಂಕ: 23–01–2009 ರ ಆದೇಶದಲ್ಲಿ ಶ್ರೀ ಸಿ.ವಿ. ಪಾಟೀಲ್, ಹಿಂದಿನ ತಹಶೀಲ್ದಾರ್, ರಾಯಭಾಗ ಇವರಿಗೆ ಸರ್ಕಾರದ ಆದೇಶ ಸಂಖ್ಯೆ: ಕಂಇ 14 ಎಡಿಇ 1991, ದಿನಾಂಕ: 16–01–1997 ರಲ್ಲಿ ಇವರಿಗೆ ವಿಧಿಸಿದ ದಂಡನಾ ಆದೇಶವನ್ನು ರದ್ದುಗೊಳಿಸಿರುವ ಹಿನ್ನೆಲೆಯಲ್ಲಿ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ : ಆರ್‌ಡಿ 85 ಎಡಿಇ 1998, ಬೆಂಗಳೂರು, ದಿನಾಂಕ: 19–08–2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ಸಿ.ವಿ. ಪಾಟೀಲ್, ಹಿಂದಿನ ತಹಶೀಲ್ದಾರ್, ರಾಯಭಾಗ ಇವರಿಗೆ, ಸರ್ಕಾರಿ ಸಂಖ್ಯೆ: ಕಂಇ 14 ಎಡಿಇ 1991, ದಿನಾಂಕ: 16–01–1997ರ ಆದೇಶದಲ್ಲಿ ಒಂದು ವಾರ್ಷಿಕ ವೇತನ ಬಡ್ತಿಯನ್ನು ಸಂಚಿತ ಪರಿಣಾಮವಿಲ್ಲದಂತೆ ದಂಡನೆ ವಿಧಿಸಿರುವುದನ್ನು, ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ಅರ್ಜಿ ಸಂಖ್ಯೆ: 2869/1998 ದಿನಾಂಕ: 23–01–2009 ರ ಆದೇಶದಂತೆ, ಈ ಮೂಲಕ ರದ್ದುಪಡಿಸಲಾಗಿದೆ.

ಈ ಆದೇಶದನ್ವಯ, ಶ್ರೀ ಸಿ.ವಿ. ಪಾಟೀಲ್ ರವರಿಗೆ ಸಲ್ಲಿಸಬೇಕಾದ ಸೌಲಭ್ಯಗಳನ್ನು ಒದಗಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎನ್. ಗೋಪಾಲಯ್ಯ
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಸೇವೆಗಳು–3).

ಪಿಆರ್.ನಂ. 2134

ಕಂದಾಯ ಸಚಿವಾಲಯ

ವಿಷಯ : ಶ್ರೀ ವಿ.ಎಂ. ನಾಯ್ಕ, ನಿವೃತ್ತ, ತಹಶೀಲ್ದಾರ್ ಇವರಿಗೆ ವಿಳಂಬವಾಗಿ ಪಾವತಿಸಿದ ನಿವೃತ್ತಿ ವೇತನ ಹಾಗೂ ಗಳಿಕೆ ರಜಾ ನಗದೀಕರಣ ಮೊತ್ತದ ಮೇಲೆ ಬಡ್ಡಿ ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ :
1. ಶ್ರೀ ಎಂ.ವಿ. ನಾಯ್ಕ, ನಿವೃತ್ತ ತಹಶೀಲ್ದಾರ್, ಸಹಕಾರ ನಗರ, ಬೆಂಗಳೂರು ಇವರ ಮನವಿ ಪತ್ರ ದಿನಾಂಕ: 15–07–2009 ಮತ್ತು 16–11–2009.
2. ಸರ್ಕಾರದ ಅಧಿಸೂಚನೆ ಸಂಖ್ಯೆ: ಆರ್‌ಡಿ 34 ಎಎಸ್‌ಡಿ 2003, ದಿನಾಂಕ: 24–12–2007.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1) ರಂತೆ ಶ್ರೀ ವಿ.ಎಂ. ನಾಯ್ಕ, ನಿವೃತ್ತ ತಹಶೀಲ್ದಾರ್, ಸಹಕಾರ ನಗರ, ಬೆಂಗಳೂರು ಇವರು ಸರ್ಕಾರಕ್ಕೆ ಮನವಿ ಸಲ್ಲಿಸಿ, ತಮಗೆ ವಿಳಂಬವಾಗಿ ಪಾವತಿಸಿದ ನಿವೃತ್ತಿ ವೇತನ ಹಾಗೂ ಗಳಿಕೆ ರಜಾ ನಗದೀಕರಣ ಮೊತ್ತದ ಮೇಲೆ ಬಡ್ಡಿಯನ್ನು ಮಂಜೂರು ಮಾಡುವಂತೆ ಕೋರಿರುತ್ತಾರೆ.

ಶ್ರೀ ವಿ.ಎಂ. ನಾಯ್ಕ ರವರು ದಿನಾಂಕ: 31–05–2006 ರಂದು ಸೇವೆಯಿಂದ ವಯೋನಿವೃತ್ತರಾಗಿದ್ದು, ಮೇಲೆ ಓದಲಾದ ಕ್ರ.ಸಂ. (2)ರ ಸರ್ಕಾರದ ದಿನಾಂಕ: 24–12–2007ರ ಅಧಿಸೂಚನೆಯಲ್ಲಿ ಮಾನ್ಯ ಕೆಎಟಿ ಅರ್ಜಿ ಸಂಖ್ಯೆ:93–173/1996, ದಿನಾಂಕ: 22–04–1997 ರ ತೀರ್ಪಿನನ್ವಯ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 32ರಡಿ ನೇಮಕಾತಿ ಹೊಂದಿದ ದಿನಾಂಕದಿಂದ ಈ ಆದೇಶ ಹೊರಡಿಸಿದ ದಿನಾಂಕದ ಒಳಗಿನ ಅವಧಿಯಲ್ಲಿ ಅವರು ಅಂದಿನ ಬಾಕಿ ವೇತನ ಪಡೆಯಲು ಅರ್ಹರಾಗಿರುವುದಿಲ್ಲ. ಆದರೆ ನಿವೃತ್ತಿ ಸೌಲಭ್ಯಗಳ ಬಾಕಿಗೆ ಅರ್ಹರಾಗಿರುತ್ತಾರೆಂದು ಆದೇಶ ಹೊರಡಿಸಲಾಗಿದೆ.

ಆದರೆ ದಿನಾಂಕ: 19–10–2007 ರಲ್ಲಿ ನಡೆದ ಇಲಾಖಾ ಮುಂಬಡ್ತಿ ಸಮಿತಿ ಸಭೆಯಲ್ಲಿ ಅಂದಿನ ಬಾಕಿ ವೇತನ ಬಡ್ತಿ ಪಡೆಯಲು ಅರ್ಹರಾಗಿರುವುದಿಲ್ಲವೆಂದು ತಿಳಿಸಿಲ್ಲ. ಶ್ರೀ ವಿ.ಎಂ. ನಾಯ್ಕ ಇವರಿಗೆ ಸುತ್ತೋಲೆ ಸಂಖ್ಯೆ: ಆಇ (ವಿಶೇಷ)1 ಪಿಇಎಸ್ 04, ದಿನಾಂಕ: 02–09–2004 ರನ್ವಯ ದಿನಾಂಕ: 01–09–2006 ರಿಂದ 30–06–2009 ರವರೆಗೆ ರಜಾ ಸಂಬಳದ ವ್ಯತ್ಯಾಸದ ಮೊತ್ತಕ್ಕೆ ರೂ. 3070/–ಗಳ ಬಡ್ಡಿಯನ್ನು ಮತ್ತು ಪಿಂಚಣಿ ವ್ಯತ್ಯಾಸದ ಮೊತ್ತಕ್ಕೆ ರೂ. 3273/–ಗಳ ಬಡ್ಡಿಯನ್ನು ಪಾವತಿಸಲು ಮಂಜೂರಾತಿ ನೀಡಲು ಸರ್ಕಾರವು ತೀರ್ಮಾನಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಕಂಇ 502 ಎಎಸ್‌ಡಿ 2009, ಬೆಂಗಳೂರು, ದಿನಾಂಕ: 16-08-2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಆಇ (ವಿಶೇಷ)1 ಪಿಇಎನ್ 04, ದಿನಾಂಕ: 02-09-2004 ರನ್ವಯ ಶ್ರೀ ಪಿ.ಎಂ. ನಾಯ್ಕ ಇವರಿಗೆ ದಿನಾಂಕ: 01-09-2006 ರಿಂದ 30-06-2009 ರವರೆಗೆ ರಜಾ ಸಂಬಳದ ವ್ಯತ್ಯಾಸದ ಮೊತ್ತಕ್ಕೆ ರೂ. 3070/-ಗಳ ಬಡ್ಡಿಯನ್ನು ಮತ್ತು ಪಿಂಚಣಿ ವ್ಯತ್ಯಾಸದ ಮೊತ್ತಕ್ಕೆ ರೂ. 3273/- ಗಳ ಬಡ್ಡಿಯನ್ನು ಪಾವತಿಸಲು ಹೀಗೆ ಒಟ್ಟು 6343/-ಗಳ (ರೂಪಾಯಿ ಆರು ಸಾವಿರದ ಮೂರು ನೂರ ನಲವತ್ತ ಮೂರು ಮಾತ್ರ) ಬಡ್ಡಿ ಮೊತ್ತವನ್ನು ಪಾವತಿಸಲು ಆದೇಶಿಸಿದೆ.

ಈ ಆದೇಶವನ್ನು ಆಂತರಿಕ ಆರ್ಥಿಕ ಸಲಹೆಗಾರರು, ಕಂದಾಯ ಇಲಾಖೆ ಇವರ ಟಿಪ್ಪಣಿ ಸಂಖ್ಯೆ: ಕಂಇ 9824 ಆಂಅಸ 2011, ದಿನಾಂಕ: 25-02-2011 ಮತ್ತು ಆರ್ಥಿಕ ಇಲಾಖೆ (ವಿಶ್ರಾಂತಿ ವೇತನ) ಇವರ ಟಿಪ್ಪಣಿ ಸಂಖ್ಯೆ: ಆಇ (ವಿ) 29 ಪಿಇಎನ್-1/2011, ದಿನಾಂಕ: 04-02-2011 ರಲ್ಲಿ ನೀಡಿರುವ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎನ್. ಗೋಪಾಲಯ್ಯ
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಸೇವೆಗಳು-3).

ಪಿ.ಆರ್.ನಂ. 2135

ಕಂದಾಯ ಸಚಿವಾಲಯ

ವಿಷಯ : ಶ್ರೀ ಕೆ. ಸುಬ್ರಮಣ್ಯಂ, ಶಿರಸ್ತೇದಾರರು, ಇವರಿಗೆ ತಹಶೀಲ್ದಾರ್ ಗ್ರೇಡ್ 2 ಹುದ್ದೆಗೆ ಪೂರ್ವಾನ್ವಯವಾಗಿ ಬಡ್ತಿ ನೀಡುವ ಬಗ್ಗೆ.

ಓದಲಾಗಿದೆ :
1. ಸರ್ಕಾರದ ಪತ್ರ ಸಂಖ್ಯೆ: ಕಂಇ 463 ಎಎಸ್‌ಡಿ 2010, ದಿನಾಂಕ: 29-06-2011.
2. ಶ್ರೀ ಕೆ. ಸುಬ್ರಮಣ್ಯಂ, ಶಿರಸ್ತೇದಾರರು ಇವರ ಮನವಿ ದಿನಾಂಕ: 30-04-2009.
3. ಕರ್ನಾಟಕ ಲೋಕಸೇವಾ ಆಯೋಗದ ಪತ್ರ ಸಂಖ್ಯೆ: ಪಿಎಸ್‌ಸಿ 77 ಸಿಎನ್‌ಎಸ್ 2011, ದಿನಾಂಕ: 10-08-2011.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಸಂ. (1)ರ ಸರ್ಕಾರಿ ಆದೇಶದಲ್ಲಿ, ಕಂದಾಯ ಇಲಾಖೆಯ ಶಿರಸ್ತೇದಾರ್/ಉಪ ತಹಶೀಲ್ದಾರ್ ಅಂತಿಮ ಜೇಷ್ಠತಾ ಪಟ್ಟಿಯ ಬಗ್ಗೆ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ಸಲ್ಲಿಸಲಾಗಿದ್ದ ಅರ್ಜಿ ಸಂಖ್ಯೆ: 3148-3151/2007 ರಲ್ಲಿ, ನ್ಯಾಯ ಮಂಡಳಿಯು ದಿನಾಂಕ: 02-11-2010 ರಂದು ತೀರ್ಪು ನೀಡಿದ್ದು, ಸದರಿ ತೀರ್ಪಿನನ್ವಯ ದಿನಾಂಕ: 31-12-2006 ರವರೆಗೆ ಕ್ರೋಢೀಕೃತ ಜೇಷ್ಠತಾ ಪಟ್ಟಿಯನ್ನು ಸಂಖ್ಯೆ: ಕಂಇ 366 ಬಿಎಂಎಂ 2008, ದಿನಾಂಕ: 14-07-2011 ರ ಅಧಿಸೂಚನೆಯಲ್ಲಿ ಪ್ರಕಟಿಸಲಾಗಿದೆ.

(ಅ) ಸದರಿ ಜೇಷ್ಠತಾ ಪಟ್ಟಿಯಲ್ಲಿ ಶ್ರೀ ಬಾಗಲಯ್ಯ (ಪರಿಶಿಷ್ಟ ಜಾತಿ) ಇವರ ಜೇಷ್ಠತಾ ಸಂಖ್ಯೆ: 4381 ಆಗಿರುತ್ತದೆ.

(ಆ) ಅಧಿಸೂಚನೆ ಸಂಖ್ಯೆ: ಕಂಇ 366 ಬಿಎಂಎಂ 2008(ಪಿ), ದಿನಾಂಕ: 20-08-2011ರ ಜೇಷ್ಠತಾ ಪಟ್ಟಿಯ ತಿದ್ದುಪಡಿ ಆದೇಶದಲ್ಲಿ ಶ್ರೀ ಕೆ. ಸುಬ್ರಮಣ್ಯಂ, ಶಿರಸ್ತೇದಾರ್ (ಎಸ್‌ಸಿ) ಜೇಷ್ಠತಾ ಸಂಖ್ಯೆ: 4380-ಎ ಎಂಬುದಾಗಿ ನಿಗದಿಗೊಳಿಸಿ ಆದೇಶಿಸಲಾಗಿದೆ.

ಶ್ರೀ ಕೆ. ಸುಬ್ರಮಣ್ಯಂ, ಶಿರಸ್ತೇದಾರರು, ಮೈಸೂರು ವಿಭಾಗರವರು ಮೇಲೆ ಓದಲಾದ ಕ್ರಮ ಸಂಖ್ಯೆ (2) ಓದಲಾದ ಮನವಿಯಲ್ಲಿ ತಮಗಿಂತ ಜೇಷ್ಠತೆಯಲ್ಲಿ ಕಿರಿಯರಾಗಿರುವ ಶ್ರೀ ಬಾಗಲಯ್ಯ (ಪರಿಶಿಷ್ಟ ಜಾತಿ) ಇವರಿಗೆ ಸಂಖ್ಯೆ: ಕಂಇ 329 ಎಎಸ್‌ಡಿ 2007, ದಿನಾಂಕ: 28-01-2008 ರ ಅಧಿಸೂಚನೆಯಲ್ಲಿ ತಹಶೀಲ್ದಾರ್ ಗ್ರೇಡ್-2 ವೃಂದಕ್ಕೆ ಮುಂಬಡ್ತಿ ನೀಡಲಾಗಿರುತ್ತದೆ.

ಜೇಷ್ಠತಾ ಸಂಖ್ಯೆ: 4381 ರ ಶ್ರೀ ಬಾಗಲಯ್ಯ ರವರು ಜೇಷ್ಠತೆಯಲ್ಲಿ ಕಿರಿಯರಾಗಿದ್ದು, ಜೇಷ್ಠತಾ ಸಂಖ್ಯೆ: 4380-ಎ ರ ಜೇಷ್ಠತಾ ಸಂಖ್ಯೆ ಹೊಂದಿರುವ ಶ್ರೀ ಕೆ. ಸುಬ್ರಮಣ್ಯಂ ರವರು (ಪರಿಶಿಷ್ಟ ಜಾತಿ) ಜೇಷ್ಠತೆಯಲ್ಲಿ ಹಿರಿಯರಾಗಿದ್ದು, ಜೇಷ್ಠತೆಯಲ್ಲಿ ಕಿರಿಯರಾಗಿರುವ ಶ್ರೀ ಬಾಗಲಯ್ಯ ರವರಿಗೆ ಮುಂಬಡ್ತಿ ನೀಡಿದ ದಿನಾಂಕದಿಂದಲೇ (28-01-2008) ಪೂರ್ವಾನ್ವಯವಾಗಿ ಮುಂಬಡ್ತಿ ನೀಡಲು ಕೋರಿದ್ದಾರೆ.

ಮೇಲೆ ಓದಲಾದ ಕ್ರಸಂ. (3) ರ ಪತ್ರದಲ್ಲಿ, ಕರ್ನಾಟಕ ಲೋಕ ಸೇವಾ ಆಯೋಗವು ಶ್ರೀ ಕೆ. ಸುಬ್ರಮಣ್ಯಂ, ಶಿರಸ್ತೇದಾರರು ಇವರಿಗೆ, ತಹಶೀಲ್ದಾರ್ ಗ್ರೇಡ್-2 ವೃಂದಕ್ಕೆ ದಿನಾಂಕ: 28-01-2008 ರಿಂದ ಜಾರಿಗೆ ಬರುವಂತೆ ಕೆ.ಸಿ.ಎಸ್. (ಆರ್.ಪಿ.ಪಿ.) ನಿಯಮಾವಳಿ 1978 ರ ನಿಯಮ 2(1)(ಎ)ರ ಪ್ರಕಾರ ಪೂರ್ವಾನ್ವಯವಾಗಿ ಮುಂಬಡ್ತಿ ನೀಡುವ ಬಗ್ಗೆ ಸಹಮತಿ ನೀಡಿದೆ. ಆದ್ದರಿಂದ ಈ ಆದೇಶ:-

ಸರ್ಕಾರದ ಆದೇಶ ಸಂಖ್ಯೆ : ಕಂಇ 463 ಎಎಸ್‌ಡಿ 2010 ಬೆಂಗಳೂರು, ದಿನಾಂಕ: 25-08-2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶಿರಸ್ತೇದಾರ್/ಉಪ ತಹಶೀಲ್ದಾರ್‌ರವರ ಜೇಷ್ಠತಾ ಪಟ್ಟಿಯ ಜೇಷ್ಠತೆ ಸಂಖ್ಯೆ: 4381ರ ಶ್ರೀ ಬಾಗಲಯ್ಯ ರವರಿಗೆ ದಿನಾಂಕ: 28-01-2008 ರಂದು, ತಹಶೀಲ್ದಾರ್ ಗ್ರೇಡ್-2 ವೃಂದಕ್ಕೆ ಮುಂಬಡ್ತಿ ನೀಡಿರುವುದರಿಂದ, ಜೇಷ್ಠತಾ ಸಂಖ್ಯೆ: 4380-ಎ ರ ಶ್ರೀ ಕೆ. ಸುಬ್ರಮಣ್ಯಂ ರವರು ಜೇಷ್ಠತೆಯಲ್ಲಿ ಹಿರಿಯ ಸ್ಥಾನ ಪಡೆದಿರುವುದರಿಂದ, ಶ್ರೀ ಬಾಗಲಯ್ಯ ರವರಿಗೆ ಮುಂಬಡ್ತಿ ನೀಡಿದ ದಿನಾಂಕ ಅಂದರೆ, ದಿನಾಂಕ: 28-01-2008 ರಿಂದಲೇ ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ, ಕರ್ನಾಟಕ ನಾಗರೀಕ ಸೇವಾ (ಆರ್.ಪಿ.ಪಿ.) ನಿಯಮಾವಳಿಗಳು-1978 ರ ನಿಯಮ 2(1)(ಎ) ರನ್ವಯ, ತಹಶೀಲ್ದಾರ್ ಗ್ರೇಡ್-2 ವೃಂದಕ್ಕೆ ಮುಂಬಡ್ತಿ ನೀಡಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎನ್. ಗೋಪಾಲಯ್ಯ
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಸೇವೆಗಳು-3).

ಪಿ.ಆರ್.ನಂ. 2136

ಆರ್ಥಿಕ ಸಚಿವಾಲಯ

ವಿಷಯ: ಶ್ರೀ ಆರ್.ಎಂ. ಕುಲಕರ್ಣಿ, ದ್ವಿತೀಯ ದರ್ಜೆ ಸಹಾಯಕ, ಕರ್ನಾಟಕ ಸರ್ಕಾರಿ ವಿಮಾ ಇಲಾಖೆ ಅವರು ಅಮಾನತ್ತಿನಲ್ಲಿ ಕಳೆದ ಹಾಗೂ ಸೇವೆಯಿಂದ ವಜಾಗೊಂಡು ಮತ್ತೆ ಸೇವೆಗೆ ಹಿಂತಿರುಗಿದ ನಡುವಿನ ಅವಧಿಗಳನ್ನು ಇತ್ಯರ್ಥಪಡಿಸುವ ಬಗ್ಗೆ.

ಓದಲಾಗಿದೆ:
1. ಸರ್ಕಾರಿ ಆದೇಶ ಸಂಖ್ಯೆ: ಆಇ 136 ಕವಿಇ 96 ದಿ: 20.9.2002
2. ಸರ್ಕಾರಿ ಆದೇಶ ಸಂಖ್ಯೆ: ಆಇ 13 ಕವಿಇ 2003 ದಿ: 6.5.2010.
3. ಸರ್ಕಾರಿ ಆದೇಶ ಸಂಖ್ಯೆ: ಆಇ 13 ಕವಿಇ 2003 ದಿ: 25.1.2011.
4. ನೋಟೀಸ್ ಸಂಖ್ಯೆ: ಆಇ 24 ಕವಿಇ 11 ದಿ: 5.7.2011.
5. ಶ್ರೀ ಆರ್. ಎಂ. ಕುಲಕರ್ಣಿ, ದ್ವಿತೀಯ ದರ್ಜೆ ಸಹಾಯಕರು, ಕರ್ನಾಟಕ ಸರ್ಕಾರಿ ವಿಮಾ ಇಲಾಖೆ, ಕೊಪ್ಪಳ ಅವರ ಉತ್ತರ ದಿ: 26.7.2011.

ಪ್ರಸ್ತಾವನೆ:

ಜಿಲ್ಲಾ ವಿಮಾ ಕಛೇರಿ, ರಾಯಚೂರು ಇಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ ಅಕ್ರಮ ಸಂಭಾವನೆ ಪಡೆದ ಆರೋಪದ ಮೇಲೆ ಶ್ರೀ ಆರ್.ಎಂ. ಕುಲಕರ್ಣಿ, ದ್ವಿತೀಯ ದರ್ಜೆ ಸಹಾಯಕ, ಕರ್ನಾಟಕ ಸರ್ಕಾರಿ ವಿಮಾ ಇಲಾಖೆ ಅವರ ವಿರುದ್ಧ ಸನ್ಮಾನ್ಯ ಉಪ ಲೋಕಾಯುಕ್ತರ ಮೂಲಕ ಇಲಾಖಾ ವಿಚಾರಣೆ ನಡೆದು ಸನ್ಮಾನ್ಯ ಉಪ ಲೋಕಾಯುಕ್ತರ ಶಿಫಾರಸ್ಸನ್ನು ಒಪ್ಪಿಕೊಂಡ ಮೇಲೆ (1) ರಲ್ಲಿ ಓದಲಾದ ದಿ:20.9.2002ರ ಸರ್ಕಾರಿ ಆದೇಶದಲ್ಲಿ ಶ್ರೀ ಆರ್.ಎಂ.ಕುಲಕರ್ಣಿ, ದ್ವಿತೀಯ ದರ್ಜೆ ಸಹಾಯಕ, ಕರ್ನಾಟಕ ಸರ್ಕಾರಿ ವಿಮಾ ಇಲಾಖೆ ಅವರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 8(vi)ರನ್ವಯ ಸೇವೆಯಿಂದ ಕಡ್ಡಾಯ ನಿವೃತ್ತಿಗೊಳಿಸುವ ದಂಡನೆ ವಿಧಿಸಲಾಯಿತು. ಈ ವಿಚಾರಣೆಯ ಸಂಬಂಧ ಶ್ರೀ ಆರ್.ಎಂ.ಕುಲಕರ್ಣಿ ಅವರನ್ನು ದಿ:4.1.1994 ರಿಂದ 2.5.1994 ರವರೆಗೆ ಹಾಗೂ ದಿ:25.11.1996 ರಿಂದ 12.5.1997ರವರೆಗೆ ಸೇವೆಯಿಂದ ಅಮಾನತ್ತಿನಲ್ಲಿಡಲಾಗಿತ್ತು. ಕಡ್ಡಾಯ ನಿವೃತ್ತಿಗೊಳಿಸಿದ ಕ್ರಮವನ್ನು ಪ್ರಶ್ನಿಸಿ ಶ್ರೀ ಆರ್.ಎಂ. ಕುಲಕರ್ಣಿ ಅವರು ಸಲ್ಲಿಸಿದ ಅರ್ಜಿ ಸಂಖ್ಯೆ: 120/2003ರಲ್ಲಿ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ದಿ:14.9.2009ರ ಆದೇಶ ನೀಡಿ ವಿಚಾರಣಾಧಿಕಾರಿಯ ನಿರ್ಣಯವನ್ನು ಒಪ್ಪದಿರುವ ಸಂದರ್ಭಗಳಲ್ಲಿ ಶಿಸ್ತು ಪ್ರಾಧಿಕಾರವು ಅದಕ್ಕಾಗಿ ತನ್ನದೇ ಆದ ಕಾರಣಗಳನ್ನು ಲಿಖಿತವಾಗಿ ದಾಖಲಿಸಬೇಕು. ಆ ರೀತಿ ದಾಖಲಿಸದೇ ಉಪ ಲೋಕಾಯುಕ್ತರು ದಾಖಲಿಸಿದ ಕಾರಣಗಳನ್ನೇ ವಿಚಾರಣಾ ವರದಿಯನ್ನು ಒಪ್ಪದಿರಲು ಕಾರಣವಾಗಿ ದಾಖಲಿಸಿರುವುದು ಸರಿಯಾದ ಕ್ರಮವಲ್ಲವೆಂದು ಪರಿಗಣಿಸಿ ಅರ್ಜಿದಾರರನ್ನು ಕಡ್ಡಾಯ ನಿವೃತ್ತಿಗೊಳಿಸಿದ ದಿ:20.9.2002ರ ಆದೇಶವನ್ನು ರದ್ದುಪಡಿಸಿತು ಹಾಗೂ ಪ್ರಕರಣವನ್ನು ಸಿ.ಸಿ.ಎ. ನಿಯಮ 11ಎ (2)ರನ್ವಯ ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲು ನಿರ್ದೇಶಿಸಿತು. ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ಮೇಲಿನ ಆದೇಶವನ್ನು ಅನುಷ್ಠಾನಗೊಳಿಸಿ ದಿ:6.5.2010ರ ಸರ್ಕಾರಿ ಆದೇಶದಲ್ಲಿ ಶ್ರೀ ಆರ್.ಎಂ. ಕುಲಕರ್ಣಿ ಅವರನ್ನು ಅವರ ವಿರುದ್ಧ ಇಲಾಖಾ ವಿಚಾರಣೆಯನ್ನು ಲೋಪ ಕಂಡು ಬಂದ ಹಂತದಿಂದ ಮುಂದುವರಿಸುವುದನ್ನು ಬಾಕಿ ಇಟ್ಟು ಮತ್ತೆ ಸೇವೆಗೆ ತೆಗೆದುಕೊಳ್ಳಲಾಯಿತು.

ಇದರ ತರುವಾಯ ವಿಚಾರಣಾ ವರದಿಯನ್ನು ಒಪ್ಪದೇ ಆರೋಪ ಸಾಬೀತಾಗಿದೆ ಎಂದು ನಿರ್ಣಯಿಸುವ ದಿ: 15.7.2010ರ ಸರ್ಕಾರಿ ಆದೇಶ ಹಾಗೂ ಕಾರಣ ಕೇಳುವ ನೋಟೀಸನ್ನು ಜಾರಿ ಮಾಡಿ ಅವರು ಸಲ್ಲಿಸಿದ ದಿ:19.8.2010ರ ಉತ್ತರವನ್ನು ವಿಚಾರಣಾ ವರದಿಯೊಡನೆ ವಿಚಾರಣೆಯ ವಿವಿಧ ಹಂತಗಳನ್ನು ಪರಿಶೀಲಿಸಿ ದಿ:25.1.2011ರ ಸರ್ಕಾರಿ ಆದೇಶದಲ್ಲಿ ಶ್ರೀ ಆರ್. ಎಂ. ಕುಲಕರ್ಣಿ, ದ್ವಿತೀಯ ದರ್ಜೆ ಸಹಾಯಕ, ಕರ್ನಾಟಕ ಸರ್ಕಾರಿ ವಿಮಾ ಇಲಾಖೆ ಅವರನ್ನು ಆರೋಪ ಮುಕ್ತರನ್ನಾಗಿಸಲಾಯಿತು. ಈ ಸಂಬಂಧ ಅವರ 4.1.1994 ರಿಂದ 2.5.1994 ರವರೆಗೆ ಮತ್ತು 25.11.1996ರಿಂದ 12.5.1997ರವರೆಗೆ ಅಮಾನತ್ತಿನಲ್ಲಿ ಕಳೆದ ಅವಧಿ ಹಾಗೂ ದಿ:20.9.2002 ರಿಂದ 6.5.2010ರವರೆಗೆ ಸೇವೆಯಿಂದ ಹೊರಗೆ ಕಳೆದ ಅವಧಿಯನ್ನು ಕರ್ತವ್ಯದ ಮೇಲೆ ಕಳೆಯದ ಅವಧಿ ಎಂದು ಏಕೆ ಪರಿಗಣಿಸಬಾರದೆಂಬುದಕ್ಕೆ ಅವರಿಗೆ ಮೇಲೆ (1)ರಲ್ಲಿ ಓದಲಾದ ದಿ:5.7.2011ರ ನೋಟೀಸ್ ನೀಡಿ ಸಮಜಾಯಿಷಿ ಕೇಳಲಾಯಿತು. ನೌಕರರು ಮೇಲೆ (5)ರಲ್ಲಿ ಓದಲಾದ ದಿ:26.7.2011ರ ಉತ್ತರ ನೀಡಿ ಈ ಸಂಬಂಧ ತಮ್ಮ ವಿರುದ್ಧ ಜರುಗಿಸಿದ ಕ್ರಿಮಿನಲ್ ಮೊಕದ್ದಮೆಯಲ್ಲಿ ತಮ್ಮನ್ನು ನಿರ್ದೋಷಿ ಎಂದು ನ್ಯಾಯಾಲಯವು ದಿ:11.10.1996ರ ಆದೇಶದಲ್ಲಿ; ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ದಿ:14.9.2009ರ ಆದೇಶದಲ್ಲಿ ಹಾಗೂ ಸರ್ಕಾರವು ದಿ:25.1.2011ರ ಆದೇಶದಲ್ಲಿ ಪರಿಗಣಿಸಿರುವುದರಿಂದ ಉದ್ದೇಶಿತ ಕ್ರಮವನ್ನು ಕೈಬಿಟ್ಟು ಸದರಿ ಅವಧಿಯನ್ನು ಕರ್ತವ್ಯದ ಮೇಲಿನ ಅವಧಿ ಎಂದು ಪರಿಗಣಿಸಲು ಕೋರಿದ್ದಾರೆ. ನೌಕರರ ಉತ್ತರವನ್ನು ಪರಿಶೀಲಿಸಲಾಗಿದೆ.

ಶ್ರೀ ಆರ್.ಎಂ. ಕುಲಕರ್ಣಿ ಅವರ ವಿರುದ್ಧ ಕ್ರಿಮಿನಲ್ ಮೊಕದ್ದಮೆಯಲ್ಲಿ ಪ್ರಾಸಿಕ್ಯೂಷನ್ ಪರವಾಗಿ ಮೂವರು ಸಾಕ್ಷಿದಾರರು ನೀಡಿದ ಸಾಕ್ಷ್ಯಗಳಲ್ಲಿನ ಅಂಶಗಳು ಅಕ್ರಮ ಸಂಭಾವನೆಯನ್ನು ಬೇಡಿದ ಹಾಗೂ ಅದನ್ನು ಪಡೆದ ಅಪರಾಧವನ್ನು ಸಾಬೀತುಪಡಿಸಲು ಸಾಕಾಗುವುದಿಲ್ಲ ಎಂಬ ಕಾರಣದ ಮೇಲೆ ರಾಯಚೂರು ಸೆಷನ್ಸ್ ನ್ಯಾಯಾಲಯವು ದಿ:11.10.1996ರ ಆದೇಶದಲ್ಲಿ ನೌಕರರನ್ನು ಖುಲಾಸೆಗೊಳಿಸಿದೆ. ಹಾಗೆಯೇ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯೂ ಸಹ ವಿಚಾರಣಾ ವರದಿಯನ್ನು ಒಪ್ಪದಿರಲು ಹಾಗೂ ಆರೋಪ ಸಾಬೀತಾಗಿದೆ ಎಂದು ದಾಖಲಿಸಲು ತನ್ನ ಬಳಿ ಇರುವ ಸಾಕ್ಷ್ಯ-ಪುರಾವೆಗಳನ್ನು ಚರ್ಚಿಸಿ ಅದರ ಮೂಲಕ ಆರೋಪ ಸಾಬೀತು ಪಡಿಸುವ ಕ್ರಮವನ್ನು ಕೈಗೊಂಡಿಲ್ಲ ಎಂಬ ಆಧಾರದ ಮೇಲೆ ದಂಡನೆ ವಿಧಿಸಿದ ಆದೇಶವನ್ನು ರದ್ದುಪಡಿಸಿ ಪ್ರಕರಣವನ್ನು ಲೋಪ ಕಂಡು ಬಂದ ಹಂತದಿಂದ ವಿಚಾರಣೆಯನ್ನು ಮುಂದುವರಿಸಲು ಹಿಂತಿರುಗಿಸಿದೆ. ಹಾಗೆಯೇ ವಿಚಾರಣಾ ವರದಿಯನ್ನು ಒಪ್ಪಿಕೊಳ್ಳದೇ ಇರಲು ಕಾರಣಗಳನ್ನು ದಾಖಲಿಸಿ ದಿ:15.7.2011ರ ಆದೇಶ/ನೋಟೀಸ್ ಗಳನ್ನೇ ನೌಕರರಿಗೆ ನೀಡಲಾಗಿದೆ. ಆನಂತರವಷ್ಟೇ ನೌಕರರ ಮೇಜಿನಿಂದ ಲಂಚದ ಹಣವನ್ನು ವಶಪಡಿಸಿಕೊಂಡಿದ್ದು, ಹಣವನ್ನು ನೌಕರರು ಕೈಯಿಂದ ಸ್ವೀಕರಿಸದೇ ಇರುವುದು ಸಾಕ್ಷಿಗಳ ಹೇಳಿಕೆಗಳನ್ನು ಪರಿಶೀಲಿಸಿ ಸಂಶಯದ ಲಾಭವನ್ನಷ್ಟೇ ನೌಕರರಿಗೆ ನೀಡಿ ದಿ:25.1.2011ರ ಆದೇಶದಲ್ಲಿ ಅವರನ್ನು ಆರೋಪ ಮುಕ್ತರನ್ನಾಗಿಸಿದೆ. ಈ

ಯಾವುದೇ ಹಂತದಲ್ಲೂ ಶ್ರೀ ಆರ್.ಎಂ. ಕುಲಕರ್ಣಿ ಅವರನ್ನು ನಿರ್ದೋಷಿ ಎಂದು ಘೋಷಿಸಿಲ್ಲ. ಈ ಎಲ್ಲಾ ಅಂಶಗಳನ್ನು ಪರಿಶೀಲಿಸಿದ ಸರ್ಕಾರವು ಈ ಮುಂದಿನಂತೆ ಆದೇಶಿಸುತ್ತದೆ.

ಸರ್ಕಾರದ ಆದೇಶ ಸಂಖ್ಯೆ: ಆಇ 24 ಕವಿಇ 2011 ಬೆಂಗಳೂರು, ದಿನಾಂಕ:26.08.2011

ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ 99(5)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸರ್ಕಾರವು ಶ್ರೀ ಆರ್.ಎಂ.ಕುಲಕರ್ಣಿ, ದ್ವಿತೀಯ ದರ್ಜೆ ಸಹಾಯಕ, ಕರ್ನಾಟಕ ಸರ್ಕಾರಿ ವಿಮಾ ಇಲಾಖೆ ಅವರು ಅವರ ವಿರುದ್ಧ ಇಲಾಖಾ ವಿಚಾರಣೆ/ಕ್ರಿಮಿನಲ್ ಮೊಕದ್ದಮೆ ಸಂಬಂಧ ದಿ:4.1.1994 ರಿಂದ 2.5.1994ರವರೆಗೆ ಮತ್ತು 25.11.1996 ರಿಂದ 12.5.1997 ರವರೆಗೆ ಅಮಾನತ್ತಿನಲ್ಲಿ ಕಳೆದ ಹಾಗೂ ಅವರನ್ನು ಸೇವೆಯಿಂದ ಕಡ್ಡಾಯ ನಿವೃತ್ತಿಗೊಳಿಸಿದ ಪರಿಣಾಮವಾಗಿ ದಿ:20.9.2002ರಿಂದ 6.5.2010ರವರೆಗೆ ಸೇವೆಯಿಂದ ಹೊರಗುಳಿದ ಅವಧಿಯನ್ನು ಕರ್ತವ್ಯದ ಮೇಲೆ ಕಳೆಯದ ಅವಧಿ ಎಂದು ಪರಿಗಣಿಸುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ.ಎಸ್. ಶಿವರಾಮ್

ಪಿ.ಆರ್.ನಂ. 2137

ಸರ್ಕಾರದ ಅಧೀನ ಕಾರ್ಯದರ್ಶಿ

ಆರ್ಥಿಕ ಇಲಾಖೆ (ಆಡಳಿತ & ಮುಂಗಡ)

ಆರ್ಥಿಕ ಸಚಿವಾಲಯ

ಸಂಖ್ಯೆ: ಆಇ 138 ಆಖಇ 2011 ಬೆಂಗಳೂರು, ದಿನಾಂಕ: 29–08–2011

ತಿದ್ದೋಲೆ

ಸರ್ಕಾರಿ ಆದೇಶ ಸಂಖ್ಯೆ:ಆಇ 138 ಆಖಇ 2011 ದಿ:24.8.2011ರ ಆದೇಶ ಭಾಗದ 2ನೇ ಕಂಡಿಕೆಯನ್ನು ದಿ:24.8.2011ರಿಂದಲೇ ಜಾರಿಗೆ ಬರುವಂತೆ ಈ ಕೆಳಕಂಡಂತೆ ತಿದ್ದಿ ಓದಿಕೊಳ್ಳತಕ್ಕದ್ದು.

ಎಲ್ಲಾ ಇಲಾಖೆಗಳು ಆರ್ಥಿಕ ಸೂಚನೆಗಳನ್ನು ಹೊಂದಿರುವ ತಮ್ಮ ಆದೇಶಗಳು, ಪತ್ರ ವ್ಯವಹಾರಗಳು, ಸುತ್ತೋಲೆಗಳು ಇತ್ಯಾದಿಗಳನ್ನು ಸರ್ಕಾರವು ಇನ್ನು ಮುಂದೆ ನಿಗದಿಪಡಿಸುವ ದಿನಾಂಕದಿಂದ ಕಡ್ಡಾಯವಾಗಿ ಖಜಾನೆ–II ಮೂಲಕವೇ ಹೊರಡಿಸತಕ್ಕದು

ಆದೇಶದ ಭಾಗದ 3ನೇ ಕಂಡಿಕೆಯನ್ನು ದಿ:24.8.2011ರಿಂದಲೇ ಜಾರಿಗೆ ಬರುವಂತೆ ಈ ಕೆಳಕಂಡಂತೆ ತಿದ್ದಿ ಓದಿಕೊಳ್ಳತಕ್ಕದ್ದು.

ಖಜಾನೆ–II ಯೋಜನೆಯ ಅನುಷ್ಟಾನದಲ್ಲಿ ಪಾಲ್ಗೊಳ್ಳುವ ಮುಖ್ಯ ನಿಯಂತ್ರಣಾಧಿಕಾರಿಗಳು, ನಿಯಂತ್ರಣಾಧಿಕಾರಿಗಳು ಹಾಗೂ ಸಂಬಂಧಪಟ್ಟ ಇಲಾಖೆಗಳ ಹಣ ಸೆಳೆಯುವ ಹಾಗೂ ಬಟವಾಡೆ ಅಧಿಕಾರಿಗಳಿಗೆ ಅಗತ್ಯವಾದ ಕಂಪ್ಯೂಟರ್, ಪ್ರಿಂಟರ್, ಇಂಟರ್‌ನೆಟ್ ಅಥವಾ ಕೆ.ಎಸ್.ಡಬ್ಲ್ಯೂ.ಎ.ಎನ್ ಸಂಪರ್ಕ ಸಾಧನಗಳನ್ನು ಒದಗಿಸುವ ಬಗ್ಗೆ ಕಾರ್ಯವಿಧಾನವನ್ನು ನಿಗದಿಪಡಿಸಿ ಪ್ರತ್ಯೇಕವಾಗಿ ಆದೇಶ ಹೊರಡಿಸಲಾಗುವುದು.

ಪಿ.ಆರ್.ನಂ. 2138

ಎಂ.ಎಸ್. ಶಿವರಾಮ್

ಸರ್ಕಾರದ ಅಧೀನ ಕಾರ್ಯದರ್ಶಿ,

ಆರ್ಥಿಕ ಇಲಾಖೆ (ಆಡಳಿತ ಮತ್ತು ಮುಂಗಡ)

ಕಂದಾಯ ಸಚಿವಾಲಯ

ವಿಷಯ : ಶ್ರೀ ವ್ಹಿ.ಎಸ್.ಜೋಶಿ, ನಿವೃತ್ತ ತಹಶೀಲ್ದಾರ್ ಇವರ ಹೆಸರನ್ನು ತಹಶೀಲ್ದಾರ್ ಗ್ರೇಡ್–2 ಜ್ಯೇಷ್ಠತಾ ಪಟ್ಟಿಯಲ್ಲಿ ಸೇರ್ಪಡೆ ಮಾಡುವುದರ ಬಗ್ಗೆ.

ಓದಲಾಗಿದೆ:

1) ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 338 ಎಎಸ್‌ಡಿ 2009, ದಿ: 08.04.2010.
2) ಮಹಾಲೇಖಪಾಲರ ಪತ್ರ ಸಂಖ್ಯೆ: GEI/R3/Vol329/394, ದಿ: 28.05.2010.
3) ಶ್ರೀ ವಿ.ಎಸ್.ಜೋಶಿ, ನಿವೃತ್ತ ತಹಶೀಲ್ದಾರ್, ಇವರ ಮನವಿ ದಿ: 11.06.2010.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1) ರಲ್ಲಿ ಸರ್ಕಾರವು ಶ್ರೀ ವ್ಹಿ.ಎಸ್.ಜೋಶಿ, ನಿವೃತ್ತ ತಹಶೀಲ್ದಾರ್ ಇವರಿಗೆ, ಇವರಿಗಿಂತ ಸೇವಾ ಜೇಷ್ಠತೆಯಲ್ಲಿ ಕಿರಿಯರಾದ ಶ್ರೀ ಬಿ.ಸಿ. ಪಾಟೀಲ ಇವರಿಗೆ ಸರ್ಕಾರದ ಅಧಿಸೂಚನೆ ಸಂ: ಆರ್‌ಡಿ 30 ಎಟಿಎಸ್ 92, ದಿನಾಂಕ:01.09.1993ರಲ್ಲಿ

ತಹಶೀಲ್ದಾರ್ ಗ್ರೇಡ್-2 ವೃಂದಕ್ಕೆ ಬಡ್ತಿ ನೀಡಿದ ದಿನಾಂಕದಿಂದ, ಶ್ರೀ ವ್ಹಿ.ಎಸ್. ಜೋಶಿ ಇವರಿಗೂ ಸಹ ಅದೇ ದಿನಾಂಕ:01.09.1993ನ್ನು ತಹಶೀಲ್ದಾರ್ ಗ್ರೇಡ್-2 ವೃಂದದ ಅರ್ಹತಾ ದಿನಾಂಕ (Deemed Date of eligibility) ಎಂದು ನಿಗದಿಪಡಿಸಲಾಗಿದೆ.

ಅದೇ ರೀತಿಯಾಗಿ ಸರ್ಕಾರದ ಅಧಿಸೂಚನೆ ಕ್ರಸಂ.ಆರ್‌ಡಿ 36 ಎಎಸ್‌ಡಿ 95, ದಿನಾಂಕ: 23.11.1995ರಡಿ ಶ್ರೀ ಬಿ.ಸಿ. ಪಾಟೀಲ ಇವರಿಗೆ ತಹಶೀಲ್ದಾರ್ ಗ್ರೇಡ್-I ವೃಂದಕ್ಕೆ ಅರ್ಹತಾ ದಿನಾಂಕ ನೀಡಿ ಆದೇಶಿಸಿದ ದಿನಾಂಕದಿಂದ ಸೇವಾ ಜೇಷ್ಠತೆಯಲ್ಲಿ ಅವರಿಗಿಂತ [illegible] ಶ್ರೀ ವ್ಹಿ.ಎಸ್.ಜೋಶಿ ಇವರಿಗೂ ಸಹ ತಹಶೀಲ್ದಾರ್ ಗ್ರೇಡ್-I ವೃಂದದಲ್ಲಿ ದಿನಾಂಕ:22.11.1995ನ್ನು ಅರ್ಹತಾ ದಿನಾಂಕ (Deemed Date of eligibility) ನಿಗದಿಪಡಿಸಿ ಆದೇಶಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಮಹಾಲೇಖಪಾಲರ ಪತ್ರದಲ್ಲಿ ಕರ್ನಾಟಕ ರಾಜ್ಯ ನಾಗರೀಕ ಸೇವಾ (ಮುಂಬಡ್ತಿ ವೇತನ ಮತ್ತು ಪಿಂಚಣಿ ಕ್ರಮ ಬದ್ದತೆ) ಅಧಿನಿಯಮ 1973 ಸೆಕ್ಷನ್ 4 ರನ್ವಯ ದೊರಕಬೇಕಾದ ಸೌಲಭ್ಯಗಳನ್ನು ನೀಡಲು ಸರ್ಕಾರದ ಅಧಿಸೂಚನೆ ಸಂಖ್ಯೆ: ಆರ್‌ಡಿ 12 ಎಎಸ್‌ಜಿ 2001, ದಿನಾಂಕ:11.06.2007 ರ ತಹಶೀಲ್ದಾರ್ ಗ್ರೇಡ್-2-ಜೇಷ್ಠತಾ ಪಟ್ಟಿಯಲ್ಲಿ ಸದರಿಯವರಿಗೆ ಕ್ರಮ ಸಂಖ್ಯೆ ಮತ್ತು ಅರ್ಹತಾ ದಿನಾಂಕವನ್ನು ನೀಡುವಂತೆ ಕೋರಿರುತ್ತಾರೆ.

ಶ್ರೀ ಬಿ.ಸಿ. ಪಾಟೀಲ ಇವರಿಗೆ ದಿನಾಂಕ:01.09.1993 ರಿಂದ ಗ್ರೇಡ್-II ತಹಶೀಲ್ದಾರ್ ವೃಂದಕ್ಕೆ ಬಡ್ತಿ ಕೊಟ್ಟಿದ್ದರ ಆಧಾರದ ಮೇಲೆ ವ್ಹಿ.ಎಸ್.ಜೋಷಿ ಇವರಿಗೆ ತಹಶೀಲ್ದಾರ್ ಗ್ರೇಡ್-II ವೃಂದದಲ್ಲಿ ದಿನಾಂಕ:01.09.1993 ಅರ್ಹತಾ ದಿನಾಂಕ ಎಂದು ನಿಗದಿಪಡಿಸಿದ್ದರಿಂದ ಶ್ರೀ ಬಿ.ಸಿ.ಪಾಟೀಲ್ ಇವರ ಹೆಸರನ್ನೂ ಸಹ ಈಗಾಗಲೇ ಪ್ರಕಟಿಸಿದ ತಹಶೀಲ್ದಾರ್ ಗ್ರೇಡ್-II ವೃಂದದ ಜೇಷ್ಠತಾ ಪಟ್ಟಿಯಲ್ಲಿ ಸೇರ್ಪಡೆ ಮಾಡಬೇಕಾಗುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ(3) ರಲ್ಲಿ ಶ್ರೀ ವ್ಹಿ.ಎಸ್.ಜೋಷಿ, ನಿವೃತ್ತ ತಹಶೀಲ್ದಾರ್, ರವರು ತಮಗೆ ನೀಡಿದ ಅರ್ಹತಾ ದಿನಾಂಕದ ಆಧಾರದ ಮೇಲೆ ಸರ್ಕಾರದ ಅಧಿಸೂಚನೆ ಸಂಖ್ಯೆ:ಆರ್‌ಡಿ 253 ಎಎಸ್‌ಜಿ 2001, ದಿನಾಂಕ:11.06.2007ರ ತಹಶೀಲ್ದಾರ್ ಗ್ರೇಡ್-II ಜೇಷ್ಠತಾ ಪಟ್ಟಿಯಲ್ಲಿ ಕ್ರಮ ಸಂಖ್ಯೆ 1137 ಮತ್ತು 1138ರ ನಡುವೆ ತಮ್ಮ ಹೆಸರನ್ನು ಸೇರಿಸುವಂತೆ ಕೋರಿರುತ್ತಾರೆ. ಈ ಹಿನ್ನೆಲೆಯಲ್ಲಿ ಸರ್ಕಾರದ ಅಧಿಸೂಚನೆ ಸಂಖ್ಯೆ: ಆರ್‌ಡಿ 253 ಎಎಸ್‌ಡಿ 2008, ದಿ:31.05.2011 ರಲ್ಲಿ ಪ್ರಕಟಿಸಿದ ಗ್ರೇಡ್-2 ತಹಶೀಲ್ದಾರ್ ಜೇಷ್ಠತಾ ಪಟ್ಟಿಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 414 ಎಎಸ್‌ಡಿ 2010, ಬೆಂಗಳೂರು, ದಿನಾಂಕ:23.08.2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಸರ್ಕಾರದ ಅಧಿಸೂಚನೆ ಸಂಖ್ಯೆ: ಆರ್‌ಡಿ 253 ಎಎಸ್‌ಡಿ 2008, ದಿನಾಂಕ: 31.05.2011 ರಲ್ಲಿ ಇತ್ತೀಚೆಗೆ ಪ್ರಕಟಿಸಲಾದ ತಹಶೀಲ್ದಾರ್ ಗ್ರೇಡ್-2 ಅಂತಿಮ ಜೇಷ್ಠತಾ ಪಟ್ಟಿಯಲ್ಲಿನ ಅನುಬಂಧ 2 ರಲ್ಲಿನ ಕ್ರಮ ಸಂಖ್ಯೆ:1137 ರಲ್ಲಿರುವ ಶ್ರೀ ಮಹದೇವ್ ವಾಲಿಕಾರ್, ಇವರ ಹೆಸರಿನ ಕೆಳಗೆ ಕ್ರಮ ಸಂಖ್ಯೆ:1137-ಎ ಎಂದು ಶ್ರೀ ವ್ಹಿ.ಎಸ್. ಜೋಶಿ, ಇವರ ಹೆಸರನ್ನು ಈ ಕೆಳಗಿನಂತೆ ಸೇರ್ಪಡೆ ಮಾಡಿ ಆದೇಶಿಸಿದೆ.

Sl.No	Sl No in the feeder cadre	Name	Date of Birth	Qualiying Date in Grioup B Tahsildar Cadre	Remarks
1137-A		V.S. Joshi	04-05-1950	01-09-1993	
1137-B		B.C Patil	09-03-1938	01-09-1993	

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್.ನಂ. 2139

ಎನ್. ಗೋಪಾಲಯ್ಯ
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಸೇವೆಗಳು-3)

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ಮಲ್ಲಿಕಾರ್ಜುನ ಎಸ್. ಗಡೇಕಾರ, ಎ.ಪಿ.ಸಿ., ಸಿ.ಎ.ಆರ್., ಹುಬ್ಬಳ್ಳಿ-ಧಾರವಾಡ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ:

1. ಶಿಸ್ತು ಪ್ರಾಧಿಕಾರ ಹಗೂ ಪೊಲೀಸ್ ಆಯುಕ್ತರು, ಹುಬ್ಬಳ್ಳಿ-ಧಾರವಾಡ, ಇವರ ಆದೇಶ ಸಂಖ್ಯೆ: ಸಿಪಿ/ಸಿಬ್ಬಂದಿ (3)/ನಿಯಮ-6/04-2009 (ಓ.ಬಿ. ಸಂಖ್ಯೆ: 162/2010) ದಿ: 02-3-2010
2. ಮೇಲ್ಮನವಿ ಪ್ರಾಧಿಕಾರ ಹಾಗೂ ಡಿ.ಜಿ. ಮತ್ತು ಐ.ಜಿ.ಪಿ., ಬೆಂಗಳೂರು, ಇವರ ಆದೇಶ ಸಂಖ್ಯೆ: ಅಪೀಲು (4)/08/2010-11 (ಓ.ಬಿ.ಸಂಖ್ಯೆ: 31/2010-11) ದಿ: 04-11/2010
3. ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿ: 18-02-2011
4. ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಅಪೀಲು (2)/91/2010-11 ದಿನಾಂಕ: 16-5-2011

ಪ್ರಸ್ತಾವನೆ:

ಶ್ರೀ ಮಲ್ಲಿಕಾರ್ಜುನ ಎಸ್. ಗಡೇಕರ, ಎ.ಪಿ.ಸಿ., ಸಿ.ಎ.ಆರ್., ಹುಬ್ಬಳ್ಳಿ-ಧಾರವಾಡ, ಇವರು (ಇನ್ನು ಮುಂದೆ ಅರ್ಜಿದಾರರೆಂದು ಸಂಬೋಧಿಸಲಾಗುವುದು) ಅಶಿಸ್ತು ಮತ್ತು ದುರ್ನಡತೆ ಪ್ರದರ್ಶಿಸಿದ ಕಾರಣ [illegible] (ಶಿಸ್ತು ನಡವಳಿ) ನಿಯಮಗಳು 1965ರ ನಿಯಮ 6 ರಡಿಯಲ್ಲಿ ಇಲಾಖಾ ವಿಚಾರಣೆಗೆ ಆದೇಶಿಸಿ, ಈ ಕೆಳಕಂಡ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷಾರೋಪಣೆ:

"ಶ್ರೀ ಎಂ.ಹಿ. ಗಡೇಕಾರ, ಎ.ಪಿ.ಸಿ.-141, ಸಿ.ಎ.ಆರ್. ಹುಬ್ಬಳ್ಳಿ-ಧಾರವಾಡ ಘಟಕದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ನೀವು ಉಣಕಲ್ ಗ್ರಾಮದ ನಿವಾಸಿಯಾದ ಶ್ರೀಮತಿ ಮಲ್ಲವ್ವಾ ಕೋಂ ರಾಮಪ್ಪ ಮುಳಗುಂದ ಇವರು 6 ಎಕರೆ ಹೊಲವನ್ನು ಹಾಗೂ 1 1/2 ಎಕರೆ ಮಸಾರಿ ಹೊಲವನ್ನು ಹೊಂದಿದ ಬಗ್ಗೆ ತಿಳಿದಿದ್ದು ಅಲ್ಲದೇ ಶ್ರೀಮತಿ ಮಲ್ಲವ್ವಾ ಇವರು ಹಣದ ಅಡಚಣೆ ಇದ್ದಾಗ ಶ್ರೀ ರಾಮಪ್ಪ ಪದ್ಮಣ್ಣಾ ಇವರಿಂದ ಬಾಂಡ್ ಪೇಪರ್ ಮೇಲೆ ಬರೆದು 20,000/- ರೂ. ಗಳನ್ನು ಪಡೆದುಕೊಂಡಿರುವ ವಿಷಯ ಸಹ ತಿಳಿದಿರುತ್ತೀರಿ.

ನಂತರ ಶ್ರೀಮತಿ ಮಲ್ಲವ್ವಾ ಇವರು ತೀರ ಹಣದ ಅಡಚಣೆ ಉಂಟಾಗಿದ್ದರಿಂದ ತಮ್ಮ 6 ಎಕರೆ ಹೊಲವನ್ನು ಮಾರಲು ವಿಚಾರ ಮಾಡಿದ್ದು, ಈ ವಿಷಯ ತಿಳಿದ ನೀವು ಹಾಗೇನಾದರೂ ಹೊಲವನ್ನು ಮಾರುವುದಾದರೆ ಅಥವಾ ಸಂಚಕಾರ ತೆಗೆದುಕೊಳ್ಳುವ ವಿಚಾರದಲ್ಲಿ ನಿಮ್ಮನ್ನು ಕರೆದುಕೊಂಡು ಹೋದಲ್ಲಿ ನೀವೇ ನಿಂತು ವ್ಯವಹಾರವನ್ನು ಮುಗಿಸಿಕೊಡುವುದಾಗಿ ಹೇಳಿದ್ದರಿಂದ ಶ್ರೀಮತಿ ಮಲ್ಲವ್ವಾ ಇವರು ನಿಮ್ಮ ಮಾತನ್ನು ನಂಬಿ ಶ್ರೀ ಅಚಲದಾಸ ತುಳಸೀದಾಸ ರೇವಣಕರ ಇವರನ್ನು ಸಂಪರ್ಕಿಸಿ ಪ್ರತಿ ಎಕರೆಗೆ 5 ಲಕ್ಷದಂತೆ 6 ಎಕರೆಗೆ 30 ಲಕ್ಷ ರೂ.ಗಳಿಗೆ ಮಾತು ಮುಗಿಸಿದ್ದು ದಿ:12-5-2008 ರಂದು ಶ್ರೀ ಅಚಲದಾಸ ತುಳಸೀದಾಸ ರೇವಣಕರ ಇವರು ನಿಮ್ಮ ಶ್ರೀಮತಿ ಮಲ್ಲವ್ವಾ ಹಾಗೂ ಅವರ ಮಗಳಾದ ಶ್ರೀಮತಿ ಗೌರಮ್ಮ ಹಾಗೂ ಇನ್ನೂ 2 ಜನರ ಸಮಕ್ಷಮ ವ್ಯವಹಾರ ಮುಗಿಸಿ 50,000/-ರೂಗಳನ್ನು ಸಂಚಕಾರ ಎಂದು ನೀಡಿದ್ದು ಇರುತ್ತದೆ.

ಹಣ ಪಡೆದುಕೊಂಡು ಹೊರಗೆ ಬರುವಷ್ಟರಲ್ಲಿ ನೀವು ಶ್ರೀಮತಿ ಮಲ್ಲವ್ವಾ ಇವರಿಗೆ ನೀವು ತಟ್ಟಿ ಮನೆಯಲ್ಲಿ ವಾಸವಾಗಿದ್ದು ದುಡ್ಡಿಗೆ ಯಾವುದೇ ಸುರಕ್ಷತೆ ಇರುವುದಿಲ್ಲ ಎಂದು ಹಾಗೂ ಶ್ರೀ ರಾಮಪ್ಪ ಪದ್ಮಣ್ಣ ಇವರಿಂದ ಪಡೆದ 20,000/- ರೂ. ಹಣವನ್ನು ಅವರಿಗೆ ಕೊಟ್ಟು ಅವರಿಂದ ಬಾಂಡ್ ಪೇಪರನ್ನು ವಾಪಸ್ ಪಡೆದುಕೊಂಡು ಬಾಕಿ ಉಳಿದ ಹಣವನ್ನು ನಿಮಗೆ ಅವಶ್ಯಕತೆ ಇದ್ದಾಗ ಮರಳಿ ಕೊಡುವುದಾಗಿ ಹೇಳಿ ಅವರನ್ನು ನಂಬಿಸಿ 50,000/- ರೂ. ಹಣವನ್ನು ತೆಗೆದುಕೊಂಡಿದ್ದು ನಂತರ ಹಣವನ್ನು ಶ್ರೀ ರಾಮಪ್ಪ ಪದ್ಮಣ್ಣ ಇವರಿಗೆ ಕೊಟ್ಟು ಅವರಿಂದ ಬಾಂಡ್ ಪೇಪರನ್ನು ವಾಪಸ್ ಪಡೆದ ಬಗ್ಗೆ ಶ್ರೀಮತಿ ಮಲ್ಲವ್ವಾ ಹಾಗೂ ಅವಳ ಮಗಳಿಗೆ ತಿಳಿಸದೇ ಇದ್ದುದರಿಂದ ಅವರು ನಿಮಗೆ ಕೇಳಿದಾಗ ನೀವು ಶ್ರೀ ರಾಮಪ್ಪ ಪದ್ಮಣ್ಣ ಇವರಿಗೆ ಹಣವನ್ನು ಕೊಟ್ಟಿದ್ದು ದಾಖಲಾತಿಗಳು ನನ್ನಲ್ಲೇ ಇರಲಿ ಎಂದು ಹೇಳಿ ಅವರಿಗೆ ಟಕಾಯಿಸುತ್ತಾ ಬಂದಿದ್ದು ಇರುತ್ತದೆ. ದಾಖಲಾತಿಗಳು ಹಾಗೂ ಸಂಚಾರ ರೂಪದಲ್ಲಿ ನೀಡಿದ ಹಣವನ್ನು ಅವರಿಗೆ ಮೋಸ ಮಾಡುವ ಉದ್ದೇಶದಿಂದ ತೆಗೆದುಕೊಂಡು ಮರಳಿ ಕೊಡದೇ ಇರುವ ಬಗ್ಗೆ ನಿಮ್ಮ ಮೇಲೆ ದೋಷಾರೋಪಣೆಯನ್ನು ಹೊರಡಿಸಿದೆ."

ಮೇಲ್ಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳು ಆರೋಪ ಸಾಬೀತಾಗಿಲ್ಲವೆಂದು ಸಲ್ಲಿಸಿದ ವರದಿಯನ್ನು ಒಪ್ಪದ ಶಿಸ್ತು ಪ್ರಾಧಿಕಾರವು ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತುಪ್ರಾಧಿಕಾರಿ ಹಾಗೂ ಪೊಲೀಸ್ ಆಯುಕ್ತರು, ಹುಬ್ಬಳ್ಳಿ-ಧಾರವಾಡ, ಇವರು ಮೇಲೆ ಕ್ರಮ ಸಂಖ್ಯೆ: (1)ರಲ್ಲಿ ಓದಲಾದ ದಿನಾಂಕ: 02-3-2010ರ ಆದೇಶದಲ್ಲಿ ಅರ್ಜಿದಾರರ ವಾರ್ಷಿಕ ವೇತನ ಬಡ್ತಿಯನ್ನು ಮುಂದಿನ ವಾರ್ಷಿಕ ವೇತನ ಬಡ್ತಿಗಳಿಗೆ ಧಕ್ಕೆಯಾಗದಂತೆ ಒಂದು ವರ್ಷ ಕಾಲ ಮುಂದೂಡುವ ದಂಡನೆಯನ್ನು ವಿಧಿಸಿದ್ದಾರೆ. ದಿನಾಂಕ: 11-6-09 ರಿಂದ 23-12-09ರ ವರೆಗೆ ಒಟ್ಟು 195 ದಿನಗಳ ಅಮಾನತ್ತಿನ ಅವಧಿಯನ್ನು ಅಮಾನತ್ತೆಂದೆ ಪರಿಗಣಿಸಲಾಗಿದೆ.

ಈ ಆದೇಶದ ವಿರುದ್ಧ ಸಲ್ಲಿಸಿದ .ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಡಿ.ಜಿ. ಮತ್ತು ಐ.ಜಿ.ಪಿ., ಬೆಂಗಳೂರು, ಇವರು ಮೇಲೆ ಕ್ರಮ ಸಂಖ್ಯೆ: (2)ರಲ್ಲಿ ಓದಲಾದ ದಿನಾಂಕ: 04-11-10ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ಇಲಾಖಾ ವಿಚಾರಣೆ ದಾಖಲೆಗಳನ್ನು ಪರಿಶೀಲಿಸಲಾಗಿದೆ. ಸದರಿ ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿ ಪರಿಗಣಿಸುವಂತಹ ಯಾವುದೇ ಸಮರ್ಥನೀಯ ಹೊಸ ಅಂಶಗಳು ಇರುವುದಿಲ್ಲ. ಅರ್ಜಿದಾರರು ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಅತೀವ ನಿರ್ಲಕ್ಷತೆ, ದುರ್ನಡತೆ ಹಗೂ ಬೇಜವಾಬ್ದಾರಿತನ ಪ್ರದರ್ಶಿಸಿರುವುದನ್ನು ಗಮನಿಸಲಾಗಿದೆ. ಆದ್ದರಿಂದ ಶಿಸ್ತು ಪ್ರಾಧಿಕಾರಿಯು ವಿಧಿಸಿರುವ ದಂಡನೆ ಆದೇಶದಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯತೆ ಕಂಡು ಬರುತ್ತಿಲ್ಲವಾದ್ದರಿಂದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 19 ಪೊಸಿಅ 2011 ಬೆಂಗಳೂರು, ದಿನಾಂಕ: 24-8-2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಮಲ್ಲಿಕಾರ್ಜುನ ಎಸ್. ಗಡೇಕಾರ, ಎ.ಪಿ.ಸಿ., ಸಿ.ಎ.ಆರ್., ಹುಬ್ಬಳ್ಳಿ-ಧಾರವಾಡ, ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಟಿ.ಎನ್. ರವಿಪ್ರಕಾಶ್

ಸರ್ಕಾರದ ಅಧೀನ ಕಾರ್ಯದರ್ಶಿ,

ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ಪಿ.ಆರ್.ನಂ. 2140

WPP-47 / 2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೬	ಬೆಂಗಳೂರು, ಗುರುವಾರ, ನವೆಂಬರ್ ೩, ೨೦೧೧ (ಕಾರ್ತಿಕ ೧೨, ಶಕ ವರ್ಷ ೧೯೩೩)	ಸಂಚಿಕೆ ೪೩

ಭಾಗ – ೨

ನೇಮಕಗಳು, ಸ್ಥಳ ನೇಮಕಗಳು, ವರ್ಗಾವಣೆಗಳು, ರಜೆ ಮತ್ತು ಅಧಿಕಾರಿಗಳು, ಕರ್ನಾಟಕ ಉಚ್ಚ ನ್ಯಾಯಾಲಯದ ಅಧಿಸೂಚನೆಗಳು

ಸಹಕಾರ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಒ 133 ಸಿಎನ್‌ಎಸ್ 2008, ಬೆಂಗಳೂರು, ದಿನಾಂಕ: 12ನೇ ಸೆಪ್ಟೆಂಬರ್, 2011.

ಈ ಹಿಂದೆ ಸರ್ಕಾರದಿಂದ ಮಾಡಿರುವ ಎಲ್ಲಾ ನಾಮನಿರ್ದೇಶನಗಳನ್ನು ರದ್ದುಪಡಿಸಿ, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 (1959ರ ಕರ್ನಾಟಕ ಅಧಿನಿಯಮ ಸಂಖ್ಯೆ 11)ರ ಪ್ರಕರಣ 29ರ ಉಪ ಪ್ರಕರಣ (1)ರ ಮೇರೆಗೆ ದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಕೆಳಕಂಡ ವ್ಯಕ್ತಿಗಳನ್ನು **ಕೋಲಾರ ಜಿಲ್ಲೆ ಮಾಲೂರು ತಾಲ್ಲೂಕಿನ ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ ನಿ. ಮಾಲೂರು** ಇದರ ಆಡಳಿತ ಮಂಡಳಿಗೆ ಸದಸ್ಯರನ್ನಾಗಿ ಈ ಕೂಡಲೇ ಜಾರಿಗೆ ಬರುವಂತೆ ಹಾಗೂ ಸರ್ಕಾರದ ಮುಂದಿನ ಆದೇಶದವರೆಗೆ ನಾಮನಿರ್ದೇಶನ ಮಾಡುತ್ತದೆ.

1. ಶ್ರೀ ರಾಮಯ್ಯ ಬಿನ್ ಬೈರಪ್ಪ, ಪಡವನಹಳ್ಳಿ ಗ್ರಾಮ, ಲಕ್ಕೂರು ಹೋಬಳಿ, ಮಾಲೂರು ತಾಲ್ಲೂಕು
2. ಶ್ರೀಮತಿ ಪಾರ್ವತಮ್ಮ ಬಿನ್ ರಾಮಚಂದ್ರಪ್ಪ, ತೊಳಸನಹಳ್ಳಿ ಗ್ರಾಮ, ಮಾಸ್ತಿ ಹೋಬಳಿ, ಮಾಲೂರು ತಾಲ್ಲೂಕು
3. ಶ್ರೀ ಸಾಕಪ್ಪ ಬಿನ್ ಸಾಕಪ್ಪ, ಬಿಟ್ನಹಳ್ಳಿ ಗ್ರಾಮ, ಮಾಸ್ತಿ ಹೋಬಳಿ, ಮಾಲೂರು ತಾಲ್ಲೂಕು

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಆರ್.ಎಸ್. ನೂಲಿ,
ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಜಂಟಿ ಕಾರ್ಯದರ್ಶಿ,
ಸಹಕಾರ ಇಲಾಖೆ.

ಪಿ.ಆರ್. 1304

ಸಹಕಾರ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಒ 47 ಸಿಎನ್‌ಎಸ್ 2011, ಬೆಂಗಳೂರು, ದಿನಾಂಕ: 22ನೇ ಸೆಪ್ಟೆಂಬರ್, 2011.

ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಒ 157 ಸಿಎನ್‌ಎಸ್ 2008 ದಿನಾಂಕ: 14–10–2009ರಲ್ಲಿ ಹಾವೇರಿ ಜಿಲ್ಲೆ ರಾಣೆಬೆನ್ನೂರು ತಾಲ್ಲೂಕಿನ ಕರ್ನಾಟಕ ಕೋ–ಆಪ್ ಉಲನ್ ಟೆಕ್ಸ್‌ಟೈಲ್ ಮಿಲ್ ನಿಯಮಿತ, ಕಮದೋಡ ಇದರ ಆಡಳಿತ ಮಂಡಳಿಗೆ ಮಾಡಿದ್ದ ಶ್ರೀ ಕರಿಯಪ್ಪ ಮಲ್ಲೇಶಪ್ಪ ಬೀರಾಳ, ಸಾ: ಹಿರೇಬಿದರಿ ಇವರ ನಾಮನಿರ್ದೇಶನವನ್ನು ಮಾರ್ಪಡಿಸಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 (1959ರ ಕರ್ನಾಟಕ ಅಧಿನಿಯಮ ಸಂಖ್ಯೆ 11)ರ ಪ್ರಕರಣ 29ರ ಉಪ ಪ್ರಕರಣ (1)ರ ಮೇರೆಗೆ ದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು **ಶ್ರೀ ಕರಿಯಪ್ಪ ಮಲ್ಲೇಶಪ್ಪ ಬೀರಾಳ, ಸಾ: ಹಿರೇಬಿದರಿ** ಇವರನ್ನು **ಹಾವೇರಿ ಜಿಲ್ಲೆ ರಾಣೆಬೆನ್ನೂರು ತಾಲ್ಲೂಕಿನ ಕರ್ನಾಟಕ ಕೋ–ಆಪ್ ಉಲನ್ ಟೆಕ್ಸ್‌ಟೈಲ್ ಮಿಲ್ ನಿಯಮಿತ, ಕಮದೋಡ** ಇದರ ಆಡಳಿತ ಮಂಡಳಿಗೆ ಪುನಃ ಸದಸ್ಯರನ್ನಾಗಿ ಈ ಕೂಡಲೇ ಜಾರಿಗೆ ಬರುವಂತೆ ಮತ್ತು ಹಾಗೂ ಸರ್ಕಾರದ ಮುಂದಿನ ಆದೇಶದವರೆಗೆ ನಾಮನಿರ್ದೇಶನ ಮಾಡುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಆರ್.ಎಸ್. ನೂಲಿ,
ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಜಂಟಿ ಕಾರ್ಯದರ್ಶಿ,
ಸಹಕಾರ ಇಲಾಖೆ.

ಪಿ.ಆರ್. 1305

ಒಳಾಡಳಿತ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಒಇ 36 ಕಗೃಸೇ 2011, ಬೆಂಗಳೂರು, ದಿನಾಂಕ: 24ನೇ ಮೇ, 2011.

ಕರ್ನಾಟಕ ಗೃಹರಕ್ಷಕ ಅಧಿನಿಯಮ 1962ರ (ತಿದ್ದುಪಡಿ ನಿಯಮಗಳು 2003) ನಿಯಮ 3ಬಿ ರ ಉಪ ಕಲಂ (3)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಶ್ರೀ ಬಿ.ಹೆಚ್. ವೀರಪ್ಪ, ದೈಹಿಕ ಶಿಕ್ಷಕರು ಇವರನ್ನು ದಾವಣಗೆರೆ ಜಿಲ್ಲೆಯ ಗೃಹರಕ್ಷಕ ದಳದ ಗೌರವ ಸಮಾದೇಷ್ಟರನ್ನಾಗಿ ಈ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ನೇಮಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಅದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಜಿ.ಆರ್. ಶ್ರೀನಿವಾಸರಾವ್,

ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರಭಾರ)

ಒಳಾಡಳಿತ ಇಲಾಖೆ, (ಪೊಲೀಸ್ ಸಹಾಯಕ ಸೇವೆಗಳು)

ಪಿ.ಆರ್. 1306

PERSONNEL AND ADMINISTRATIVE REFORMS SECRETARIAT

NOTIFICATION

NO. DPAR 202 SPS 2010, Bangalore, Dated: 24th September, 2011

Shri. K.V. Gagandeep, IPS (KN-86), Additional Director General of Police & Inspector General of Prisons, Bangalore is posted as Additional Director General of Police, Administration, Bangalore in the cadre post for a day in the vacant post. From the next day Shri. K.V. Gagandeep, IPS, is re-posted as Additional Director General of Police & Inspector General of Prisons, Bangalore.

By Order and in the Name of the Governor of Karnataka,

ASHOK P. ATRE,

Under Secretary to Government,

DP&AR (Services-IV)

P.R : 1307

PERSONNEL AND ADMINISTRATIVE REFORMS SECRETARIAT

NOTIFICATION

NO. DPAR 99 SFP 2011, Bangalore, Dated: 23rd September, 2011

/ipin Singh, IFS (KN-98), Deputy Conservator of Forests & Project Director, Karnataka State Wide Area Network (KSWAN), e-Governance, DPAR, Bangalore is transferred with immediate effect and his services are placed at the disposal of Health & Family Welfa.)epartment for being posted as **Deputy Conservator of Forests & Additional Director of Karnataka State Drug Logistic and \ ehousing Society, Bangalore** vice Sri. N. Jayadev, KAS, transferred.

Gov nt declare under rule 11 of IFS (Pay) Rules, 2007, that the post of Deputy Conservator of Forests & Additional Director of Karn a State Drug Logistic and Warehousing Society, Bangalore, is equivalent in status and responsibilities to the IFS cadre post of Deputy Conservator of Forests (Head Quarters), included in schedule II-B to the said rules.

By Order and in the Name of the Governor of Karnataka,

A.P. ATRE,

Under Secretary to Government,

DP&AR (Services-IV)

P.R : 1308

PERSONNEL AND ADMINISTRATIVE REFORMS SECRETARIAT

NOTIFICATION

NO. DPAR 490 SAS 2011, Bangalore, Dated: 28th September, 2011

Smt. K. Ratna Prabha, IAS, (KN 81), waiting for posting is posted with immediate effect and until further orders as ***Regional Commissioner, Gulbarga Division, Gulbarga*** vice Dr. Rajneesh Goel, IAS transferred.

By Order and in the Name of the Governor of Karnataka,

N. Srinivasa Murthy,

Under Secretary to Government,

DP&AR (Services-I)

P.R : 1309

PERSONNEL AND ADMINISTRATIVE REFORMS SECRETARIAT

NOTIFICATION

NO. DPAR 463 SAS 2011, Bangalore, Dated: 28th September, 2011

Smt. M. Deepa, IAS (KN 2008), Assistant Commissioner, Gadag Sub-Division, Gadag is transferred with immediate effect and posted until further orders as ***Director, Rural Infrastructure RD&PR Department, Bangalore*** in the existing vacancy.

By Order and in the Name of the Governor of Karnataka

N. Srinivasa Murthy,

Under Secretary to Government,

DP&AR (Services-I)

P.R : 1310

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಆಸುಇ 210 ಸಿಶಾಸೇ 2010, ಬೆಂಗಳೂರು, ದಿನಾಂಕ: 26ನೇ ಸೆಪ್ಟೆಂಬರ್, 2011.

2011ನೇ ಸಾಲಿನಲ್ಲಿ 60 ವರ್ಷ ವಯೋಮಿತಿಯು ಪೂರ್ಣಗೊಳ್ಳಲಿರುವ ಕರ್ನಾಟಕ ಸರ್ಕಾರ ಸಚಿವಾಲಯದ ಶಾಖಾಧಿಕಾರಿಯಾದ **ಶ್ರೀಮತಿ ಸಾದಿಕ ಬಾನು, ಯೋಜನೆ ಇಲಾಖೆ** ಇವರ ಜನ್ಮ ದಿನಾಂಕವು 01-11-1951 ಆಗಿದ್ದು, ಇವರು 60 ವರ್ಷ ವಯೋಮಿತಿಯು ಪೂರ್ಣಗೊಂಡು ದಿನಾಂಕ: 31-10-2011ರ ಅಪರಾಹ್ನದಿಂದ ಜಾರಿಗೆ ಬರುವಂತೆ ಸರ್ಕಾರಿ ಸೇವೆಯಿಂದ ನಿವೃತ್ತರಾಗಲಿರುವರು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಸ್.ಎನ್. ಕೃಷ್ಣಮೂರ್ತಿ,

ಸರ್ಕಾರದ ಅಧೀನ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸಿಬ್ಬಂದಿ)

ಪಿ.ಆರ್. 1311

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಆಸುಇ 148 ಎಸ್‌ಐಎಸ್ 2011, ಬೆಂಗಳೂರು, ದಿನಾಂಕ: 22ನೇ ಸೆಪ್ಟೆಂಬರ್, 2011.

ಶ್ರೀ ಅಜಯ್ ಸೇಠ್, ಭಾ.ಆ.ಸೇ., ಸರ್ಕಾರದ ಕಾರ್ಯದರ್ಶಿ, ಆರ್ಥಿಕ ಇಲಾಖೆ (ಆಯವ್ಯಯ ಮತ್ತು ಸಂಪನ್ಮೂಲ) ಬೆಂಗಳೂರು ಇವರು ದಿನಾಂಕ: 09-09-2011ರಂದು ಲಭ್ಯವಿರುವ ನಿರ್ಬಂಧಿತ ರಜೆ ಹಾಗೂ ದಿನಾಂಕ: 10-09-2011 ಮತ್ತು 11-09-2011ರಂದು ಲಭ್ಯವಿರುವ ಸಾರ್ವತ್ರಿಕ ರಜೆಗಳನ್ನು ಹಾಗೂ ದಿನಾಂಕ: 12-09-2011 ಮತ್ತು 13-09-2011ರಂದು ಸಾಂದರ್ಭಿಕ ರಜೆಗಳನ್ನು ಉಪಯೋಗಿಸಿಕೊಂಡು ದಿನಾಂಕ: 09-09-2011 ರಿಂದ 13-09-2011ರ ಅವಧಿಯಲ್ಲಿ ಪ್ರಸಕ್ತ 2010-11ನೇ ಬ್ಲಾಕ್‌ನಲ್ಲಿ ಸ್ವಗ್ರಾಮ ಪ್ರಯಾಣ ರಿಯಾಯಿತಿಯನ್ನು ಸ್ವತಃ ಉಪಯೋಗಿಸಿಕೊಂಡು ತಮ್ಮ ಸ್ವಗ್ರಾಮವಾದ **ಶಹಜ್ಞಾನ್‌ಪುರ್**‌ಗೆ ಹೋಗಿ ಬರಲು ಅನುಮತಿ ನೀಡಲಾಗಿದೆ ಹಾಗೂ ಅವರ ಈ ಕೆಳಕಂಡ ಕುಟುಂಬದ ಸದಸ್ಯರು ದಿನಾಂಕ: 25-09-2011 ರಿಂದ 09-10-2011ರ ಅವಧಿಯಲ್ಲಿ ಸದರಿ ರಿಯಾಯಿತಿಯನ್ನು ಉಪಯೋಗಿಸಿಕೊಂಡು **ಶಹಜ್ಞಾನ್‌ಪುರ್**‌ಗೆ ಹೋಗಿ ಬರಲು ಸರ್ಕಾರ ಅನುಮತಿ ನೀಡಿದೆ.

ಕ್ರಮ ಸಂಖ್ಯೆ	ಹೆಸರು	ಸಂಬಂಧ	ವಯಸ್ಸು
1	ಶ್ರೀಮತಿ ಸೋನು ಸೇಠ್	ಪತ್ನಿ	40 ವರ್ಷ
2	ಕುಮಾರಿ: ಮಿತಾಲಿ	ಮಗಳು	14 ವರ್ಷ

ಕೇಂದ್ರ ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ: O.M.No.14028/4/2009-Estt.(L), ದಿನಾಂಕ: 03-06-2009 ರನ್ವಯ ಹಾಗೂ ಈ ಸಂಬಂಧ ಕೇಂದ್ರ ಸರ್ಕಾರದ ಸಂಖ್ಯೆ: 11019/24/2005-AIS-III. ದಿನಾಂಕ: 03-11-2009ರ ಪತ್ರದಲ್ಲಿ ನೀಡಿರುವ ಸ್ಪಷ್ಟೀಕರಣದ ಹಿನ್ನೆಲೆಯಲ್ಲಿ ಅಧಿಕಾರಿಯವರಿಗೆ 10 ದಿನಗಳ ಗಳಿಕೆ ರಜೆ ನಗದೀಕರಣ ಸೌಲಭ್ಯ ಪಡೆಯಲು ಸಹ ಅನುಮತಿ ನೀಡಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಎನ್. ಶ್ರೀನಿವಾಸಮೂರ್ತಿ,

ಸರ್ಕಾರದ ಅಧೀನ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು-I)

ಪಿ.ಆರ್. 1312

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಆಸುಇ 83 ಆಸೇವ 2011, ಬೆಂಗಳೂರು, ದಿನಾಂಕ: 17ನೇ ಸೆಪ್ಟೆಂಬರ್, 2011.

ಅಧಿಸೂಚನೆ ಸಂಖ್ಯೆ: DPAR 1 SKG 2010 ದಿನಾಂಕ: 3-3-2011ರಲ್ಲಿ ಪ್ರಕಟಿಸಿರುವ ಕೆ.ಎ.ಎಸ್.ಸಮೂಹ-ಎ (ಆಯ್ಕೆ ಶ್ರೇಣಿ) ವೃಂದದ ಅಂತಿಮ ಜೇಷ್ಠತಾ ಪಟ್ಟಿಯ ಆಧಾರದ ಮೇಲೆ ಈ ಕೆಳಕಂಡ ಕೆ.ಎ.ಎಸ್.ಸಮೂಹ-ಎ (ಆಯ್ಕೆ ಶ್ರೇಣಿ) ಅಧಿಕಾರಿಗಳಿಗೆ, ತಕ್ಷಣದಿಂದ ಜಾರಿಗೆ ಬರುವಂತೆ ₹.26250-36500ರ ವೇತನ ಶ್ರೇಣಿಯ ಕೆ.ಎ.ಎಸ್. (ಸೂಪರ್ ಟೈಂ ಸ್ಕೇಲ್) ವೃಂದಕ್ಕೆ ಸ್ಥಾನಪನ್ನರಾಗಲು ಬಡ್ತಿ ನೀಡಿ, ಮುಂದಿನ ಆದೇಶದವರೆಗೆ ಅವರುಗಳ ಹೆಸರಿನ ಮುಂದೆ ಸೂಚಿಸಿರುವ ಹುದ್ದೆಗಳಿಗೆ ಸ್ಥಳನಿಯುಕ್ತಿಗೊಳಿಸಿ ನೇಮಿಸಿದೆ.

ಕ್ರಮ ಸಂಖ್ಯೆ	ಅಧಿಕಾರಿಯ ಹೆಸರು ಮತ್ತು ಪ್ರಸ್ತುತ ಹುದ್ದೆ ಶ್ರೀ/ಶ್ರೀಮತಿ	ಬಡ್ತಿ ಮೇಲೆ ನೇಮಿಸಿದ ಹುದ್ದೆ
1	ಉಮೇಶ್ ಕುಸುಗಲ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್, ಹಾವೇರಿ	ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್, ಹಾವೇರಿ ಹುದ್ದೆಯಲ್ಲಿಯೇ ಮುಂದುವರಿಸಲಾಗಿದೆ
2	ಸಿ. ಕೃಷ್ಣೇಗೌಡ ಜಂಟಿ ಆಯುಕ್ತರು, ಬೆಂಗಳೂರು ಮೆಟ್ರೋಪಾಲಿಟನ್ ಟಾಸ್ಕ್ ಫೋರ್ಸ್, ಬಿ.ಬಿ.ಎಂ.ಪಿ., ಬೆಂಗಳೂರು	ಅಪರ ಆಯುಕ್ತರು ಹುದ್ದೆಗೆ ಉನ್ನತೀಕರಿಸಿ ಬೆಂಗಳೂರು ಮೆಟ್ರೋಪಾಲಿಟನ್ ಟಾಸ್ಕ್ ಫೋರ್ಸ್, ಬಿ.ಬಿ.ಎಂ.ಪಿ., ಬೆಂಗಳೂರು ಹುದ್ದೆಯಲ್ಲಿಯೇ ಮುಂದುವರಿಸಿದೆ.
8) ಅಭ್ಯರ್ಥಿಯು ತರಬೇತಿ ಭತ್ಯೆಯನ್ನು ಮಧ್ಯದಲ್ಲಿ ಬಿಡುವಂತಿಲ್ಲ. ಈ ಬಗ್ಗೆ ಒಂದು ಮುಚ್ಚಳಿಕೆ ಪತ್ರ ನೀಡಬೇಕು. ಒಂದು ವೇಳೆ ಸರ್ಕಾರಿ ಉದ್ಯೋಗ ದೊರಕಿದಲ್ಲಿ ಅಥವಾ ನ್ಯಾಯಾಧಿಕಾರಿಯಾಗಿ ನೇಮಕಾತಿ ಹೊಂದಿದಲ್ಲಿ ಜಿಲ್ಲಾ ಸಮಿತಿಯ ಗಮನಕ್ಕೆ ತಂದು ತರಬೇತಿಯಿಂದ ಮುಕ್ತರಾಗಬೇಕು. ವಿಶೇಷ ಸಂದರ್ಭದಲ್ಲಿ ತರಬೇತಿ ಬಿಡಬೇಕಾದಲ್ಲಿ ಸರ್ಕಾರದ ಅನುಮತಿ ಪಡೆಯಬೇಕು.

9) ಆಯ್ಕೆಯಾದ ಅಭ್ಯರ್ಥಿಗಳು ಜಿಲ್ಲಾ ಪಬ್ಲಿಕ್ ಪ್ರಾಸಿಕ್ಯೂಟರ್, ಸರ್ಕಾರಿ ವಕೀಲರು ಅಥವಾ ಕನಿಷ್ಟ 20 ವರ್ಷಗಳ ವಕೀಲ ವೃತ್ತಿಯಲ್ಲಿ ಅನುಭವವುಳ್ಳ ಯಾವುದೇ ವಕೀಲರ ಅಧೀನದಲ್ಲಿ ತರಬೇತಿಗೆ ನಿಯೋಜಿಸಲಾಗುವುದು.

10) ಅರ್ಜಿಯ ಜೊತೆಯಲ್ಲಿ ಅವಶ್ಯ ಮಾಹಿತಿಗಳಾದ ಕಾನೂನು ಪದವಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಪ್ರಮಾಣ ಪತ್ರ, ಅಂಕ ಪಟ್ಟಿಗಳ ದೃಢೀಕರಣ ಪ್ರತಿ, ಎಸ್.ಎಸ್.ಎಲ್.ಸಿ. ಅಂಕಪಟ್ಟಿ, ವರ್ಗಾವಣೆ ಪತ್ರಗಳ ದೃಢೀಕರಣ ಪ್ರತಿಗಳನ್ನು ಸಲ್ಲಿಸಬೇಕು.

11) ಅರ್ಹ ಅಭ್ಯರ್ಥಿಗಳಿಗೆ ಆಯ್ಕೆ ಸಮಿತಿಯ ಸಂದರ್ಶನದ ದಿನಾಂಕ ಹಾಗೂ ಸ್ಥಳವನ್ನು ತಿಳಿಸಲಾಗುವುದು. ಸಂದರ್ಶನಕ್ಕೆ ಅಭ್ಯರ್ಥಿಗಳು ಸ್ವಂತ ಖರ್ಚಿನಲ್ಲಿ ಹಾಜರಾಗತಕ್ಕದ್ದು.

ಹೆಚ್ಚಿನ ಮಾಹಿತಿಗಾಗಿ ಅಭ್ಯರ್ಥಿಗಳು ಜಿಲ್ಲಾ ಅಧಿಕಾರಿಗಳ ಕಛೇರಿ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬೆಂಗಳೂರು ನಗರ ಜಿಲ್ಲೆ, 1ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಡಾ: ಅಂಬೇಡ್ಕರ್ ವೀದಿ, ಬೆಂಗಳೂರು, ಇವರ ಕಚೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ

ಭರ್ತಿ ಮಾಡಿದ ಅರ್ಜಿಗಳನ್ನು ಸದಸ್ಯ ಕಾರ್ಯದರ್ಶಿಗಳು ಹಾಗೂ ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು, ಇವರಿಗೆ ಸಲ್ಲಿಸುವುದು. ಅವಧಿ ಮೀರಿ ಬಂದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

ಸದಸ್ಯ ಕಾರ್ಯದರ್ಶಿಗಳು ಹಾಗೂ ಜಿಲ್ಲಾ ಅಧಿಕಾರಿಗಳು,
ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ,
ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.

ಪಿ.ಆರ್. 1155

ಜಿಲ್ಲಾ ಅಧಿಕಾರಿಗಳ ಕಛೇರಿ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು

ಸಂಖ್ಯೆ:ಡಿಬಿಸಿಎಂ/ಬೆನ/ಹಿಂವ.ಕಾತಭ/ಸಿಆರ್-2/2011-12 ಬೆಂಗಳೂರು, ದಿನಾಂಕ:17/10/2011.

ಪ್ರಕಟಣೆ

ವಿಷಯ: 2011-12ನೇ ಸಾಲಿನಲ್ಲಿ ಬೆಂಗಳೂರು ನಗರ ಜಿಲ್ಲೆಯ ಹಿಂದುಳಿದ ವರ್ಗಗಳ ಕಾನೂನು ಪದವೀಧರರನ್ನು ನ್ಯಾಯಾಂಗ ಆಡಳಿತ ಹಾಗೂ ವಕೀಲ ವೃತ್ತಿಯ ತರಬೇತಿಗೆ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸುವ ಬಗ್ಗೆ.

ಉಲ್ಲೇಖ : 1) ಸರ್ಕಾರಿ ಆದೇಶ ಸಂಖ್ಯೆ.ಎಸಡಬ್ಲ್ಯುಎಲ್ 68 ಎಸ್ಇಡಬ್ಲ್ಯು 89 ದಿನಾಂಕ:2-11-1990.
2) ಸರ್ಕಾರದ ಆದೇಶ ಸಂ.ಸಕಇ/205 ಬಿಎಂಎಸ್ 99, ದಿನಾಂಕ : 7-10-1999.
3) ಈ ಕಛೇರಿ ಪ್ರಕಟಣೆ ಸಮಸಂಖ್ಯೆ ದಿನಾಂಕ:27/6/2011.

2011-12ನೇ ಸಾಲಿನಲ್ಲಿ ಬೆಂಗಳೂರು ನಗರ ಜಿಲ್ಲೆಗೆ ಸೇರಿರುವ ಹಿಂದುಳಿದ ವರ್ಗಗಳಿಗೆ ಸೇರಿದ ಪ್ರವರ್ಗ-1, 2ಎ, 3ಎ, ಮತ್ತು 3ಬಿ ವರ್ಗಗಳಿಗೆ ಸೇರಿದ ಕಾನೂನು ಪದವೀಧರರಿಂದ ನ್ಯಾಯಾಂಗ ಆಡಳಿತದಲ್ಲಿ ಹಾಗೂ ವಕೀಲ ವೃತ್ತಿಯ ತರಬೇತಿ ಭತ್ಯೆ ಮಂಜೂರಾತಿಗಾಗಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಹಿಂದುಳಿದ ವರ್ಗಗಳಿಗೆ ಸೇರಿದ ಈ ಕೆಳಕಂಡ ನಿಬಂಧನೆಗಳನ್ನು ಪಾಲಿಸಬಲ್ಲ ಕಾನೂನು ಪದವೀಧರ ಅಭ್ಯರ್ಥಿಗಳು ನಿಗದಿತ ಅರ್ಜಿ ನಮೂನೆಯನ್ನು ಈ ಕಛೇರಿಯಲ್ಲಿ ಪಡೆದು ಭರ್ತಿ ಮಾಡಿದ ಅರ್ಜಿಗಳನ್ನು ಸದಸ್ಯ ಕಾರ್ಯದರ್ಶಿಗಳು ಹಾಗೂ ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬೆಂಗಳೂರು ನಗರ ಜಿಲ್ಲೆ, 1ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಡಾ: ಅಂಬೇಡ್ಕರ್ ವೀದಿ, ಬೆಂಗಳೂರು, ಇವರ ಕಛೇರಿಯಲ್ಲಿ ದಿನಾಂಕ:18/7/2011ರೊಳಗಾಗಿ ಸಲ್ಲಿಸಲು ನಿಗಧಿಪಡಿಸಲಾಗಿತ್ತು. ಆದರೆ ಸಾಕಷ್ಟು ಅರ್ಜಿಗಳು ಬಾರದ ಪ್ರಯುಕ್ತ ದಿನಾಂಕ: 10/11/2011 ರವರೆಗೆ ವಿಸ್ತರಿಸಲಾಗಿದೆ.

ನಿಬಂಧನೆಗಳು:

1. ಅಭ್ಯರ್ಥಿಯು ಬೆಂಗಳೂರು ನಗರ ಜಿಲ್ಲೆಗೆ ಸೇರಿದವರಾಗಿರಬೇಕು.
2. ಅಭ್ಯರ್ಥಿಯು ವರ್ಗ-1, 2ಎ, 3ಎ ಮತ್ತು 3ಬಿ ವರ್ಗಕ್ಕೆ ಸೇರಿದವರಾಗಿರಬೇಕು.

3. ಪ್ರವರ್ಗ-1ರಡಿ ಬರುವ ಅಭ್ಯರ್ಥಿಗಳಿಗೆ ಆದಾಯದ ಮಿತಿ ಇರುವುದಿಲ್ಲ. ಇತರೆ ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ ರೂ.15000/-ಗಳ ವಾರ್ಷಿಕ ಆದಾಯದ ಮಿತಿಯನ್ನು ನಿಗದಿಪಡಿಸಿದೆ.

4. ಅಭ್ಯರ್ಥಿಯು ಬಾರ್ ಕೌನ್ಸಿಲ್ನಲ್ಲಿ ಹೆಸರನ್ನು ನೊಂದಾಯಿಸಿರಬೇಕು.

5. ಅಭ್ಯರ್ಥಿಯು ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕಕ್ಕೆ ಅಭ್ಯರ್ಥಿಯು 2 ವರ್ಷದೊಳಗೆ ಕಾನೂನು ಪದವಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.

6. ಅಭ್ಯರ್ಥಿಯು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕಡೆಯ ದಿನಾಂಕಕ್ಕೆ ಅಭ್ಯರ್ಥಿಯ ವಯಸ್ಸು 30 ವರ್ಷಗಳ ವಯೋಮಿತಿಯಲ್ಲಿರಬೇಕು.

7. ಆಯ್ಕೆಯಾದ ಅಭ್ಯರ್ಥಿಗಳಿಗೆ 4 ವರ್ಷಗಳ ತರಬೇತಿ ಭತ್ಯೆ ನೀಡಲಾಗುವುದು ಮತ್ತು ಮಾಹೆಯಾನ ರೂ.1000/-ಗಳ ತರಬೇತಿ ಭತ್ಯೆ ನೀಡಲಾಗುವುದು.

8. ಅಭ್ಯರ್ಥಿಯು ತರಬೇತಿಯನ್ನು ಮಧ್ಯದಲ್ಲಿ ಬಿಡುವಂತಿಲ್ಲ. ಈ ಬಗ್ಗೆ ಒಂದು ಮುಚ್ಚಳಿಕೆ ಪತ್ರ ನೀಡಬೇಕು. ಒಂದು ವೇಳೆ ಸರ್ಕಾರಿ ಉದ್ಯೋಗ ದೊರಕಿದಲ್ಲಿ ಅಥವಾ ನ್ಯಾಯಾಧಿಕಾರಿಯಾಗಿ ನೇಮಕಾತಿ ಹೊಂದಿದಲ್ಲಿ ಜಿಲ್ಲಾ ಸಮಿತಿಯ ಗಮನಕ್ಕೆ ತಂದು ತರಬೇತಿ ಬಿಡಬಹುದು. ವಿಶೇಷ ಸಂದರ್ಭದಲ್ಲಿ ತರಬೇತಿ ಬಿಡಬೇಕಾದಲ್ಲಿ ಸರ್ಕಾರದ ಅನುಮತಿ ಪಡೆಯಬೇಕು.

9. ಆಯ್ಕೆಯಾದ ಅಭ್ಯರ್ಥಿಗಳು ಜಿಲ್ಲಾ ಪಬ್ಲಿಕ್ ಪ್ರಾಸಿಕ್ಯೂಟರ್, ಸರ್ಕಾರಿ ವಕೀಲರು ಅಥವಾ ಕನಿಷ್ಟ 20 ವರ್ಷಗಳ ವಕೀಲ ವೃತ್ತಿಯಲ್ಲಿ ಅನುಭವವುಳ್ಳ ಯಾವುದೇ ವಕೀಲರ ಅಧೀನದಲ್ಲಿ ತರಬೇತಿಗೆ ನಿಯೋಜಿಸಲಾಗುವುದು.

10. ಅರ್ಜಿಯ ಜೊತೆಯಲ್ಲಿ ಅವಶ್ಯ ಮಾಹಿತಿಗಳಾದ ಕಾನೂನು ಪದವಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಪ್ರಮಾಣ ಪತ್ರ, ಅಂಕ ಪಟ್ಟಿಗಳ ದೃಢೀಕರಣ ಪ್ರತಿ, ಎಸ್.ಎಸ್.ಎಲ್.ಸಿ.ಅಂಕಪಟ್ಟಿ, ವರ್ಗಾವಣೆ ಪತ್ರದ ದೃಢೀಕರಣ ಪ್ರತಿಗಳನ್ನು ದೃಢೀಕರಿಸಿ ಸಲ್ಲಿಸಬೇಕು.

11. ಅರ್ಹ ಅಭ್ಯಥಿಗಳಿಗೆ ಆಯ್ಕೆ ಸಮಿತಿಯ ಸಂದರ್ಶನದ ದಿನಾಂಕ ಹಾಗೂ ಸ್ಥಳವನ್ನು ತಿಳಿಸಲಾಗುವುದು. ಸಂದರ್ಶನಕ್ಕೆ ಅಭ್ಯರ್ಥಿಗಳು ಸ್ವಂತ ಖರ್ಚಿನಲ್ಲಿ ಹಾಜರಾಗತಕ್ಕದ್ದು.

12. ಹೆಚ್ಚಿನ ಮಾಹಿತಿಗಾಗಿ ಅಭ್ಯರ್ಥಿಗಳು ಜಿಲ್ಲಾ ಅಧಿಕಾರಿಗಳ ಕಚೇರಿ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬೆಂಗಳೂರು ನಗರ ಜಿಲ್ಲೆ, 1ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಡಾ: ಅಂಬೇಡ್ಕರ್ ವೀದಿ, ಬೆಂಗಳೂರು-1, ಇವರ ಕಚೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯುವುದು.

ಭರ್ತಿ ಮಾಡಿದ ಅರ್ಜಿಗಳನ್ನು ಸದಸ್ಯ ಕಾರ್ಯದರ್ಶಿಗಳು ಹಾಗೂ ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು, ಇವರಿಗೆ ಸಲ್ಲಿಸುವುದು. ಅವಧಿ ಮೀರಿ ಬಂದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

ಸದಸ್ಯ ಕಾರ್ಯದರ್ಶಿಗಳು ಹಾಗೂ ಜಿಲ್ಲಾ ಅಧಿಕಾರಿಗಳು,
ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ,
ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.

ಪಿ.ಆರ್. 1156

ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ

ಬಸವ ಭವನ, ಹೈ ಗ್ರೌಂಡ್ಸ್, ಬೆಂಗಳೂರು ೫೬೦ ೦೦೧

ಸಂಖ್ಯೆ:ಕರಾಆ:ಆಡಳಿತ:೦೫:೨೦೧೧ ದಿನಾಂಕ: ೧೩-೧೦-೨೦೧೧

ಪ್ರಕಟಣೆ

ವಿಷಯ : ಗ್ರಾಹಕ ಸಂರಕ್ಷಣಾ ಕಾಯ್ದೆ ೧೯೮೬ರ ಕಲಂ ೧೦(೧ಬಿ) ರಡಿಯಲ್ಲಿ ಉಡುಪಿ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ವೇದಿಕೆಯ ಸದಸ್ಯರ ಆಯ್ಕೆ ಬಗ್ಗೆ

ಗ್ರಾಹಕ ಸಂರಕ್ಷಣಾ ಕಾಯ್ದೆ ೧೯೮೬ರ ಕಲಂ ೯(ಎ)ರನ್ವಯ ರಚಿತವಾಗಿರುವ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ವೇದಿಕೆಗಳಿಗೆ ಸಂಬಂಧಿಸಿದಂತೆ, ದಿನಾಂಕ ೦೪-೦೯-೨೦೧೧ ರಿಂದ ಖಾಲಿಯಿರುವ ಉಡುಪಿ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ವೇದಿಕೆಯ ಸದಸ್ಯರ ಸ್ಥಾನಕ್ಕೆ ಸೂಕ್ತರಾದವರನ್ನು ಆಯ್ಕೆ ಮಾಡುವ ಸಲುವಾಗಿ ನಿಗದಿತ ಅರ್ಜಿ ನಮೂನೆಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಗ್ರಾಹಕ ಸಂರಕ್ಷಣಾ ಕಾಯ್ದೆ ೧೯೮೬ರ ಕಲಂ ೧೦(೧ಬಿ)ರನ್ವಯ ೩೫ ವರ್ಷ ವಯಸ್ಸಾಗಿರುವವರು, ಅಂಗೀಕೃತ ವಿಶ್ವವಿದ್ಯಾಲಯದ ಪದವೀಧರರಾಗಿರುವವರು ಮತ್ತು ನ್ಯಾಯ, ನಿಷ್ಠೆ ಮತ್ತು ಪ್ರಾಮಾಣಿಕತೆಯನ್ನು ಹೊಂದಿರುವುದರ ಜೊತೆಗೆ ಕಾನೂನು, ಹಣಕಾಸು, ವಾಣಿಜ್ಯ, ಲೆಕ್ಕ, ಕೈಗಾರಿಕೆ, ಸಾರ್ವಜನಿಕ ವ್ಯವಹಾರಗಳು ಮತ್ತು ಸಾರ್ವಜನಿಕ ಆಡಳಿತ ಇವುಗಳಲ್ಲಿ ಕನಿಷ್ಠ ಹತ್ತು ವರ್ಷಗಳ ಅನುಭವ ಹೊಂದಿರುವವರು ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ವೇದಿಕೆಯ ಸದಸ್ಯರಾಗಲು ಅರ್ಹರಿರುತ್ತಾರೆ.

ಮೇಲಿನ ಅರ್ಹತೆಯನ್ನು ಹೊಂದಿರುವಂತಹ ಅಭ್ಯರ್ಥಿಗಳು ಭರ್ತಿ ಮಾಡಿದ ಅರ್ಜಿ ನಮೂನೆಯನ್ನು ಹಾಗೂ ಅಗತ್ಯ ದಾಖಲೆಗಳ ದೃಢೀಕೃತ ಪ್ರತಿಗಳನ್ನು ಲಕೋಟೆಯಲ್ಲಿರಿಸಿ, ಲಕೋಟೆಯ ಮೇಲ್ಭಾಗದಲ್ಲಿ **"ಉಡುಪಿ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ವೇದಿಕೆಯ ಸದಸ್ಯರ ಹುದ್ದೆಗೆ ಅರ್ಜಿ"** ಎಂದು ದಪ್ಪ ಅಕ್ಷರಗಳಲ್ಲಿ ಬರದು, **ದಿನಾಂಕ ೧೧ ನೇ ನವೆಂಬರ್ ೨೦೧೧ ಶುಕ್ರವಾರ ಸಂಜೆ ೫.೦೦ ಘಂಟೆಯೊಳಗಾಗಿ** ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ, ಬಸವ ಭವನ, ಹೈಗ್ರೌಂಡ್ಸ್, ಬೆಂಗಳೂರು ೫೬೦ ೦೦೧ ಇಲ್ಲಿಗೆ ಸಲ್ಲಿಸುವುದು.

ನಿಗದಿತ ದಿನಾಂಕ ಹಾಗೂ ಸಮಯದ ನಂತರ ಅಂಚೆ ಮೂಲಕ ಅಥವಾ ನೇರವಾಗಿ ಬರುವಂತಹ ಯಾವುದೇ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ. ನಿಗದಿತ ಅರ್ಜಿ ನಮೂನೆಯು ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ವೆಬ್‌ಸೈಟ್ http://kscdrc.kar.nic.in ನಲ್ಲಿ ಲಭ್ಯವಿದ್ದು, ಸಂಬಂಧಪಟ್ಟ ಅರ್ಹ ಅಭ್ಯರ್ಥಿಗಳು ವೆಬ್‌ಸೈಟ್‌ನಿಂದ ಅರ್ಜಿ ನಮೂನೆಯನ್ನು ನೇರವಾಗಿ ಪಡೆದುಕೊಳ್ಳಬಹುದಾಗಿದೆ ಅಥವಾ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ವೇದಿಕೆಯಲ್ಲಿ ಒಂದು ಅರ್ಜಿಗೆ ರೂ.೧೦-೦೦ ರಂತೆ ಶುಲ್ಕವನ್ನು ಪಾವತಿ ಮಾಡಿ ಅರ್ಜಿ ನಮೂನೆಯನ್ನು ಪಡೆದುಕೊಳ್ಳಬಹುದಾಗಿರುತ್ತದೆ.

ನ್ಯಾಯಮೂರ್ತಿ ಕೆ. ರಾಮಣ್ಣ
ಅಧ್ಯಕ್ಷರು
ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ, ಬೆಂಗಳೂರು

ಪಿ.ಆರ್. 1113

ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ
ಬಸವ ಭವನ, ಹೈ ಗ್ರೌಂಡ್ಸ್, ಬೆಂಗಳೂರು ೫೬೦ ೦೦೧
ಸಂಖ್ಯೆ: ಕರಾಆ:ಆಡಳಿತ:೦೫:೨೦೧೧, ದಿನಾಂಕ: ೨೦-೧೦-೨೦೧೧

ಪ್ರಕಟಣೆ

ವಿಷಯ: ಗ್ರಾಹಕ ಸಂರಕ್ಷಣಾ ಕಾಯ್ದೆ ೧೯೮೬ರ ಕಲಂ ೧೦(೧ಎ) ರಡಿಯಲ್ಲಿ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ವೇದಿಕೆಯ ಅಧ್ಯಕ್ಷರ ಆಯ್ಕೆ ಬಗ್ಗೆ

ಗ್ರಾಹಕ ಸಂರಕ್ಷಣಾ ಕಾಯ್ದೆ ೧೯೮೬ರ ಕಲಂ ೯(ಎ)ರನ್ವಯ ರಚಿತವಾಗಿರುವ ಈ ಕೆಳಕಂಡ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ವೇದಿಕೆಯ ಅಧ್ಯಕ್ಷರ ಸ್ಥಾನಕ್ಕೆ ಸೂಕ್ತರಾದವರನ್ನು ಆಯ್ಕೆ ಮಾಡುವ ಸಲುವಾಗಿ ನಿಗದಿತ ಅರ್ಜಿ ನಮೂನೆಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಕ್ರಮ ಸಂಖ್ಯೆ	ಹುದ್ದೆಯ ಹೆಸರು	ಜಿಲ್ಲಾ ವೇದಿಕೆಯ ಹೆಸರು	ಹುದ್ದೆ ಖಾಲಿಇರುವ/ಖಾಲಿಯಾಗುವ ದಿನಾಂಕ
೦೧	ಅಧ್ಯಕ್ಷರು	ಕೋಲಾರ ಜಿಲ್ಲಾ ವೇದಿಕೆ	೩೦/೦೬/೨೦೧೧ರ ಅಪರಾಹ್ನ
೦೨	ಅಧ್ಯಕ್ಷರು	ಬೀದರ್ ಜಿಲ್ಲಾ ವೇದಿಕೆ	೧೨/೦೯/೨೦೧೧ರ ಅಪರಾಹ್ನ
೦೩	ಅಧ್ಯಕ್ಷರು	ಹಾಸನ ಜಿಲ್ಲಾ ವೇದಿಕೆ	೩೧/೦೧/೨೦೧೨ರ ಅಪರಾಹ್ನ
೦೪	ಅಧ್ಯಕ್ಷರು	ಕೊಡಗು ಜಿಲ್ಲಾ ವೇದಿಕೆ	೦೮/೦೨/೨೦೧೨ರ ಅಪರಾಹ್ನ

ಗ್ರಾಹಕ ಸಂರಕ್ಷಣಾ ಕಾಯ್ದೆ ೧೯೮೬ರ ಕಲಂ ೧೦(೧ಎ)ರನ್ವಯ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ವೇದಿಕೆಯ ಅಧ್ಯಕ್ಷರ ಹುದ್ದೆಗೆ ಅರ್ಹರಾಗಿರುವಂತಹ ಅಭ್ಯರ್ಥಿಯು ನ್ಯಾಯಾಧೀಶರ ವೃಂದದಲ್ಲಿ ಕಾರ್ಯನಿರ್ವಹಿಸುತ್ತಿರುವವರು ಅಥವಾ ಕಾರ್ಯನಿರ್ವಹಿಸಿರುವವರು ಅಥವಾ ಜಿಲ್ಲಾ ನ್ಯಾಯಾಧೀಶರಾಗಿ ಆಯ್ಕೆ ಹೊಂದಲು ಅರ್ಹರಿರುವಂತಹವರಾಗಿರಬೇಕು.

ಮೇಲಿನ ಅರ್ಹತೆಯನ್ನು ಹೊಂದಿರುವಂತಹ ಅಭ್ಯರ್ಥಿಗಳು ಭರ್ತಿ ಮಾಡಿದ ಅರ್ಜಿ ನಮೂನೆಯನ್ನು ಹಾಗೂ ಅಗತ್ಯ ದಾಖಲೆಗಳ ದೃಢೀಕೃತ ಪ್ರತಿಗಳನ್ನು ಸೀಲ್ ಮಾಡಿದ ಲಕೋಟೆಯಲ್ಲಿರಿಸಿ, ಲಕೋಟೆಯ ಮೇಲ್ಭಾಗದಲ್ಲಿ(ಆಯ್ಕೆ ಬಯಸಿರುವ ಜಿಲ್ಲೆಯನ್ನು ನಮೂದಿಸಿ) "____________ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ವೇದಿಕೆಯ ಅಧ್ಯಕ್ಷರ ಹುದ್ದೆಗೆ ಅರ್ಜಿ" ಎಂದು ದಪ್ಪ ಅಕ್ಷರಗಳಲ್ಲಿ ಬರೆದು **ದಿನಾಂಕ ೧೯ ನೇ ನವೆಂಬರ್ ೨೦೧೧ ಶನಿವಾರ ಸಂಜೆ ೫.೦೦ ಘಂಟೆಯೊಳಗಾಗಿ** ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ, ಬಸವ ಭವನ, ಹೈಗ್ರೌಂಡ್ಸ್, ಬೆಂಗಳೂರು - ೫೬೦ ೦೦೧ ಇಲ್ಲಿಗೆ ಸಲ್ಲಿಸುವುದು.

ನಿಗದಿತ ದಿನಾಂಕ ಹಾಗೂ ಸಮಯದ ನಂತರ ಅಂಚೆ ಮೂಲಕ ಅಥವಾ ನೇರವಾಗಿ ಬರುವಂತಹ ಯಾವುದೇ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ. ಅರ್ಜಿ ನಮೂನೆಯು ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ವೆಬ್‌ಸೈಟ್ http://kscdrc.kar.nic.in ನಲ್ಲಿ ಲಭ್ಯವಿದ್ದು, ಸಂಬಂಧಪಟ್ಟ ಅರ್ಹ ಅಭ್ಯರ್ಥಿಗಳು ವೆಬ್‌ಸೈಟ್‌ನಿಂದ ಅರ್ಜಿ ನಮೂನೆಯನ್ನು ನೇರವಾಗಿ ಪಡೆದುಕೊಳ್ಳಬಹುದಾಗಿದೆ ಅಥವಾ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ವೇದಿಕೆಯಲ್ಲಿ ಒಂದು ಅರ್ಜಿಗೆ ರೂ.೧೦-೦೦ ರಂತೆ ಶುಲ್ಕವನ್ನು ಪಾವತಿ ಮಾಡಿ ಅರ್ಜಿ ನಮೂನೆಯನ್ನು ಪಡೆದುಕೊಳ್ಳಬಹುದಾಗಿರುತ್ತದೆ.

ನ್ಯಾಯಮೂರ್ತಿ ಕೆ. ರಾಮಣ್ಣ
ಅಧ್ಯಕ್ಷರು
ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ, ಬೆಂಗಳೂರು

ಪಿ.ಆರ್. 1159

WPP-47/2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೬ | ಬೆಂಗಳೂರು, ಗುರುವಾರ, ನವೆಂಬರ್ ೩, ೨೦೧೧ (ಕಾರ್ತೀಕ ೧೨, ಶಕ ವರ್ಷ ೧೯೩೩) | ಸಂಚಿಕೆ ೪೩

ಭಾಗ – ೪ಎ

ರಾಜ್ಯದ ವಿಧೇಯಕಗಳ ಮತ್ತು ಅವುಗಳ ಮೇಲೆ ಪರಿಶೀಲನಾ ಸಮಿತಿಯ ವರದಿಗಳು, ರಾಜ್ಯದ ಅಧಿನಿಯಮಗಳು ಮತ್ತು ಅಧ್ಯಾದೇಶಗಳು, ಕೇಂದ್ರದ ಮತ್ತು ರಾಜ್ಯದ ಶಾಸನಗಳ ಮೇರೆಗೆ ರಾಜ್ಯ ಸರ್ಕಾರವು ಹೊರಡಿಸಿದ ಸಾಮಾನ್ಯ ಶಾಸನಬದ್ಧ ನಿಯಮಗಳು ಮತ್ತು ರಾಜ್ಯಾಂಗದ ಮೇರೆಗೆ ರಾಜ್ಯಪಾಲರು ಮಾಡಿದ ನಿಯಮಗಳು, ಹಾಗೂ ಕರ್ನಾಟಕ ಉಚ್ಚ ನ್ಯಾಯಾಲಯವು ಮಾಡಿದ ನಿಯಮಗಳು.

ಆರ್ಥಿಕ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಆಇ 12 ಸಾಂಹಅ 2011, ಬೆಂಗಳೂರು, ದಿನಾಂಕ: 12–07–2011

ಸರ್ಕಾರಿ ಅಧಿಸೂಚನೆ ಸಂಖ್ಯೆ ಎಫ್‌ಡಿ 8 ಸಾಂಹಅ 2010 ದಿನಾಂಕ:27.03.2010ರಲ್ಲಿ ಕಾರ್ಪೋರೇಷನ್ ಬ್ಯಾಂಕ್ ಪ್ರಾಯೋಜಕತ್ವದ ಚಿಕ್ಕಮಗಳೂರು–ಕೊಡಗು ಗ್ರಾಮೀಣ ಬ್ಯಾಂಕ್ ಹಾಗೂ ಎಸ್‌ಬಿಐ ಪ್ರಾಯೋಜಕತ್ವದ ಕೃಷ್ಣ ಗ್ರಾಮೀಣ ಬ್ಯಾಂಕು ಹಾಗೂ ವಿಜಯಾಬ್ಯಾಂಕ್ ಪ್ರಾಯೋಜಕತ್ವದ ವಿಶ್ವೇಶ್ವರಯ್ಯ ಗ್ರಾಮೀಣ ಬ್ಯಾಂಕುಗಳ ನಿರ್ದೇಶಕ ಮಂಡಳಿಗಳಿಗೆ ಅದರಲ್ಲಿ ಸೂಚಿಸಿದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಹಾಗೂ ಉಪ ಕಾರ್ಯದರ್ಶಿ (ಅಭಿವೃದ್ಧಿ) ಜಿಲ್ಲಾ ಪಂಚಾಯತ್, ಮಂಡ್ಯ ಜಿಲ್ಲೆ, ಇವರನ್ನು ದಿನಾಂಕ:17.05.2009 ರಿಂದ 2 ವರ್ಷಗಳ ಅವಧಿಗೆ ರಾಜ್ಯದ ನಾಮನಿರ್ದೇಶಕರುಗಳನ್ನಾಗಿ ನೇಮಿಸಿ ಆದೇಶ ಹೊರಡಿಸಲಾಗಿತ್ತು. ಸದರಿ ಅವಧಿಯು ದಿ:16.05.2011ಕ್ಕೆ ಅಂತ್ಯಗೊಂಡಿರುತ್ತದೆ.

ಪ್ರಾದೇಶಿಕ ಗ್ರಾಮೀಣ ಬ್ಯಾಂಕ್ ಅಧಿನಿಯಮ 1976ರ ಸೆಕ್ಷನ್ 9(1)(ಇ) ಮತ್ತು ಸೆಕ್ಷನ್ 10ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಆಯಾಯ ಪ್ರಾದೇಶಿಕ ಗ್ರಾಮೀಣಬ್ಯಾಂಕ್ ಹೆಸರಿನ ಮುಂದೆ ಸೂಚಿಸಿರುವ ಅಧಿಕಾರಿಗಳನ್ನು ಆ ಗ್ರಾಮೀಣ ಬ್ಯಾಂಕಿನ ಮಂಡಳಿಯ ನಾಮನಿರ್ದೇಶಕರುಗಳನ್ನಾಗಿ ದಿನಾಂಕ:17.05.2011 ರಿಂದ 2 ವರ್ಷಗಳ ಅವಧಿಗೆ ಮುಂದುವರಿಸಲಾಗಿದೆ.

ಕ್ರ ಸಂ.	ಪ್ರಾದೇಶಿಕ ಗ್ರಾಮೀಣ ಬ್ಯಾಂಕಿನ ಹೆಸರು	ಬ್ಯಾಂಕಿನ ನಿರ್ದೇಶಕರ ಮಂಡಳಿಗೆ ನಾಮನಿರ್ದೇಶನಗೊಂಡ ಅಧಿಕಾರಿಗಳು
1.	ಚಿಕ್ಕಮಗಳೂರು–ಕೊಡಗು ಗ್ರಾಮೀಣ ಬ್ಯಾಂಕ್, ಚಿಕ್ಕಮಗಳೂರು	1) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾಪಂಚಾಯತ್, ಚಿಕ್ಕಮಗಳೂರು ಜಿಲ್ಲೆ. 2) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾಪಂಚಾಯತ್, ಕೊಡಗು ಜಿಲ್ಲೆ
2.	ಕೃಷ್ಣ ಗ್ರಾಮೀಣ ಬ್ಯಾಂಕ್, ಗುಲ್ಬರ್ಗಾ	1) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾಪಂಚಾಯತ್, ಗುಲ್ಬರ್ಗಾ ಜಿಲ್ಲೆ 2) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾಪಂಚಾಯತ್, ಬೀದರ್ ಜಿಲ್ಲೆ
3.	ವಿಶ್ವೇಶ್ವರಯ್ಯ ಗ್ರಾಮೀಣ ಬ್ಯಾಂಕ್ ಮಂಡ್ಯ	1) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾಪಂಚಾಯತ್, ಮಂಡ್ಯ ಜಿಲ್ಲೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಭವಾನಿ ದೇವಿ

ಸರ್ಕಾರದ ಅಧೀನ ಕಾರ್ಯದರ್ಶಿ,

ಆರ್ಥಿಕ ಇಲಾಖೆ (ಸಾಂಸ್ಥಿಕ ಹಣಕಾಸು)

ಪಿ.ಆರ್. 759

ಕಾರ್ಮಿಕ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಕಾಇ 68 ಎಲ್‌ಡಬ್ಲ್ಯೂಎ 2011, ಬೆಂಗಳೂರು, ದಿನಾಂಕ:15-07-2011

ಕೈಗಾರಿಕಾ ವಿವಾದಗಳ ಅಧಿನಿಯಮ 1947 (ಕೇಂದ್ರಾಧಿನಿಯಮ 1947ರ ಸಂಖ್ಯೆ: 14) ಕಲಂ 2 ಖಂಡ (ಎನ್) ಉಪಖಂಡ (6)ರ ಮೇರೆಗೆ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯನ್ನು ಅಧಿಸೂಚನೆ ಸಂಖ್ಯೆ: ಕಾಇ 135 ಎಲ್‌ಡಬ್ಲ್ಯೂಎ 2010, ದಿ:03.01.2011ರಲ್ಲಿ ಸಾರ್ವಜನಿಕ ಉಪಯುಕ್ತ ಸೇವೆ ಎಂಬುದಾಗಿ 6 ತಿಂಗಳ ಅವಧಿಯವರೆಗೆ ಜಾರಿಯಲ್ಲಿರುವಂತೆ ಘೋಷಿಸಲಾಗಿತ್ತು.

ಸಾರ್ವಜನಿಕ ಹಿತದೃಷ್ಟಿಯಿಂದ ಸದರಿ ಅವಧಿಯನ್ನು ಮುಂದಿನ 6 ತಿಂಗಳ ಅವಧಿಗೆ ವಿಸ್ತರಿಸಲು ಸರ್ಕಾರವು ಪರಿಗಣಿಸಿದೆ. ಆದುದರಿಂದ, ಕೈಗಾರಿಕಾ ವಿವಾದಗಳ ಅಧಿನಿಯಮ 1947 (ಕೇಂದ್ರಾಧಿನಿಯಮ 1947ರ ಸಂಖ್ಯೆ:14) ಕಲಂ 2 ಖಂಡ (ಎನ್) ಉಪಖಂಡ (6)ರ ಮೇರೆಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯನ್ನು ಸಾರ್ವಜನಿಕ ಉಪಯುಕ್ತ ಸೇವೆ ಎಂಬುದಾಗಿ ದಿನಾಂಕ:03.07.2011 ರಿಂದ ಜಾರಿಗೆ ಬರುವಂತೆ ಮುಂದಿನ 6 ತಿಂಗಳ ಅವಧಿಯವರೆಗೆ ವಿಸ್ತರಿಸಿ ಘೋಷಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎನ್.ಆರ್. ಪ್ರಭು

ಪಿ.ಆರ್. 760

ಸರ್ಕಾರದ ಅಧೀನ ಕಾರ್ಯದರ್ಶಿ, ಕಾರ್ಮಿಕ ಇಲಾಖೆ.

AGRICULTURE SECRETARIAT

NOTIFICATION - IV

NO. AD/30/AMS/2011, Bangalore, Dated: 16.07.2011

In exercise of the powers conferred by clause-(e) of sub section (1) of the section 12AA of Essential Commodities Act, 1955, (Central Act 10 of 1955), the Government of Karnataka hereby authorise the Officers specified in Column-(2) of the Table below for the purposes of the said Clause in respect of the areas specified in the corresponding entries in column (3) thereof.

TABLE

Sl. No.	Designation of Officers	Areas
1	2	3
1.	The Joint Director of Agriculture-Yadgir District	within their respective jurisdiction
2	All the Assistant Directors of Agriculture (Subject Matter Specialists) working in the Office of the Joint Director of Agriculture Yadgir District	within their respective jurisdiction
3.	Agricultural Officer (Information) and Agricultural Officer (Inputs) working in the office of the Joint Director of Agriculture, Yadgir District.	within their respective jurisdiction

By Order and in the Name of the Governor of Karnataka

PARANDHAMAIAH

PR-761

Under Secretary to Government,

Agriculture Department.

AGRICULTURE SECRETARIAT

NOTIFICATION - II

NO. AD/30/AMS/2011, Bangalore, Dated: 16.07.2011

In exercise of the powers conferred by clause-12 of the Seeds (Control) Order, 1983, the Government of Karnataka here by appoint the Officers specified in Column-(2) of the Table below to be the Seed Inspectors for the purpose of the said Order in respect of the area specified in the corresponding entries in column (3) thereof for enforcement of Seeds (Control) Order 1983.

TABLE

Sl. No.	Designation of Officers	Areas
1	2	3
1.	The Joint Director of Agriculture-Yadgir District	within their respective jurisdiction

Sl. No.	Designation of Officers	Areas
1	2	3
2.	All the Assistant Directors of Agriculture (Subject Matter Specialists) working in the Office of the Joint Director of Agriculture Yadgir District	within their respective jurisdiction
3.	Agricultural Officer (Information) and Agricultural Officer (Inputs) working in the office of the Joint Director of Agriculture, Yadgir District.	within their respective jurisdiction

By Order and in the Name of the Governor of Karnataka

PARANDHAMAIAH

PR-762

Under Secretary to Government,

Agriculture Department.

AGRICULTURE SECRETARIAT

NOTIFICATION - III

NO. AD/30/AMS/2011, Bangalore, Dated: 16.07.2011

In exercise of the powers conferred by sub section (1) of section 13 of Seeds Act, 1966 (Central Act of 54 of 1966) read with rule 22 of the Seeds Rules 1968, the Government of Karnataka here by appoint the Officers specified in Column-(2) of the Table below to be the Seed Inspectors for the purpose of the said Act for the areas specified in the corresponding entries in column (3) thereof:

TABLE

Sl. No.	Designation of Officers	Areas
1	2	3
1.	The Joint Director of Agriculture-Yadgir District	within their respective jurisdiction
2.	All the Assistant Directors of Agriculture (Subject Matter Specialists) working in the Office of the Joint Director of Agriculture Yadgir District	within their respective jurisdiction
3.	Agricultural Officer (Information) and Agricultural Officer (Inputs) working in the office of the Joint Director of Agriculture, Yadgir District.	within their respective jurisdiction

By Order and in the Name of the Governor of Karnataka

PARANDHAMAIAH

PR-763

Under Secretary to Government,

Agriculture Department.

AGRICULTURE SECRETARIAT

NOTIFICATION - I

NO. AD/30/AMS/2011, Bangalore, Dated: 16.07.2011

In exercise of the powers conferred by Clause_11 of the Seeds (Control) Order, 1983, the Government of Karnataka hereby appoints the Officer specified in Column-(2) of the Table below to be the Licencing Authority for the purpose of the said Order in respect of the area specified in the corresponding entries in column (3) thereof:

TABLE

Sl. No.	Designation of Officers	Areas
1	2	3
1.	The Joint Director of Agriculture-Yadgir District	within their respective jurisdiction

By Order and in the Name of the Governor of Karnataka

PARANDHAMAIAH

PR-764

Under Secretary to Government,

Agriculture Department.

ಸಹಕಾರ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಇ 229 ಎಂಆರ್‌ಇ 2011, ಬೆಂಗಳೂರು, ದಿನಾಂಕ:14.07.2011

ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ ಮತ್ತು ಅಭಿವೃದ್ಧಿ ಅಧಿನಿಯಮ, 1966, ಕಲಂ 11(1)(ix)ರಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಸವದತ್ತಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ ಈ ಕೆಳಕಂಡ ಮೂವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಸದಸ್ಯರನ್ನಾಗಿ ನಾಮ ನಿರ್ದೇಶನ ಮಾಡಿದೆ:

ಕ್ರ ಸಂ.	ಸದಸ್ಯರ ಹೆಸರು ಶ್ರೀ/ ಶ್ರೀಮತಿ
1.	ಮುಂಡಲೀಕ ಹೊನ್ನಪ್ಪ ಮೇಟಿ, ಸಾ: ಮಬನೂರ್, ತಾಲ್ಲೂಕು ಸವದತ್ತಿ.
2.	ಜಿ.ಬಿ. ವಂಟಗೋಡಿ, ಸಾ: ಹಂಚಿನಾಳ, ತಾಲ್ಲೂಕು ಸವದತ್ತಿ.
3.	ಅಜಿತ್ ದೇಸಾಯಿ, ಸಾ: ಯರಗಟ್ಟಿ, ತಾಲ್ಲೂಕು ಸವದತ್ತಿ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಸಿ.ಕೆ. ವಾಸುದೇವ ಮೂರ್ತಿ

ಸರ್ಕಾರದ ಅಧೀನ ಕಾರ್ಯದರ್ಶಿ,

ಸಹಕಾರ ಇಲಾಖೆ.

ಪಿ.ಆರ್. 765

ಸಹಕಾರ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಒ 30 ಸಿಎಸ್‌ಎಸ್ 2011, ಬೆಂಗಳೂರು, ದಿನಾಂಕ:11.07.2011

ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಒ 30 ಸಿಎಸ್‌ಎಸ್ 2011, ದಿನಾಂಕ:19.05.2011ರಲ್ಲಿ ಕೋಲಾರ ತಾಲ್ಲೂಕಿನ ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ನಿ., ಕೋಲಾರ ಜಿಲ್ಲೆ ಇದರ ಆಡಳಿತ ಮಂಡಳಿಗೆ ಮಾಡಿದ್ದ ಶ್ರೀ ಪಿ. ಲಕ್ಷ್ಮೀನಾರಾಯಣಗೌಡ ಬಿನ್ ಚಿಕ್ಕಬುಳ್ಳಪ್ಪ, ಕಾಮದೇವನಹಳ್ಳಿ ಗ್ರಾಮ ಮತ್ತು ಅಂಚೆ, ಕೋಲಾರ ತಾಲ್ಲೂಕು ಹಾಗೂ ಜಿಲ್ಲೆ ಇವರ ನಾಮನಿರ್ದೇಶನವನ್ನು ಈ ಕೂಡಲೇ ಜಾರಿಗೆ ಬರುವಂತೆ ರದ್ದುಪಡಿಸಿದೆ.

ಮುಂದುವರೆದು, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 (1959ರ ಕರ್ನಾಟಕ ಅಧಿನಿಯಮ ಸಂಖ್ಯೆ: 11)ರ ಪ್ರಕರಣ 29ರ ಉಪ ಪ್ರಕರಣ (1)ರ ಮೇರೆಗೆ ದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಶ್ರೀ ಎನ್. ರಾಮಸ್ವಾಮಿ ಬಿನ್ ನಾಗರಾಜು, ವಕಲೇರಿ ಹೋಬಳಿ, ಕೋಲಾರ ತಾಲ್ಲೂಕು ಇವರನ್ನು ಕೋಲಾರದ ಪ್ರಾಥಮಿಕ ಸಹಕಾರ ಕೃಷಿ ಹಾಗೂ ಗ್ರಾಮೀಣಾಭಿವೃದ್ಧಿ ಬ್ಯಾಂಕ್ ನಿ., ಕೋಲಾರ ಜಿಲ್ಲೆ ಇದರ ಆಡಳಿತ ಮಂಡಳಿಗೆ ಸದಸ್ಯರನ್ನಾಗಿ ಈ ಕೂಡಲೇ ಜಾರಿಗೆ ಬರುವಂತೆ ಮತ್ತು ಮುಂದಿನ ಆದೇಶದವರೆಗೆ ನಾಮನಿರ್ದೇಶನ ಮಾಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಆರ್.ಎಸ್. ನೂಲಿ

ವಿಶೇಷ ಕರ್ತವ್ಯಾಧಿಕಾರಿ ಹಾಗೂ

ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,

ಸಹಕಾರ ಇಲಾಖೆ.

ಪಿ.ಆರ್. 766

ಸಹಕಾರ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಒ 77 ಸಿಎಸ್‌ಎಸ್ 2008, ಬೆಂಗಳೂರು, ದಿನಾಂಕ:14.07.2011

ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಒ 77 ಸಿಎಸ್‌ಎಸ್ 2008, ದಿನಾಂಕ:27.03.2010ರಲ್ಲಿ ಬೀದರ್ ಸಹಕಾರ ಸಕ್ಕರೆ ಕಾರ್ಖಾನೆ, ನಿ., ಹಳ್ಳಿಖೇಡ ಹುಮ್ನಾಬಾದ್ ತಾಲ್ಲೂಕು, ಬೀದರ್ ಜಿಲ್ಲೆ, ಇದರ ಆಡಳಿತ ಮಂಡಳಿಗೆ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 (1959ರ ಕರ್ನಾಟಕ ಅಧಿನಿಯಮ ಸಂಖ್ಯೆ: 11)ರ ಪ್ರಕರಣ 29ರ ಉಪ ಪ್ರಕರಣ (1)ರ ಅಡಿಯಲ್ಲಿ ಮಾಡಿದ್ದ ಶ್ರೀಮತಿ ಮಾಯಾದೇವಿ ಬಸವತೀರ್ಥಪ್ಪ, ಹುಡಗಿ ಅಂಚೆ, ಹುಮ್ನಾಬಾದ್ ತಾಲ್ಲೂಕು ಇವರ ನಾಮನಿರ್ದೇಶನವನ್ನು ಈ ಕೂಡಲೇ ಜಾರಿಗೆ ಬರುವಂತೆ ರದ್ದುಪಡಿಸಿದೆ.

ಮುಂದುವರೆದು, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 (1959ರ ಕರ್ನಾಟಕ ಅಧಿನಿಯಮ ಸಂಖ್ಯೆ: 11)ರ ಪ್ರಕರಣ 29ರ ಉಪ ಪ್ರಕರಣ (1)ರ ಮೇರೆಗೆ ದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಶ್ರೀಮತಿ ಪದ್ಮಾವತಿ ಹಣಮಂತರಾವ, ಸಾ:ಬನ್ನಳ್ಳಿ, ಹುಮ್ನಾಬಾದ್ ತಾಲ್ಲೂಕು ಇವರನ್ನು ಬೀದರ್ ಸಹಕಾರ ಸಕ್ಕರೆ ಕಾರ್ಖಾನೆ, ನಿ., ಹಳ್ಳಿಖೇಡ, ಹುಮ್ನಾಬಾದ್ ತಾಲ್ಲೂಕು, ಬೀದರ್ ಜಿಲ್ಲೆ, ಇದರ ಆಡಳಿತ ಮಂಡಳಿಗೆ ಸದಸ್ಯರನ್ನಾಗಿ ಈ ಕೂಡಲೇ ಜಾರಿಗೆ ಬರುವಂತೆ ಮತ್ತು ಮುಂದಿನ ಆದೇಶದವರೆವಿಗೂ ನಾಮನಿರ್ದೇಶನ ಮಾಡುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಆರ್.ಎಸ್. ನೂಲಿ

ವಿಶೇಷ ಕರ್ತವ್ಯಾಧಿಕಾರಿ ಹಾಗೂ

ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,

ಸಹಕಾರ ಇಲಾಖೆ.

ಪಿ.ಆರ್. 767

ಸಹಕಾರ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಒ 44 ಸಿಎಸ್‌ಎಸ್ 2011, ಬೆಂಗಳೂರು, ದಿನಾಂಕ:12.07.2011

ಈ ಹಿಂದೆ ಸರ್ಕಾರದಿಂದ ಮಾಡಿರುವ ಎಲ್ಲಾ ನಾಮನಿರ್ದೇಶನಗಳನ್ನು ರದ್ದುಪಡಿಸಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 (1959ರ ಕರ್ನಾಟಕ ಅಧಿನಿಯಮ ಸಂಖ್ಯೆ 11)ರ ಪ್ರಕರಣ 29ರ ಉಪ ಪ್ರಕರಣ (1)ರ ಮೇರೆಗೆ ದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಕೆಳಕಂಡ ವ್ಯಕ್ತಿಗಳನ್ನು ಹೊಸಕೋಟೆ ತಾಲ್ಲೂಕಿನ ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ ನಿ., ಹೊಸಕೋಟೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇದರ ಆಡಳಿತ ಮಂಡಳಿಗೆ ಸದಸ್ಯರನ್ನಾಗಿ ಈ ಕೂಡಲೇ ಜಾರಿಗೆ ಬರುವಂತೆ ಮತ್ತು ಮುಂದಿನ ಆದೇಶದವರೆಗೆ ನಾಮನಿರ್ದೇಶನ ಮಾಡುತ್ತದೆ.

1) ಶ್ರೀ ಕೃಷ್ಣಪ್ಪ ಬಿನ್ ಕೆಂಚಪ್ಪ, ಆಲಪ್ಪನಹಳ್ಳಿ, ಲಕ್ಕೊಂಡಹಳ್ಳಿ ಅಂಚೆ, ಕಸಬಾ ಹೋಬಳಿ, ಹೊಸಕೋಟೆ ತಾಲ್ಲೂಕು.

2) ಶ್ರೀಮತಿ ನಸ್ರೀನ್ ತಾಜ್ ಕೋಂ ಫಯಾಜ್, ದೊಡ್ಡೇನಹಳ್ಳಿ, ಕೆ.ಸತ್ಯವಾರ ಅಂಚೆ, ನಂದಗುಡಿ ಹೋಬಳಿ, ಹೊಸಕೋಟೆ ತಾಲ್ಲೂಕು.

3) ಶ್ರೀ ಮುನಿಸ್ವಾಮಿ, ಮುತ್ತೂರು ಗ್ರಾಮ ಮತ್ತು ಅಂಚೆ, ಅನುಗೊಂಡನಹಳ್ಳಿ ಹೋಬಳಿ, ಹೊಸಕೋಟೆ ತಾಲ್ಲೂಕು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಆರ್.ಎಸ್. ನೂಲಿ

ಪಿ.ಆರ್. 768

ವಿಶೇಷ ಕರ್ತವ್ಯಾಧಿಕಾರಿ ಹಾಗೂ

ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,

ಸಹಕಾರ ಇಲಾಖೆ.

ಸಹಕಾರ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಒ 47 ಸಿಎಸ್‌ಎಸ್ 2009, ಬೆಂಗಳೂರು, ದಿನಾಂಕ:08.07.2011

ಈ ಹಿಂದೆ ಸರ್ಕಾರದಿಂದ ಮಾಡಿರುವ ಎಲ್ಲಾ ನಾಮನಿರ್ದೇಶನಗಳನ್ನು ರದ್ದುಪಡಿಸಿ, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 (1959ರ ಕರ್ನಾಟಕ ಅಧಿನಿಯಮ ಸಂಖ್ಯೆ 11)ರ ಪ್ರಕರಣ 29ರ ಉಪ ಪ್ರಕರಣ (1)ರ ಮೇರೆಗೆ ದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಶ್ರೀ ಶಿವಲಿಂಗ ಉರುಫ್ ಲಾರಿಚನ್ನಪ್ಪ ಬಿನ್ ಬೋರೇಗೌಡ, ಟಿ.ಬಿ. ಬಡಾವಣೆ, ನಾಗಮಂಗಲ ಟೌನ್, ಕಸಬಾ ಹೋಬಳಿ, ಮಂಡ್ಯ ಜಿಲ್ಲೆ ಇವರನ್ನು ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕಿನ ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ನಿ, ನಾಗಮಂಗಲ ಇದರ ಆಡಳಿತ ಮಂಡಳಿಗೆ ಸದಸ್ಯರನ್ನಾಗಿ ಈ ಕೂಡಲೇ ಜಾರಿಗೆ ಬರುವಂತೆ ಮತ್ತು ಮುಂದಿನ ಆದೇಶದವರೆವಿಗೂ ನಾಮನಿರ್ದೇಶನ ಮಾಡುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಆರ್.ಎಸ್. ನೂಲಿ

ಪಿ.ಆರ್. 769

ವಿಶೇಷ ಕರ್ತವ್ಯಾಧಿಕಾರಿ ಹಾಗೂ

ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,

ಸಹಕಾರ ಇಲಾಖೆ.

ಸಹಕಾರ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಒ 128 ಸಿಎಸ್‌ಎಸ್ 2010, ಬೆಂಗಳೂರು, ದಿನಾಂಕ:29.06.2011

ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಒ 128 ಸಿಎಸ್‌ಎಸ್ 2010, ದಿನಾಂಕ:20.11.2010ರಲ್ಲಿ ಹುಮನಾಬಾದ್ ತಾಲ್ಲೂಕಿನ ಕೃಷಿ ಉತ್ಪನ್ನ ಮಾರಾಟ ಸಹಕಾರ ಸಂಘ ನಿ., ಹುಮ್ನಾಬಾದ್ ಬೀದರ್ ಜಿಲ್ಲೆ, ಇದರ ಆಡಳಿತ ಮಂಡಳಿಗೆ ಮಾಡಿದ್ದ ಶ್ರೀ ಮಾನಿಕರಾವ ರಾಮಣ್ಣ ವಾಡೇಕರ್ ಮು: ಗಡವಂತಿ, ಹುಮ್ನಾಬಾದ್ ತಾಲ್ಲೂಕು, ಬೀದರ್ ಜಿಲ್ಲೆ, ಇವರ ನಾಮನಿರ್ದೇಶನವನ್ನು ಈ ಕೂಡಲೇ ಜಾರಿಗೆ ಬರುವಂತೆ ರದ್ದುಪಡಿಸಿದೆ.

ಮುಂದುವರೆದು, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 (1959ರ ಕರ್ನಾಟಕ ಅಧಿನಿಯಮ ಸಂಖ್ಯೆ: 11)ರ ಪ್ರಕರಣ 29ರ ಉಪ ಪ್ರಕರಣ (1)ರ ಮೇರೆಗೆ ದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಶ್ರೀ ವೆಂಕಟ ಜಮಾದಾರ ಸಾ: ಸುಲ್ತಾನಾಬಾದ ವಾಡಿ, ಹುಮ್ನಾಬಾದ್ ತಾಲ್ಲೂಕು ಇವರನ್ನು ಹುಮ್ನಾಬಾದ್ ತಾಲ್ಲೂಕಿನ ಕೃಷಿ ಉತ್ಪನ್ನ ಮಾರಾಟ ಸಹಕಾರ ಸಂಘ ನಿ., ಹುಮ್ನಾಬಾದ್, ಬೀದರ್ ಜಿಲ್ಲೆ, ಇದರ ಆಡಳಿತ ಮಂಡಳಿಗೆ ಸದಸ್ಯರನ್ನಾಗಿ ಈ ಕೂಡಲೇ ಜಾರಿಗೆ ಬರುವಂತೆ ಮತ್ತು ಮುಂದಿನ ಆದೇಶದವರೆವಿಗೂ ನಾಮನಿರ್ದೇಶನ ಮಾಡುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಆರ್.ಎಸ್. ನೂಲಿ

ವಿಶೇಷ ಕರ್ತವ್ಯಾಧಿಕಾರಿ ಹಾಗೂ

ಪಿ.ಆರ್. 770

ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ, ಸಹಕಾರ ಇಲಾಖೆ.

ಆರ್ಥಿಕ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಆಇ 571 ವೆಚ್ಚ–12/11, ಬೆಂಗಳೂರು, ದಿನಾಂಕ:21.07.2011

ಜಗಳೂರು ತಾಲ್ಲೂಕಿನ ರೂ.925.00 ಲಕ್ಷ ಅಂದಾಜು ಮೊತ್ತದ 20 ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ಮತ್ತು ರೂ.28.00 ಲಕ್ಷ ಅಂದಾಜು ಮೊತ್ತದ 3 ಕುಡಿಯುವ ನೀರಿನ ಕಾಮಗಾರಿಗಳನ್ನು ನೇರವಾಗಿ ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್ (ಕೆ.ಆರ್.ಐ.ಡಿ.ಎಲ್.), ದಾವಣಗೆರೆ ಸಂಸ್ಥೆಗೆ ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ–1999ರ ಕಲಂ 4(ಜಿ) ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿದೆ.

ಕೆ.ಆರ್.ಐ.ಡಿ.ಎಲ್. ಸಂಸ್ಥೆಯು ಕಾಮಗಾರಿಗಳನ್ನು ಬೇರೆಯವರ ಮುಖಾಂತರ ಕೈಗೊಳ್ಳುವುದಾದಲ್ಲಿ ಕೆ.ಟಿ.ಪಿ.ಪಿ. ಅಧಿನಿಯಮ ಮತ್ತು ನಿಯಮಗಳನ್ನು ಪಾಲಿಸಬೇಕು. ಉತ್ತಮ ಗುಣಮಟ್ಟದ ಕಾಮಗಾರಿಗಳನ್ನು ಸಮಂಜಸ ದರದಲ್ಲಿ ಸಂಗ್ರಹಿಸುವುದನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯು ಧೃಡಪಡಿಸಿಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಜಿ.ಡಿ. ಮಧುಚಂದ್ರ ತೇಜಸ್ವಿ

ಪಿ.ಆರ್. 772 ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ)

ಆರ್ಥಿಕ ಇಲಾಖೆ (ಸಂಗ್ರಹಣಾ ಕೋಶ)

ನಗರಾಭಿವೃದ್ಧಿ ಸಚಿವಾಲಯ

ತಿದ್ದುಪಡಿ ಅಧಿಸೂಚನೆ

ಸಂಖ್ಯೆ: ನಅಇ 65 ಬೆಂರೂಪ್ರಾ 2011, ಬೆಂಗಳೂರು, ದಿನಾಂಕ:16.07.2011

ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 65 ಬೆಂರೂಪ್ರಾ 2011 ದಿನಾಂಕ:01.06.2011ರಲ್ಲಿ ದಾವಣಗೆರೆ ಜಿಲ್ಲೆ, ಚನ್ನಗಿರಿ ಪಟ್ಟಣಕ್ಕೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ನ್ನು ವಿಸ್ತರಿಸಿ ಸ್ಥಳೀಯ ಯೋಜನಾ ಪ್ರದೇಶ ಘೋಷಿಸಿ ಆದೇಶ ಹೊರಡಿಸಲಾಗಿರುತ್ತದೆ. ಸದರಿ ಆದೇಶದಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಪ್ರಕರಣ 4(ಎ) ರಡಿಯಲ್ಲಿ ಚನ್ನಗಿರಿ ಪಟ್ಟಣ ಪಂಚಾಯಿತಿ ಎಲ್ಲೆಯ ಕ್ಷೇತ್ರವನ್ನು ಚನ್ನಗಿರಿ ಸ್ಥಳೀಯ ಯೋಜನಾ ಪ್ರದೇಶವೆಂದು ಹಾಗೂ ಸದರಿ ಕಾಯ್ದೆಯ ಕಲಂ 2(7)(ಬಿ) ರನ್ವಯ ಪಟ್ಟಣ ಪಂಚಾಯ್ತಿಯು ಸ್ಥಳೀಯ ಯೋಜನಾ ಪ್ರದೇಶದ ಯೋಜನಾ ಪ್ರಾಧಿಕಾರವಾಗಿ ಕೆಲಸ ಕಾರ್ಯಗಳನ್ನು ನಿರ್ವಹಿಸತಕ್ಕದೆಂದು ಓದಿಕೊಳ್ಳತಕ್ಕದ್ದು.

ಉಳಿದಂತೆ ಅನುಬಂಧ–I ಮತ್ತು II ರಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ.ಎಂ. ಹಿರೇಮಠ

ಪಿ.ಆರ್. 774 ಸರ್ಕಾರದ ಅಧೀನ ಕಾರ್ಯದರ್ಶಿ,

ನಗರಾಭಿವೃದ್ಧಿ ಇಲಾಖೆ.

ನಗರಾಭಿವೃದ್ಧಿ ಸಚಿವಾಲಯ

ತಿದ್ದುಪಡಿ ಅಧಿಸೂಚನೆ

ಸಂಖ್ಯೆ: ನಅಇ 59 ಬೆಂರೂಪ್ರಾ 2011, ಬೆಂಗಳೂರು, ದಿನಾಂಕ:16.07.2011

ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 59 ಬೆಂರೂಪ್ರಾ 2011 ದಿನಾಂಕ:07.05.2011ರಲ್ಲಿ ದಾವಣಗೆರೆ ಜಿಲ್ಲೆ, ಹೊನ್ನಾಳಿ ಪಟ್ಟಣಕ್ಕೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ನ್ನು ವಿಸ್ತರಿಸಿ ಸ್ಥಳೀಯ ಯೋಜನಾ ಪ್ರದೇಶ ಘೋಷಿಸಿ ಆದೇಶ ಹೊರಡಿಸಲಾಗಿರುತ್ತದೆ. ಸದರಿ ಆದೇಶದಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಪ್ರಕರಣ 4(ಎ) ರಡಿಯಲ್ಲಿ ಹೊನ್ನಾಳಿ ಪಟ್ಟಣ ಪಂಚಾಯಿತಿ ಎಲ್ಲೆಯ ಕ್ಷೇತ್ರವನ್ನು ಹೊನ್ನಾಳಿ ಸ್ಥಳೀಯ ಯೋಜನಾ ಪ್ರದೇಶವೆಂದು ಹಾಗೂ ಸದರಿ ಕಾಯ್ದೆಯ ಕಲಂ 2(7)(ಬಿ) ರನ್ವಯ ಪಟ್ಟಣ ಪಂಚಾಯ್ತಿಯು ಸ್ಥಳೀಯ ಯೋಜನಾ ಪ್ರದೇಶದ ಯೋಜನಾ ಪ್ರಾಧಿಕಾರವಾಗಿ ಕೆಲಸ ಕಾರ್ಯಗಳನ್ನು ನಿರ್ವಹಿಸತಕ್ಕದೆಂದು ಓದಿಕೊಳ್ಳತಕ್ಕದ್ದು.

ಉಳಿದಂತೆ ಅನುಬಂಧ–I ಮತ್ತು II ರಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ.ಎಂ. ಹಿರೇಮಠ

ಪಿ.ಆರ್. 775 ಸರ್ಕಾರದ ಅಧೀನ ಕಾರ್ಯದರ್ಶಿ,

ನಗರಾಭಿವೃದ್ಧಿ ಇಲಾಖೆ.

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವಾಲಯ

ತಿದ್ದೋಲೆ

ಸಂಖ್ಯೆ: ಕಸಂವಾಪ್ರ 14 ಕರಾಗೆ 2008, ಬೆಂಗಳೂರು, ದಿನಾಂಕ:17.06.2011

ದಿನಾಂಕ:01.06.2011ರ ಅಧಿಸೂಚನೆ ಸಂಖ್ಯೆ: ಕಸಂವಾಪ್ರ 14 ಕರಾಗೆ 2008 (ಭಾಗ–I)ರ ಅನುಬಂಧ–I, ಕ್ರ.ಸಂ.8ರ ಕಾಲಂ 6ರಲ್ಲಿ **"ಕರ್ನಾಟಕ ನಾಗರೀಕ ಸೇವಾ ನೇರ ನೇಮಕಾತಿ ನಿಯಮ 1983 ರಡಿಯಲ್ಲಿ ನೇರ ನೇಮಕಾತಿ"** ಎಂಬುದಕ್ಕೆ ಬದಲಾಗಿ **"ಕರ್ನಾಟಕ ನಾಗರೀಕ ಸೇವೆಗಳು (ಶೀಘ್ರಲಿಪಿಗಾರರ ಮತ್ತು ಬೆರಳಚ್ಚುಗಾರರ ನೇಮಕಾತಿ) ನಿಯಮಾವಳಿಗಳು 1983"** ರಡಿಯಲ್ಲಿ ಎಂದು ತಿದ್ದಿ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎನ್. ಗೀತಾಕುಮಾರಿ

ಸರ್ಕಾರದ ಅಧೀನ ಕಾರ್ಯದರ್ಶಿ,

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ

(ಆಡಳಿತ ಕನ್ನಡ)

ಪಿ.ಆರ್. 777

WATER RESOURCES SECRETARIAT

NOTIFICATION

NO. WRD 4 KNN 2010, Bangalore, Dated: 25.07.2011

In exercise of the powers conferred vide Article 151 of the Articles of Association of the Karnataka Neeravari Nigam Limited, Sri N. Lakshman Rao Peshwe has been nominated as the Managing Director with effect from 05.07.2011 in place of Sri D. Satya Murthy and consequent to this and in exercise of powers conferred vide Article 147(c) Sri D. Satya Murthy, Principal Secretary to the Government, Water Resources Department Continues to be the Director on the Board of Directors of Karnataka Neeravari Nigam Limited, Bangalore, with effect from 05.07.2011 and until further orders.

By Order and in the Name of the Governor of Karnataka

I.D. DHAMAN

Special Officer (I/c.),

Water Resources Department (Tech-4)

PR-778

ಆರ್ಥಿಕ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಆಇ 679 ವೆಚ್ಚ–12/11, ಬೆಂಗಳೂರು, ದಿನಾಂಕ:22.07.2011

ಕರ್ನಾಟಕ ರಾಜ್ಯದಲ್ಲಿನ ಕೈಗಾರಿಕಾ ತರಬೇತಿ ಸಂಸ್ಥೆಗಳನ್ನು ಉನ್ನತೀಕರಿಸಲು ಜರ್ಮನ್ ಸರ್ಕಾರಿ ಸ್ವಾಮ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ GIZ ಸಂಸ್ಥೆಯಿಂದ ವಾರ್ಷಿಕ 7.50 ಕೋಟಿ ರೂ.ಗಳಂತೆ ನಾಲ್ಕು ವರ್ಷ ಅವಧಿಗೆ (ಒಟ್ಟು 30 ಕೋಟಿ ರೂ.) ತಾಂತ್ರಿಕ ಮತ್ತು ಯೋಜನಾ ನಿರ್ವಹಣಾ ನೆರವನ್ನು ಪಡೆದುಕೊಳ್ಳಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999ರ ಕಲಂ 4(ಜಿ)ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ ಕಾರ್ಮಿಕ ಇಲಾಖೆಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿದೆ.

ಉತ್ತಮ ಗುಣಮಟ್ಟದ ಸೇವೆಯನ್ನು ಸಮಂಜಸ ದರದಲ್ಲಿ ಸಂಗ್ರಹಿಸುವುದನ್ನು ಕಾರ್ಮಿಕ ಇಲಾಖೆಯು ಧೃಡಪಡಿಸಿಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಜೆ.ಡಿ. ಮಧುಚಂದ್ರ ತೇಜಸ್ವಿ

ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ)

ಆರ್ಥಿಕ ಇಲಾಖೆ (ಸಂಗ್ರಹಣಾ ಕೋಶ)

ಪಿ.ಆರ್. 779

ಸಹಕಾರ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಇ 203 ಎಂಆರ್ಇ 2011, ಬೆಂಗಳೂರು, ದಿನಾಂಕ:19.07.2011

ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1966ರ, ಕಲಂ 11(1)(ix)ರಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಚಿಂತಾಮಣಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ ಈ ಕೆಳಕಂಡವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಸದಸ್ಯರನ್ನಾಗಿ ನಾಮ ನಿರ್ದೇಶನ ಮಾಡಿದೆ:

ಕ್ರ ಸಂ.	ಸದಸ್ಯರ ಹೆಸರು ಶ್ರೀಯುತರು/ ಶ್ರೀಮತಿ
1.	ಶ್ರೀರಾಮರೆಡ್ಡಿ ಬಿನ್ ವೆಂಕಟರೆಡ್ಡಿ, ಕೆ. ಹೊಸೂರು, ಕಸಬಾ ಹೋಬಳಿ, ಚಿಂತಾಮಣಿ ತಾಲ್ಲೂಕು.

ಕ್ರ ಸಂ.	ಸದಸ್ಯರ ಹೆಸರು ಶ್ರೀಯುತರು/ ಶ್ರೀಮತಿ
2.	ಎಸ್.ಎನ್. ಲೋಕೇಶ್ ಬಾಬು ಬಿನ್ ಎಸ್.ಎನ್. ನಾಗರಾಜ್, ಬುರುಡುಗುಂಟೆ, ಚಿಲಕಲನೇರ್ಪು ಹೋಬಳಿ, ಚಿಂತಾಮಣಿ ತಾಲ್ಲೂಕು
3.	ಸುಮನ್ ಬಿನ್ ನಾಗಭೂಷಣ್, ಎಲ್.ಐ.ಸಿ. ಕಛೇರಿ ರಸ್ತೆ, ಚಿಂತಾಮಣಿ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಸಿ.ಕೆ. ವಾಸುದೇವ ಮೂರ್ತಿ
ಸರ್ಕಾರದ ಅಧೀನ ಕಾರ್ಯದರ್ಶಿ–I,
ಸಹಕಾರ ಇಲಾಖೆ.

ಪಿ.ಆರ್. 780

ಸಹಕಾರ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಒ 30 ಸಿಎನ್‌ಎಸ್ 2008, ಬೆಂಗಳೂರು, ದಿನಾಂಕ:14.07.2011

ಈ ಹಿಂದೆ ಸರ್ಕಾರದಿಂದ ಮಾಡಿರುವ ಎಲ್ಲಾ ನಾಮನಿರ್ದೇಶನಗಳನ್ನು ರದ್ದುಪಡಿಸಿ, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 (1959ರ ಕರ್ನಾಟಕ ಅಧಿನಿಯಮ ಸಂಖ್ಯೆ: 11) ರ ಪ್ರಕರಣ 29ರ ಉಪ ಪ್ರಕರಣ (1)ರ ಮೇರೆಗೆ ದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಶ್ರೀ ಎಂ. ಶಂಕರಪ್ಪ ಬಿನ್ ಮಲ್ಲಣ್ಣ, ಸಿದ್ದರಾಮೇಶ್ವರ ಸರ್ಕಲ್, 1ನೇ ರಸ್ತೆ, ಅಜ್ಜಂಪುರ, ತರೀಕೆರೆ ತಾಲ್ಲೂಕು ಇವರನ್ನು ಚಿಕ್ಕಮಗಳೂರು ಜಿಲ್ಲೆ ತರೀಕೆರೆ ತಾಲ್ಲೂಕಿನ ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ನಿ., ತರೀಕೆರೆ ಇದರ ಆಡಳಿತ ಮಂಡಳಿಗೆ ಸದಸ್ಯರನ್ನಾಗಿ ಈ ಕೂಡಲೇ ಜಾರಿಗೆ ಬರುವಂತೆ ಮತ್ತು ಮುಂದಿನ ಆದೇಶದವರೆವಿಗೂ ನಾಮನಿರ್ದೇಶನ ಮಾಡುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಆರ್.ಎಸ್. ನೂಲಿ
ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಜಂಟಿ ಕಾರ್ಯದರ್ಶಿ,
ಸಹಕಾರ ಇಲಾಖೆ.

ಪಿ.ಆರ್. 782

ಸಹಕಾರ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಒ 16 ಸಿಎನ್‌ಎಸ್ 2010, ಬೆಂಗಳೂರು, ದಿನಾಂಕ:13.07.2011

ಈ ಹಿಂದೆ ಸರ್ಕಾರದಿಂದ ಮಾಡಿರುವ ಎಲ್ಲಾ ನಾಮನಿರ್ದೇಶನಗಳನ್ನು ರದ್ದುಪಡಿಸಿ, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 (1959ರ ಕರ್ನಾಟಕ ಅಧಿನಿಯಮ ಸಂಖ್ಯೆ: 11) ರ ಪ್ರಕರಣ 29ರ ಉಪ ಪ್ರಕರಣ (1)ರ ಮೇರೆಗೆ ದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಶ್ರೀ ವಿಜಯಕುಮಾರ ಬಿ. ಹಿರೇಮಠ, ತೋಟದಮನೆ, ಸಾ–ಕಿರವತ್ತಿ, ತಾ–ಯಲ್ಲಾಪುರ (ಉ.ಕ.) ರವರನ್ನು ಉತ್ತರ ಕನ್ನಡ ಜಿಲ್ಲೆ ಯಲ್ಲಾಪುರ ತಾಲ್ಲೂಕಿನ ತಾಲ್ಲೂಕು ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ನಿ., ಯಲ್ಲಾಪುರ ಇದರ ಆಡಳಿತ ಮಂಡಳಿಗೆ ಸದಸ್ಯರನ್ನಾಗಿ ಈ ಕೂಡಲೇ ಜಾರಿಗೆ ಬರುವಂತೆ ಮತ್ತು ಮುಂದಿನ ಆದೇಶದವರೆವಿಗೂ ನಾಮನಿರ್ದೇಶನ ಮಾಡುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಆರ್.ಎಸ್. ನೂಲಿ
ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಜಂಟಿ ಕಾರ್ಯದರ್ಶಿ, ಸಹಕಾರ ಇಲಾಖೆ.

ಪಿ.ಆರ್. 783

ಸಹಕಾರ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಒ 15 ಸಿಎನ್‌ಎಸ್ 2009, ಬೆಂಗಳೂರು, ದಿನಾಂಕ:14.07.2011

ಈ ಹಿಂದೆ ಕರ್ನಾಟಕ ಸರ್ಕಾರವು ಅಧಿಸೂಚನೆ ಸಂಖ್ಯೆ: ಸಿಒ 15 ಸಿಎನ್‌ಎಸ್ 2009 ದಿನಾಂಕ:27.05.2010ರಲ್ಲಿ ಬಳ್ಳಾರಿ ಜಿಲ್ಲೆ ಹೊಸಪೇಟೆ ತಾಲ್ಲೂಕಿನ ಕಂಪ್ಲಿ ಒಕ್ಕಲುತನ ಹುಟ್ಟುವಳಿ ಮಾರಾಟ ಸಹಕಾರ ಸಂಘ ನಿ., ಕಂಪ್ಲಿ ಇದರ ಆಡಳಿತ ಮಂಡಳಿಗೆ ನಾಮನಿರ್ದೇಶನ ಮಾಡಿದ್ದ ಶ್ರೀಮತಿ ಲತಾ ಕೋಂ ಶ್ರೀ ರೇಣುಕಾಗೌಡ, ಸನಾಪುರ, ಹೊಸಪೇಟೆ ತಾಲ್ಲೂಕು ಇವರ ನಾಮನಿರ್ದೇಶನವನ್ನು ಈ ಕೂಡಲೇ ಜಾರಿಗೆ ಬರುವಂತೆ ರದ್ದುಪಡಿಸಿದೆ ಹಾಗೂ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 (1959ರ ಕರ್ನಾಟಕ ಅಧಿನಿಯಮ ಸಂಖ್ಯೆ: 11)ರ ಪ್ರಕರಣ 29ರ ಉಪ ಪ್ರಕರಣ (1)ರ ಮೇರೆಗೆ ದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಶ್ರೀಮತಿ ಎಮ್ಮಿಗನೂರು ಬಸಮ್ಮ ಕೋಂ ಶ್ರೀ ವೈ. ಮಲ್ಲಪ್ಪ, ಸಣಾಪುರ ಗ್ರಾಮ, ಹೊಸಪೇಟೆ ತಾಲ್ಲೂಕು ಇವರನ್ನು ಈ ಕೂಡಲೇ ಜಾರಿಗೆ ಬರುವಂತೆ ಮತ್ತು ಮುಂದಿನ ಆದೇಶದವರೆವಿಗೂ ನಾಮನಿರ್ದೇಶನ ಮಾಡುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಆರ್.ಎಸ್. ನೂಲಿ
ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಜಂಟಿ ಕಾರ್ಯದರ್ಶಿ, ಸಹಕಾರ ಇಲಾಖೆ.

ಪಿ.ಆರ್. 785

WPP-47 / 2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೬ | ಬೆಂಗಳೂರು, ಗುರುವಾರ, ನವೆಂಬರ್ ೩, ೨೦೧೧ (ಕಾರ್ತೀಕ ೧೨, ಶಕ ವರ್ಷ ೧೯೩೩) | ಸಂಚಿಕೆ ೪೩

ಭಾಗ – ೫

ಸರ್ಕಾರದ ಮತ್ತು ಖಾಸಗಿ ಜಾಹೀರಾತುಗಳು, ಲೋಕಸೇವಾ ಆಯೋಗದ ಜಾಹೀರಾತುಗಳು, ನೇಮಕಾತಿ ಸಮಿತಿಗಳ ಜಾಹೀರಾತುಗಳು

FORM IV

(See Rule 12)

NOTICE

IT IS HEREBY NOTIFIED THAT THE UNDERSIGNED HAS CHANGED HER/HIS NAME FROM **IRAPPA CHANNAPPA VADDAR** TO **IRAPPA CHANNAPPA JALIHAL.**

PD-116

IRAPPA CHANNAPPA VADDAR

FORM IV

(See Rule 12)

NOTICE

IT IS HEREBY NOTIFIED THAT THE UNDERSIGNED HAS CHANGED HER/HIS NAME FROM **SHANKARAPPA. S/o HULAGAPPA. VADDAR** TO **SHANKARAPPA. S/o HULAGAPPA. LAKKALAKATTI.**

PD-117

SHANKARAPPA. S/o HULAGAPPA. VADDAR

ನೋಂದಣಿ ಮತ್ತು ಮುದ್ರಾಂಕ ಇಲಾಖೆ

ನೋಂದಣಿ ಮಹಾಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರು ನಂ. 720, ಶಿಂಪಾ ಭವನ, 8ನೇ ಬ್ಲಾಕ್, 46ನೇ ಅಡ್ಡರಸ್ತೆ, ಜಯನಗರ, ಬೆಂಗಳೂರು ಇವರ ನಡವಳಿಗಳು

ಸಂಖ್ಯೆ: EST-1-274/2001-02, ದಿನಾಂಕ: 13–10–2011

ಪರಿಶಿಷ್ಟ ಪಂಗಡದ ಬೆಂಗಳೂರು ಜಿಲ್ಲಾ ನೇಮಕಾತಿ ಘಟಕದ ಬೆರಳಚ್ಚುಗಾರರ ಬ್ಯಾಕ್‌ಲಾಗ್ ಅಂತಿಮ ಆಯ್ಕೆಪಟ್ಟಿ.

ವಿಷಯ: ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಬೆಂಗಳೂರು ಜಿಲ್ಲಾ ನೇಮಕಾತಿ ಘಟಕದಲ್ಲಿ ಗುರ್ತಿಸಲ್ಪಟ್ಟ ಪರಿಶಿಷ್ಟ ಪಂಗಡದ ಬೆರಳಚ್ಚುಗಾರರ ಒಂದು ಬ್ಯಾಕ್‌ಲಾಗ್ ಹುದ್ದೆಯ ಬಗ್ಗೆ ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಕಟಿಸುವ ಕುರಿತು.

ಉಲ್ಲೇಖ: 1) ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 13 ಎಸ್‌ಬಿಸಿ 2001 ದಿನಾಂಕ:21–11–2001 (ದಿನಾಂಕ: 22–11–2001 ರಂದು ಕರ್ನಾಟಕ ವಿಶೇಷ ರಾಜ್ಯಪತ್ರದಲ್ಲಿ ಪ್ರಕಟವಾಗಿದೆ)

2) ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 06 ಸೆನೆನಿ 2001 ದಿನಾಂಕ: 13–02–2001.

3) ಸರ್ಕಾರದ ಆದೇಶ ಸಂಖ್ಯೆ: ಎಸ್‌ಡಬ್ಲ್ಯುಡಿ 132 ಎಸ್‌ಎಡಿ 97 ದಿನಾಂಕ: 8–2–2000.

4) ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 08 ಸೆನೆನಿ 2001 ದಿನಾಂಕ: 13-02-2001.
5) ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 13 ಎಸ್‌ಬಿಸಿ 2001 ದಿನಾಂಕ: 1-6-2002 (ದಿನಾಂಕ; 14-06-2002 ರಂದು ಕರ್ನಾಟಕ ವಿಶೇಷ ರಾಜ್ಯಪತ್ರದಲ್ಲಿ ಪ್ರಕಟವಾಗಿದೆ)
6) ಪರಿಶಿಷ್ಟ ಪಂಗಡದ ಸಾಮಾನ್ಯ ಅರ್ಹತಾ ಅಭ್ಯರ್ಥಿ ಬೆರಳಚ್ಚುಗಾರರ ಬ್ಯಾಕ್‌ಲಾಗ್ ಹುದ್ದೆಯ ಸಂಬಂಧ ಹೊರಡಿಸಿದ ಈ ಕಛೇರಿಯ ಮೊದಲನೇ ಅಧಿಸೂಚನೆ ಸಂಖ್ಯೆ: EST-1-274/2001-02 ದಿನಾಂಕ: 30-01-2002 (ದಿನಾಂಕ: 14-02-2002 ರಂದು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾಗಿದೆ) (ಬೆಂಗಳೂರು ಜಿಲ್ಲಾ ನೇಮಕಾತಿ ಘಟಕಕ್ಕೆ ಸೇರಿದ್ದು)
7) ಪರಿಶಿಷ್ಟ ಪಂಗಡದ ಸಾಮಾನ್ಯ ಅರ್ಹತಾ ಅಭ್ಯರ್ಥಿ ಬೆರಳಚ್ಚುಗಾರರ ಬ್ಯಾಕ್‌ಲಾಗ್ ಹುದ್ದೆಯ ಸಂಬಂಧ ಪ್ರಕಟಿಸಿದ ಈ ಕಛೇರಿಯ ಸಮಸಂಖ್ಯೆ ಮೊದಲನೇ ಅಧಿಸೂಚನೆಗೆ ಸೇರಿದ ಪರಿಶಿಷ್ಟ ಪಂಗಡದ ಸಾಮಾನ್ಯ ಅರ್ಹತಾ ಅಭ್ಯರ್ಥಿ ಬೆರಳಚ್ಚುಗಾರರ ಬ್ಯಾಕ್‌ಲಾಗ್ ಮೊದಲನೇ ತಾತ್ಕಾಲಿಕ ಆಯ್ಕೆಪಟ್ಟಿ ಸಂಖ್ಯೆ: EST-1-274/2001-02 ದಿನಾಂಕ: 8-8-2002. (ಬೆಂಗಳೂರು ಜಿಲ್ಲಾ ನೇಮಕಾತಿ ಘಟಕಕ್ಕೆ ಸೇರಿದ್ದು)
8) ಪರಿಶಿಷ್ಟ ಪಂಗಡದ ಮಹಿಳಾ ಅಭ್ಯರ್ಥಿ ಬೆರಳಚ್ಚುಗಾರರ ಬ್ಯಾಕ್‌ಲಾಗ್ ಹುದ್ದೆಯ ಸಂಬಂಧ ಹೊರಡಿಸಿದ ಈ ಕಛೇರಿಯ ಎರಡನೇ ಅಧಿಸೂಚನೆ ಸಂಖ್ಯೆ: EST-1-274/2001-02 ದಿನಾಂಕ: 17-08-2002 (ದಿನಾಂಕ: 22-08-2002 ರಂದು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾಗಿದೆ). (ಬೆಳಗಾಂ ಜಿಲ್ಲೆಗೆ ಸೇರಿದ್ದು)
9) ಪರಿಶಿಷ್ಟ ಪಂಗಡದ ಮಹಿಳಾ ಅಭ್ಯರ್ಥಿ ಬೆರಳಚ್ಚುಗಾರರ ಬ್ಯಾಕ್‌ಲಾಗ್ ಹುದ್ದೆಯ ಸಂಬಂಧ ಪ್ರಕಟಿಸಿದ ಈ ಕಛೇರಿಯ ಸಮಸಂಖ್ಯೆ ಎರಡನೇ ಅಧಿಸೂಚನೆಗೆ ಸೇರಿದ ಪರಿಶಿಷ್ಟ ಪಂಗಡದ ಮಹಿಳಾ ಅಭ್ಯರ್ಥಿ ಬೆರಳಚ್ಚುಗಾರರ ಬ್ಯಾಕ್‌ಲಾಗ್ ಎರಡನೇ ತಾತ್ಕಾಲಿಕ ಆಯ್ಕೆಪಟ್ಟಿ ಸಂಖ್ಯೆ: EST-1-274/2001-02 ದಿನಾಂಕ: 9-1-2004. (ಬೆಳಗಾಂ ಜಿಲ್ಲೆಗೆ ಸೇರಿದ್ದು)
10) ಈ ಕಛೇರಿಯ ಸಮಸಂಖ್ಯೆ ರದ್ದತಿ ಆದೇಶ ದಿನಾಂಕ: 02-09-2011.
11) ಈ ಕಛೇರಿಯ ಸಮಸಂಖ್ಯೆ ರದ್ದತಿ ಆದೇಶ ದಿನಾಂಕ: 16-11-2005.
12) ಈ ಕಛೇರಿಯ ಸಮಸಂಖ್ಯೆ ರದ್ದತಿ ಆದೇಶ ದಿನಾಂಕ: 03-09-2011.
13) ಪರಿಶಿಷ್ಟ ಪಂಗಡದ ಸಾಮಾನ್ಯ ಅರ್ಹತಾ ಅಭ್ಯರ್ಥಿ ಬೆರಳಚ್ಚುಗಾರರ ಬ್ಯಾಕ್‌ಲಾಗ್ ಹುದ್ದೆಯ ಸಂಬಂಧ ಪ್ರಕಟಿಸಿದ ಈ ಕಛೇರಿಯ ಸಮಸಂಖ್ಯೆ ಮೊದಲನೇ ಅಧಿಸೂಚನೆಗೆ ಸೇರಿದ ಪರಿಶಿಷ್ಟ ಪಂಗಡದ ಸಾಮಾನ್ಯ ಅರ್ಹತಾ ಅಭ್ಯರ್ಥಿ ಬೆರಳಚ್ಚುಗಾರರ ಬ್ಯಾಕ್‌ಲಾಗ್ ಪರಿಷ್ಕೃತ ತಾತ್ಕಾಲಿಕ ಆಯ್ಕೆಪಟ್ಟಿ ಸಂಖ್ಯೆ: EST-1-274/2001-02 ದಿನಾಂಕ: 03-09-2011. (ಬೆಂಗಳೂರು ಜಿಲ್ಲಾ ನೇಮಕಾತಿ ಘಟಕಕ್ಕೆ ಸೇರಿದ್ದು)

ಪ್ರಸ್ತಾವನೆ:

ಈ ಇಲಾಖೆಯ ಬೆಂಗಳೂರು ಜಿಲ್ಲಾ ನೇಮಕಾತಿ ಘಟಕದಲ್ಲಿನ ಬೆರಳಚ್ಚುಗಾರರ ವೃಂದದಲ್ಲಿ ಕೆಳಕಂಡ ಮೀಸಲಾತಿ ವರ್ಗೀಕರಣದ ಪ್ರಕಾರ ಗುರ್ತಿಸಲ್ಪಟ್ಟ ಪರಿಶಿಷ್ಟ ಪಂಗಡದ ಒಂದು ಬ್ಯಾಕ್‌ಲಾಗ್ ಹುದ್ದೆಯನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಸಲುವಾಗಿ ಉಲ್ಲೇಖ (1) ರ ಬ್ಯಾಕ್‌ಲಾಗ್ ನಿಯಮಗಳ ಪ್ರಕಾರ ಪರಿಶಿಷ್ಟ ಪಂಗಡದ ಅರ್ಹ ಅಭ್ಯರ್ಥಿಗಳಿಂದ ಉಲ್ಲೇಖ (6) ರ ಈ ಕಛೇರಿಯ ಅಧಿಸೂಚನೆಯಲ್ಲಿ ಅರ್ಜಿಗಳನ್ನು ಕರೆಯಲಾಗಿತ್ತು.

ಕ್ರಸಂ	ಮೀಸಲಾತಿ ವರ್ಗೀಕರಣ	ಪರಿಶಿಷ್ಟ ಪಂಗಡದಲ್ಲಿ ಗುರ್ತಿಸಲ್ಪಟ್ಟ ಬ್ಯಾಕ್‌ಲಾಗ್ ಹುದ್ದೆಗಳ ಸಂಖ್ಯೆ	ಈ ಬ್ಯಾಕ್‌ಲಾಗ್ ಹುದ್ದೆಯನ್ನು ಗುರ್ತಿಸಲ್ಪಟ್ಟ ಜಿಲ್ಲೆಯ ಹೆಸರು
1	ಸಾಮಾನ್ಯ ಅರ್ಹತಾ ಅಭ್ಯರ್ಥಿ	ಒಂದು	ಬೆಂಗಳೂರು ಜಿಲ್ಲಾ ನೇಮಕಾತಿ ಘಟಕ

ಈ ಬಗ್ಗೆ ಸ್ವೀಕೃತವಾದ ಎಲ್ಲಾ ಅರ್ಜಿಗಳನ್ನು ಪರಿಶೀಲಿಸಿ ಅವುಗಳ ಪೈಕಿ ಉಲ್ಲೇಖ (1) ರ ಬ್ಯಾಕ್‌ಲಾಗ್ ನಿಯಮಗಳ ಪ್ರಕಾರ 29 ರಿಂದ 40 ವರ್ಷ ವಯೋಮಿತಿಯಲ್ಲಿರುವ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳ ಅರ್ಜಿಗಳನ್ನು ಮಾತ್ರ ಗಣನೆಗೆ ತೆಗೆದುಕೊಂಡು ಅಂತಹ ಅಭ್ಯರ್ಥಿಗಳು ತಮ್ಮ ಬ್ಯಾಕ್‌ಲಾಗ್ ಅರ್ಜಿಯೊಂದಿಗೆ ಸಲ್ಲಿಸಿದ ನಿಗದಿತ ವಿದ್ಯಾರ್ಹತೆಯ ಅಂದರೆ S.S.L.C. ಮತ್ತು ಕನ್ನಡ ಟೈಪಿಂಗ್ ಸೀನಿಯರ್ ಅಂಕಪಟ್ಟಿಗಳ ಜೆರಾಕ್ಸ್ ಪ್ರತಿಗಳ ಆಧಾರದ ಮೇಲೆ ಅತಿ ಹೆಚ್ಚು ಶೇಕಡಾವಾರು ಅಂಕ ಗಳಿಸಿದ ಪರಿಶಿಷ್ಟ ಪಂಗಡದ ಬ್ಯಾಕ್‌ಲಾಗ್ ಅಭ್ಯರ್ಥಿಗಳನ್ನು ಮೇಲ್ಕಂಡಂತೆ ಬೆಂಗಳೂರು ಜಿಲ್ಲಾ ನೇಮಕಾತಿ ಘಟಕದಲ್ಲಿ ಗುರುತಿಸಲ್ಪಟ್ಟ ಪರಿಶಿಷ್ಟ ಪಂಗಡದ ಈ ಒಂದು ಬ್ಯಾಕ್‌ಲಾಗ್ ಹುದ್ದೆಯ ಮೀಸಲಾತಿಗೆ ಅನುಗುಣವಾಗಿ Merit ಆಧಾರದ ಮೇಲೆ ಬೆರಳಚ್ಚುಗಾರರೆಂದು ತಾತ್ಕಾಲಿಕವಾಗಿ ಮುಖ್ಯಪಟ್ಟಿಯಲ್ಲಿ ಮತ್ತು ಹೆಚ್ಚುವರಿ ಪಟ್ಟಿಯಲ್ಲಿ ಆಯ್ಕೆ ಮಾಡಿ ಉಲ್ಲೇಖ (5) ರ ಸರ್ಕಾರದ ಅಧಿಸೂಚನೆ ಅನ್ವಯ 1:1 ರ ಪ್ರಮಾಣದಲ್ಲಿ ಪರಿಶಿಷ್ಟ ಪಂಗಡದ ಬ್ಯಾಕ್‌ಲಾಗ್ ಅಭ್ಯರ್ಥಿಗಳಿರುವ ಬೆಂಗಳೂರು ಜಿಲ್ಲಾ ನೇಮಕಾತಿ ಘಟಕಕ್ಕೆ ಸೇರಿದ ಬೆರಳಚ್ಚುಗಾರರ ಬ್ಯಾಕ್‌ಲಾಗ್ ತಾತ್ಕಾಲಿಕ ಆಯ್ಕೆಯ ಮುಖ್ಯಪಟ್ಟಿಯನ್ನು ಮತ್ತು ತಾತ್ಕಾಲಿಕ ಹೆಚ್ಚುವರಿ ಪಟ್ಟಿಯನ್ನು ಉಲ್ಲೇಖ (7) ರನ್ವಯ ದಿನಾಂಕ: 8-8-2002 ರಂದು ಪ್ರಕಟಿಸಿ ಸದರಿ ಆಯ್ಕೆಗೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಅವುಗಳನ್ನು 30 ದಿನಗಳೊಳಗೆ ಲಿಖಿತ ಮೂಲಕ ಈ ಪ್ರಾಧಿಕಾರಕ್ಕೆ ಸಲ್ಲಿಸುವಂತೆ ಸೂಚಿಸಲಾಗಿತ್ತು.

ಈ ರೀತಿ ಉಲ್ಲೇಖ (7) ರನ್ವಯ ದಿನಾಂಕ: 08–08–2002 ರಂದು ಪ್ರಕಟಿಸಿದ ಈ ತಾತ್ಕಾಲಿಕ ಆಯ್ಕೆಯ ಮುಖ್ಯಪಟ್ಟಿಯಲ್ಲಿ ತಾತ್ಕಾಲಿಕವಾಗಿ ಆಯ್ಕೆಯಾದ ಇಂದಿರಮ್ಮ ಎಂಬ ಈ ಬ್ಯಾಕ್‌ಲಾಗ್ ಅಭ್ಯರ್ಥಿಯು ಉಲ್ಲೇಖ (8) ರನ್ವಯ ದಿನಾಂಕ: 17–08–2002 ರ ಎರಡನೇ ಅಧಿಸೂಚನೆ ಮೂಲಕ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಂದ ಅರ್ಜಿ ಕರೆಯಲಾಗಿದ್ದ ಈ ಇಲಾಖೆಯ ಬೆಳಗಾಂ ಜಿಲ್ಲೆಯಲ್ಲಿನ ಬೆರಳಚ್ಚುಗಾರರ ವೃಂದದಲ್ಲಿ ಗುರ್ತಿಸಲಾದ ಪರಿಶಿಷ್ಟ ಪಂಗಡದ ಮಹಿಳಾ ಮೀಸಲಾತಿ ಬ್ಯಾಕ್‌ಲಾಗ್ ಹುದ್ದೆಯ ಆಯ್ಕೆಗಾಗಿಯೂ ಸದರಿ ಇಂದಿರಮ್ಮ ಇವರು ಬ್ಯಾಕ್‌ಲಾಗ್ ಅರ್ಜಿಯನ್ನು ಸಲ್ಲಿಸಿದ್ದರ ಮೇರೆಗೆ ಅದನ್ನು ಸಹ ನಿಯಮಾನುಸಾರ ಪರಿಶೀಲಿಸಿ ಇದೇ ಇಂದಿರಮ್ಮ ಇವರನ್ನು Merit ಮತ್ತು ಮೀಸಲಾತಿ ಆಧಾರದ ಮೇಲೆ ಬೆಳಗಾಂ ಜಿಲ್ಲೆಯಲ್ಲಿ ಗುರ್ತಿಸಲಾದ ಪರಿಶಿಷ್ಟ ಪಂಗಡದ ಬ್ಯಾಕ್‌ಲಾಗ್ ಹುದ್ದೆಯಲ್ಲಿ ಮಹಿಳಾ ಅಭ್ಯರ್ಥಿಯಾಗಿ ದಿನಾಂಕ: 9–1–2004 ರಂದು ಉಲ್ಲೇಖ (9) ರನ್ವಯ ಪ್ರಕಟಿಸಿದ ಎರಡನೇ ತಾತ್ಕಾಲಿಕ ಆಯ್ಕೆಯ ಮುಖ್ಯಪಟ್ಟಿಯಲ್ಲೂ ಸಹ ಬೆರಳಚ್ಚುಗಾರರೆಂದು ಆಯ್ಕೆ ಮಾಡಲಾಯಿತು.

ಈ ರೀತಿ ಈ ಇಲಾಖೆಯಲ್ಲಿ ಮೊದಲ ಬಾರಿಗೆ ದಿನಾಂಕ: 8–8–2002 ರಂದು ಉಲ್ಲೇಖ (7) ರನ್ವಯ ಪ್ರಕಟಿಸಿದ ಬೆಂಗಳೂರು ಜಿಲ್ಲಾ ನೇಮಕಾತಿ ಘಟಕಕ್ಕೆ ಸೇರಿದ ಪರಿಶಿಷ್ಟ ಪಂಗಡದ ಬೆರಳಚ್ಚುಗಾರರ ತಾತ್ಕಾಲಿಕ ಆಯ್ಕೆಪಟ್ಟಿಯ ಮುಖ್ಯಪಟ್ಟಿಯಲ್ಲಿ ಸಾಮಾನ್ಯ ಅರ್ಹತಾ ಅಭ್ಯರ್ಥಿಯಾಗಿಯೂ ಮತ್ತು ಎರಡನೇ ಬಾರಿಗೆ ದಿನಾಂಕ: 9–1–2004 ರಂದು ಉಲ್ಲೇಖ (9) ರನ್ವಯ ಪ್ರಕಟಿಸಿದ ಬೆಳಗಾಂ ಜಿಲ್ಲೆಗೆ ಸೇರಿದ ಪರಿಶಿಷ್ಟ ಪಂಗಡದ ಬೆರಳಚ್ಚುಗಾರರ ತಾತ್ಕಾಲಿಕ ಆಯ್ಕೆಪಟ್ಟಿಯ ಮುಖ್ಯಪಟ್ಟಿಯಲ್ಲಿ ಮಹಿಳಾ ಅಭ್ಯರ್ಥಿಯಾಗಿಯೂ ಸಹ ಸದರಿ ಇಂದಿರಮ್ಮ ಇವರೇ ಎರಡು ಬಾರಿಯು ಬೆರಳಚ್ಚುಗಾರರಾಗಿ ಪರಿಶಿಷ್ಟ ಪಂಗಡದ ಬ್ಯಾಕ್‌ಲಾಗ್ ಹುದ್ದೆಯಲ್ಲಿ ಆಯ್ಕೆಯಾದ ಕಾರಣ, ಸದರಿಯವರಿಗೆ ಜಿಲ್ಲಾ [illegible] ತುಮಕೂರು ಇವರ ಮುಖಾಂತರ ದಿನಾಂಕ: 20–9–2004 ರನ್ವಯ ಈ ಕಛೇರಿಯಿಂದ ಸಮಸಂಖ್ಯೆ ನೋಟೀಸ್‌ನ್ನು ಜಾರಿ ಮಾಡಿ, ಸದರಿ ನೋಟೀಸ್‌ನಲ್ಲಿ ಇವರನ್ನು ಈ ರೀತಿ ಎರಡು ಬಾರಿ ತಾತ್ಕಾಲಿಕವಾಗಿ ಆಯ್ಕೆ ಮಾಡಿರುವ ವಿಷಯವನ್ನು ಪ್ರಸ್ತಾಪಿಸಿ ಈ ಎರಡು ಆಯ್ಕೆಗಳ ಪೈಕಿ ಮೊದಲನೇ ಬಾರಿಗೆ ಸಾಮಾನ್ಯ ಅರ್ಹತಾ ಅಭ್ಯರ್ಥಿಯಾಗಿ ಆಯ್ಕೆಯಾಗಿರುವ ಪ್ರಕಾರ GM ಅಭ್ಯರ್ಥಿಯಾಗಿ ಈ ಬ್ಯಾಕ್‌ಲಾಗ್ ಹುದ್ದೆಯಲ್ಲಿ ನೇಮಕ ಹೊಂದಲು ಇಚ್ಚಿಸುವಿರೋ? ಅಥವಾ ಎರಡನೇ ಬಾರಿಗೆ ಮಹಿಳಾ ಅಭ್ಯರ್ಥಿಯಾಗಿ ಆಯ್ಕೆಯಾದ ಪ್ರಕಾರ ಮಹಿಳಾ ಅಭ್ಯರ್ಥಿಯಾಗಿ ಈ ಬ್ಯಾಕ್‌ಲಾಗ್ ಹುದ್ದೆಯಲ್ಲಿ ನೇಮಕ ಹೊಂದಲು ಇಚ್ಚಿಸುವಿರೋ? ಎಂಬ ವಿಷಯದ ಬಗ್ಗೆ ಸದರಿ ನೋಟೀಸ್ ತಲುಪಿದ ದಿನಾಂಕದಿಂದ [illegible] ದಿನಗಳಲ್ಲಿ ಅವರ ಲಿಖಿತ ಅಭಿಪ್ರಾಯವನ್ನು ಸಲ್ಲಿಸುವಂತೆ ಸದರಿ ಇಂದಿರಮ್ಮ ಇವರಿಗೆ ಸೂಚಿಸಲಾಯಿತು.

ಇದಕ್ಕೆ ಉತ್ತರವಾಗಿ ಸದರಿ ಇಂದಿರಮ್ಮ ಇವರು ದಿನಾಂಕ: 19–07–2005 ರಂದು ಸಲ್ಲಿಸಿದ ತಮ್ಮ ಲಿಖಿತ ಮನವಿಯಲ್ಲಿ ತಾವು ಈಗಾಗಲೇ ಡೆಪ್ಯೂಟಿ ರಿಜಿಸ್ಟ್ರಾರ್ ಆಫ್ ಕೋ ಆಪರೇಟಿವ್ ಇಲಾಖೆ ತುಮಕೂರು ಇಲ್ಲಿ ಶೀಘ್ರಲಿಪಿಗಾರರಾಗಿ ಕೆಲಸ ನಿರ್ವಹಿಸುತ್ತಿರುವುದರಿಂದ ನೋಂದಣಿ ಮತ್ತು ಮುದ್ರಾಂಕ ಇಲಾಖೆಯಲ್ಲಿನ ಈ ಬ್ಯಾಕ್‌ಲಾಗ್ ಹುದ್ದೆಯಲ್ಲಿ ಮೊದಲನೇ ಬಾರಿಗೆ ಉಲ್ಲೇಖ (7) ರನ್ವಯ ದಿನಾಂಕ; 8–8–2002 ರಂದು ಪ್ರಕಟಿಸಿದ ಪರಿಶಿಷ್ಟ ಪಂಗಡದ ಬ್ಯಾಕ್‌ಲಾಗ್ ತಾತ್ಕಾಲಿಕ ಆಯ್ಕೆಪಟ್ಟಿಯಲ್ಲಿ ಬೆರಳಚ್ಚುಗಾರರಾಗಿ ಆಯ್ಕೆಯಾಗಿರುವ ಪ್ರಕಾರ ಸಾಮಾನ್ಯ ಅರ್ಹತಾ ಅಭ್ಯರ್ಥಿಯಾಗಿ ನೇಮಕಾತಿ ಹೊಂದಲು ತಮಗೆ ಇಷ್ಟವಿಲ್ಲವೆಂದು ಮತ್ತು ಎರಡನೇ ಬಾರಿಗೆ ಉಲ್ಲೇಖ (9) ರನ್ವಯ ದಿನಾಂಕ: 9–1–2004 ರಂದು ಪ್ರಕಟಿಸಿದ ಪರಿಶಿಷ್ಟ ಪಂಗಡದ ಬ್ಯಾಕ್‌ಲಾಗ್ ತಾತ್ಕಾಲಿಕ ಆಯ್ಕೆಪಟ್ಟಿಯಲ್ಲಿ ಬೆರಳಚ್ಚುಗಾರರಾಗಿ ಆಯ್ಕೆಯಾಗಿರುವ ಪ್ರಕಾರ ಮಹಿಳಾ ಅಭ್ಯರ್ಥಿಯಾಗಿಯೂ ಸಹ ನೇಮಕಾತಿ ಹೊಂದಲು ತಮಗೆ ಇಷ್ಟವಿಲ್ಲವೆಂದು ಹಾಗೂ ಈ ಎರಡೂ ರೀತಿಯ ತಮ್ಮ ಬ್ಯಾಕ್‌ಲಾಗ್ ತಾತ್ಕಾಲಿಕ ಆಯ್ಕೆಗಳನ್ನು ರದ್ದುಪಡಿಸಿ ಈ ಎರಡೂ ಆಯ್ಕೆಗಳಲ್ಲಿ ತಮ್ಮ ಬದಲಿಗೆ ಬೇರೆ ಅಭ್ಯರ್ಥಿಗಳನ್ನು ಬೆರಳಚ್ಚುಗಾರರೆಂದು ಈ ಬ್ಯಾಕ್‌ಲಾಗ್ ಹುದ್ದೆಗಳಲ್ಲಿ ಆಯ್ಕೆ [illegible] ಪಕ್ಷಕ್ಕೆ ತಮ್ಮ ತಂಟೆ ತಕರಾರುಗಳು ಏನೂ ಇರುವುದಿಲ್ಲವೆಂದು ಸದರಿ ಇಂದಿರಮ್ಮ ಇವರು ವಿನಂತಿಸಿದ ಕಾರಣ ದಿನಾಂಕ: 08–08–2002 ರಂದು ಉಲ್ಲೇಖ (7) ರನ್ವಯ ಮೊದಲ ಬಾರಿಗೆ ಪ್ರಕಟಿಸಿದ ಪರಿಶಿಷ್ಟ ಪಂಗಡದ ಬೆರಳಚ್ಚುಗಾರರ ಬ್ಯಾಕ್‌ಲಾಗ್ ತಾತ್ಕಾಲಿಕ ಆಯ್ಕೆಯ [illegible] ತಾತ್ಕಾಲಿಕವಾಗಿ ಬೆಂಗಳೂರು ಜಿಲ್ಲಾ ನೇಮಕಾತಿ ಘಟಕದ ಪರಿಶಿಷ್ಟ ಪಂಗಡದ ಬೆರಳಚ್ಚುಗಾರರ ಬ್ಯಾಕ್‌ಲಾಗ್ ಹುದ್ದೆಯಲ್ಲಿ ಸಾಮಾನ್ಯ ಅರ್ಹತಾ ಅಭ್ಯರ್ಥಿಯಾಗಿ ಆಯ್ಕೆಯಾದ ಇವರ ಬ್ಯಾಕ್‌ಲಾಗ್ ತಾತ್ಕಾಲಿಕ ಆಯ್ಕೆಯನ್ನು ಇವರ ಕೋರಿಕೆಯಂತೆ ಉಲ್ಲೇಖ (10) ರನ್ವಯ ದಿನಾಂಕ: 02–09–2011 ರಂದು ಹೊರಡಿಸಿದ ರದ್ದತಿ ಆದೇಶದಲ್ಲಿ ರದ್ದುಪಡಿಸಲಾಯಿತು.

ಇದೇ ರೀತಿ ದಿನಾಂಕ: 09–01–2004 ರಂದು ಉಲ್ಲೇಖ (9) ರನ್ವಯ ಎರಡನೇ ಬಾರಿಗೆ ಪ್ರಕಟಿಸಿದ ಪರಿಶಿಷ್ಟ ಪಂಗಡದ ಬೆರಳಚ್ಚುಗಾರರ ಬ್ಯಾಕ್‌ಲಾಗ್ ತಾತ್ಕಾಲಿಕ ಆಯ್ಕೆಯ ಮುಖ್ಯಪಟ್ಟಿಯಲ್ಲಿ ತಾತ್ಕಾಲಿಕವಾಗಿ ಬೆಳಗಾಂ ಜಿಲ್ಲೆಯಲ್ಲಿನ ಪರಿಶಿಷ್ಟ ಪಂಗಡದ [illegible] ಹುದ್ದೆಯಲ್ಲಿ ಮಹಿಳಾ ಅಭ್ಯರ್ಥಿಯಾಗಿ ಆಯ್ಕೆಯಾದ ಸದರಿ ಇಂದಿರಮ್ಮ ಇವರ ಬ್ಯಾಕ್‌ಲಾಗ್ ತಾತ್ಕಾಲಿಕ ಆಯ್ಕೆಯನ್ನು [illegible] ಉಲ್ಲೇಖ (11) ರನ್ವಯ ದಿನಾಂಕ: 16–11–2005 ರಂದು ಹೊರಡಿಸಿದ ರದ್ದತಿ ಆದೇಶದಲ್ಲಿ ರದ್ದುಪಡಿಸಲಾಯಿತು.

ಇದೇ ರೀತಿ ಉಲ್ಲೇಖ (7) ರನ್ವಯ ದಿನಾಂಕ: 08–08–2002 ರಂದು ಪ್ರಕಟಿಸಿದ ಬೆಂಗಳೂರು ಜಿಲ್ಲಾ ನೇಮಕಾತಿ ಘಟಕಕ್ಕೆ ಸೇರಿದ ಪರಿಶಿಷ್ಟ ಪಂಗಡದ ಬೆರಳಚ್ಚುಗಾರರ ತಾತ್ಕಾಲಿಕ ಆಯ್ಕೆಯ [illegible] ಸಾಮಾನ್ಯ ಅರ್ಹತಾ ಅಭ್ಯರ್ಥಿಯಾಗಿ [illegible] ಸಿ.ಇ. ವಸಂತಕುಮಾರಿ ಇವರನ್ನು [illegible] ಈ ಬ್ಯಾಕ್‌ಲಾಗ್ ಹುದ್ದೆಯಲ್ಲಿ ಆಯ್ಕೆ ಮಾಡಿದ್ದು [illegible] ಸಿಂಧುತ್ವ ಪ್ರಮಾಣ ಪತ್ರದ ಅವಶ್ಯಕತೆ ಇದ್ದುದರಿಂದ ಅದನ್ನು ಕಳುಹಿಸುವಂತೆ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ಬೆಂಗಳೂರು ಇವರಿಗೆ ದಿನಾಂಕ 08–08–2002 ರಿಂದಲೂ ಈ ಕಛೇರಿಯಿಂದ ಪತ್ರ ಬರೆಯಲಾಗುತ್ತಿತ್ತು.

ಈ ಬಗ್ಗೆ ಎಷ್ಟೇ ಪ್ರಯತ್ನ ಪಟ್ಟರೂ ಸದರಿ ಸಿ.ಇ. ವಸಂತಕುಮಾರಿ ಇವರ ಜಾತಿ ಸಿಂಧುತ್ವ ಪ್ರಮಾಣ ಪತ್ರವು ಬಾರದೇ ಇದ್ದುದರಿಂದ ಈ ಬಗ್ಗೆ ಸದರಿ ಜಿಲ್ಲಾಧಿಕಾರಿಗಳಿಗೆ ಹಲವಾರು ಬಾರಿ ಬರೆದ ನೆನಪೋಲೆ ಪತ್ರದ ಪ್ರತಿಗಳನ್ನು ಸದರಿ ಸಿ.ಇ. ವಸಂತಕುಮಾರಿ ಇವರಿಗೂ ಸಹ ಕಳುಹಿಸಿ

ನಿಮ್ಮ ಜಾತಿ ಸಿಂಧುತ್ವ ಪ್ರಮಾಣ ಪತ್ರಕ್ಕಾಗಿ ಒದಗಿಸಬೇಕಾದ ಅಗತ್ಯ ದಾಖಲೆಗಳನ್ನು ಸದರಿ ಜಿಲ್ಲಾಧಿಕಾರಿಗಳಿಗೆ ತಕ್ಷಣವೇ ಒದಗಿಸಿ ನಿಮ್ಮ ಜಾತಿ ಸಿಂಧುತ್ವ ಪ್ರಮಾಣ ಪತ್ರವನ್ನು ಈ ಕಛೇರಿಗೆ ಕಳುಹಿಸುವ ವ್ಯವಸ್ಥೆ ಮಾಡುವಂತೆ ಈ ಅಭ್ಯರ್ಥಿಗೆ ಸೂಚಿಸಲಾಯಿತು. ಈ ರೀತಿ ಬರೆದ ಹಲವಾರು ಪತ್ರಗಳ ಪೈಕಿ ದಿನಾಂಕ 30–08–2001 ರಂದು ಈ ಅಭ್ಯರ್ಥಿಗೆ ಕಳುಹಿಸಿದ ಪತ್ರವು ಸದರಿಯವರಿಗೆ ತಲುಪದೇ ವಿಳಾಸ ಸರಿ ಇಲ್ಲವೆಂಬ ಕಾರಣದಿಂದ ಅಂಚೆ ಇಲಾಖೆಯಿಂದ Addressee not known ಎಂಬ ಷರಾದೊಂದಿಗೆ ಸದರಿ ಪತ್ರವು ಈ ಕಛೇರಿಗೆ ವಾಪಸ್ ಬಂದಿರುತ್ತದೆ.

ಆದರೆ ಈ ರೀತಿ ಎಷ್ಟೇ ಪ್ರಯತ್ನ ಪಟ್ಟರೂ ಸದರಿ ಸಿ.ಇ. ವಸಂತಕುಮಾರಿ ಇವರಿಂದಾಗಲೀ ಅಥವಾ ಸದರಿ ಜಿಲ್ಲಾಧಿಕಾರಿಗಳಿಂದಾಗಲೀ ಯಾವುದೇ ರೀತಿಯ ಉತ್ತರ ಬಾರದ ಕಾರಣ, ಸದರಿ ಸಿ.ಇ. ವಸಂತಕುಮಾರಿ ಇವರಿಗೆ ದಿನಾಂಕ: 18–12–2010 ರನ್ವಯ ಈ ಕಛೇರಿಯಿಂದ ಅಂತಿಮವಾಗಿ ನೋಟೀಸನ್ನು ಜಾರಿ ಮಾಡಿ ಸದರಿ ನೋಟೀಸ್‌ನಲ್ಲಿ ನಿಮಗೆ ನೋಂದಣಿ ಮತ್ತು ಮುದ್ರಾಂಕ ಇಲಾಖೆಯಲ್ಲಿನ ಈ ಬ್ಯಾಕ್‌ಲಾಗ್ ಹುದ್ದೆಯಲ್ಲಿ ಬೆರಳಚ್ಚುಗಾರರಾಗಿ ನೇಮಕಾತಿ ಹೊಂದಲು ಇಚ್ಛೆ ಇದೆಯೋ? ಅಥವಾ ಇಲ್ಲವೋ? ಎಂಬುದರ ಬಗ್ಗೆ ನಿಮ್ಮ ಸ್ಪಷ್ಟ ಹಾಗೂ ನಿರ್ದಿಷ್ಟ ಅಭಿಪ್ರಾಯವನ್ನು ಲಿಖಿತ ಮೂಲಕ ಸಲ್ಲಿಸುವಂತೆ ಸದರಿ ಅಭ್ಯರ್ಥಿಗೆ ನಿರ್ದೇಶಿಸಲಾಯಿತು.

ಮೇಲ್ಕಂಡ ನಿರ್ದೇಶನಕ್ಕೆ ಉತ್ತರವಾಗಿ ಸದರಿ ಸಿ.ಇ. ವಸಂತಕುಮಾರಿ ಇವರು ದಿನಾಂಕ; 27–12–2010 ಮತ್ತು ದಿನಾಂಕ: 6–1–2011 ರಂದು ಈ ಕಛೇರಿಗೆ ಸಲ್ಲಿಸಿದ ಸದರಿ ಮನವಿಗಳಲ್ಲಿ ತಾನು ಈಗಾಗಲೇ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಕಿರಿಯ ಸಹಾಯಕಿ ಹುದ್ದೆಯಲ್ಲಿ ನೌಕರಿ ಮಾಡುತ್ತಿರುತ್ತೇನೆಂದು ಇದರಿಂದಾಗಿ ತಮಗೆ ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಈ ಬ್ಯಾಕ್‌ಲಾಗ್ ಹುದ್ದೆಯಲ್ಲಿ ಬೆರಳಚ್ಚುಗಾರಳಾಗಿ ನೌಕರಿ ಪಡೆಯಲು ಹಾಗೂ ಕೆಲಸ ಮಾಡಲು ತಮಗೆ ಇಚ್ಛೆ ಇರುವುದಿಲ್ಲವಾದ್ದರಿಂದ ನನ್ನ ಜಾತಿ ಸಿಂಧುತ್ವ ಪ್ರಮಾಣ ಪತ್ರವನ್ನು ಬೆಂಗಳೂರು ನಗರ ಜಿಲ್ಲಾಧಿಕಾರಿಗಳಿಂದ ಪಡೆದು ಸಲ್ಲಿಸುವ ಅಗತ್ಯವಿರುವುದಿಲ್ಲವೆಂದು ಈ ಕಛೇರಿಗೆ ತಿಳಿಸುತ್ತಾ, ಉಲ್ಲೇಖ (7) ರನ್ವಯ ದಿನಾಂಕ: 8–8–2002 ರಂದು ಪ್ರಕಟಿಸಿರುವ ಬೆರಳಚ್ಚುಗಾರರ ಪರಿಶಿಷ್ಟ ಪಂಗಡದ ಈ ಬ್ಯಾಕ್‌ಲಾಗ್ ತಾತ್ಕಾಲಿಕ ಹೆಚ್ಚುವರಿ ಪಟ್ಟಿಯಲ್ಲಿ ಆಯ್ಕೆ ಮಾಡಿರುವ ತಮ್ಮ ಹೆಚ್ಚುವರಿ ತಾತ್ಕಾಲಿಕ ಬ್ಯಾಕ್‌ಲಾಗ್ ಆಯ್ಕೆಯನ್ನು ರದ್ದುಪಡಿಸಿ ತಮ್ಮ ಬದಲಿಗೆ ಬೇರೊಬ್ಬ ಅಭ್ಯರ್ಥಿಯನ್ನು ಸದರಿ ಬೆರಳಚ್ಚುಗಾರರ ಬ್ಯಾಕ್‌ಲಾಗ್ ಹುದ್ದೆಯಲ್ಲಿ ಆಯ್ಕೆ ಮಾಡಿಕೊಂಡು ನೇಮಿಸಿಕೊಳ್ಳಬಹುದೆಂದು ಇದಕ್ಕೆ ತಮ್ಮ ತಂಟೆ ತಕರಾರುಗಳು ಮತ್ತು ಅಭ್ಯಂತರಗಳೇನೂ ಇರುವುದಿಲ್ಲವೆಂದು ಸದರಿ ಸಿ.ಇ. ವಸಂತಕುಮಾರಿ ಇವರು ಈ ಕಛೇರಿಗೆ ಮನವಿ ಸಲ್ಲಿಸಿದ ಕಾರಣ ದಿನಾಂಕ: 08–08–2002 ರಂದು ಉಲ್ಲೇಖ (7) ರನ್ವಯ ಮೊದಲ ಬಾರಿಗೆ ಪ್ರಕಟಿಸಿದ ಪರಿಶಿಷ್ಟ ಪಂಗಡದ ಬೆರಳಚ್ಚುಗಾರರ ಬ್ಯಾಕ್‌ಲಾಗ್ ತಾತ್ಕಾಲಿಕ ಆಯ್ಕೆಯ ಹೆಚ್ಚುವರಿ ಪಟ್ಟಿಯಲ್ಲಿ ತಾತ್ಕಾಲಿಕವಾಗಿ ಬೆಂಗಳೂರು ಜಿಲ್ಲಾ ನೇಮಕಾತಿ ಘಟಕದ ಪರಿಶಿಷ್ಟ ಪಂಗಡದ ಬೆರಳಚ್ಚುಗಾರರ ಬ್ಯಾಕ್‌ಲಾಗ್ ಹುದ್ದೆಯಲ್ಲಿ ಸಾಮಾನ್ಯ ಅರ್ಹತಾ ಅಭ್ಯರ್ಥಿಯಾಗಿ ಆಯ್ಕೆಯಾದ ಇವರ ಬ್ಯಾಕ್‌ಲಾಗ್ ತಾತ್ಕಾಲಿಕ ಆಯ್ಕೆಯನ್ನು ಇವರ ಕೋರಿಕೆಯಂತೆ ಉಲ್ಲೇಖ (12) ರನ್ವಯ ದಿನಾಂಕ: 03–09–2011 ರಂದು ಹೊರಡಿಸಿದ ರದ್ದತಿ ಆದೇಶದಲ್ಲಿ ರದ್ದುಪಡಿಸಲಾಯಿತು.

ಈ ರೀತಿ ಮೇಲೆ ವಿವರಿಸಿದ ಕಾರಣಗಳಿಂದ ಮೇಲ್ಕಂಡ ಇಬ್ಬರು ಬ್ಯಾಕ್‌ಲಾಗ್ ಅಭ್ಯರ್ಥಿಗಳಾದ ಇಂದಿರಮ್ಮ ಮತ್ತು ಸಿ.ಇ. ವಸಂತಕುಮಾರಿ ಇವರುಗಳ ಬೆಂಗಳೂರು ಜಿಲ್ಲಾ ನೇಮಕಾತಿ ಘಟಕದ ಪರಿಶಿಷ್ಟ ಪಂಗಡದ ಸಾಮಾನ್ಯ ಅರ್ಹತಾ ಅಭ್ಯರ್ಥಿಗಳಿಗೆ ಮೀಸಲಿಟ್ಟ ಬೆರಳಚ್ಚುಗಾರರ ಬ್ಯಾಕ್‌ಲಾಗ್ ತಾತ್ಕಾಲಿಕ ಆಯ್ಕೆಯನ್ನು ಉಲ್ಲೇಖ (10) ಮತ್ತು (12) ರನ್ವಯ ರದ್ದುಪಡಿಸಿದ ಕಾರಣ ಹಾಗೂ ಸದರಿಯವರುಗಳು ಈ ಇಲಾಖೆಯ ಬೆಂಗಳೂರು ಜಿಲ್ಲಾ ನೇಮಕಾತಿ ಘಟಕದ ಪರಿಶಿಷ್ಟ ಪಂಗಡದ ಬೆರಳಚ್ಚುಗಾರರ ಬ್ಯಾಕ್‌ಲಾಗ್ ಹುದ್ದೆಯಲ್ಲಿನ ನೇರ ನೇಮಕಾತಿ ಹಕ್ಕನ್ನು ಕಳೆದುಕೊಂಡ ಕಾರಣ ಮೇಲ್ಕಂಡ ಈ ಇಬ್ಬರು ಅಭ್ಯರ್ಥಿಗಳಾದ ಇಂದಿರಮ್ಮ ಮತ್ತು ಸಿ.ಇ. ವಸಂತಕುಮಾರಿ ಇವರುಗಳ ಬದಲಿಗೆ ಪರಿಶಿಷ್ಟ ಪಂಗಡದ ಬೆರಳಚ್ಚುಗಾರರ Merit list ನಿಂದ Merit ಆಧಾರದ ಮೇಲೆ ಮೇಲ್ಕಂಡಂತೆ ಬೆಂಗಳೂರು ಜಿಲ್ಲಾ ನೇಮಕಾತಿ ಘಟಕದಲ್ಲಿ ಗುರ್ತಿಸಲ್ಪಟ್ಟ ಪರಿಶಿಷ್ಟ ಪಂಗಡದ ಸಾಮಾನ್ಯ ಅರ್ಹತಾ ಅಭ್ಯರ್ಥಿಗಳಿಗೆ ಮೀಸಲಿಟ್ಟ ಬೆರಳಚ್ಚುಗಾರರ ಬ್ಯಾಕ್‌ಲಾಗ್ ಹುದ್ದೆಗೆ ಅನುಗುಣವಾಗಿ ಅರ್ಹರಾದ ಇಬ್ಬರು ಪರಿಶಿಷ್ಟ ಪಂಗಡದ ಬ್ಯಾಕ್‌ಲಾಗ್ ಅಭ್ಯರ್ಥಿಗಳ ಪೈಕಿ ಒಬ್ಬರನ್ನು ಮುಖ್ಯಪಟ್ಟಿಗೂ ಮತ್ತು ಇನ್ನೊಬ್ಬರನ್ನು ಹೆಚ್ಚುವರಿಪಟ್ಟಿಗೂ ನಿಯಮಾನುಸಾರ Merit ಆಧಾರದ ಬೆರಳಚ್ಚುಗಾರರೆಂದು ಆಯ್ಕೆ ಮಾಡಿ ಪರಿಷ್ಕೃತ ತಾತ್ಕಾಲಿಕ ಆಯ್ಕೆಪಟ್ಟಿಯನ್ನು ಪ್ರಕಟಿಸುವುದು ಸೂಕ್ತವೆಂದು ಮನಗಂಡು ಉಲ್ಲೇಖ (7) ರನ್ವಯ ದಿನಾಂಕ: 08–08–2002 ರಂದು ಪ್ರಕಟಿಸಿದ ಬೆಂಗಳೂರು ಜಿಲ್ಲಾ ನೇಮಕಾತಿ ಘಟಕಕ್ಕೆ ಸೇರಿದ ಪರಿಶಿಷ್ಟ ಪಂಗಡದ ಸಾಮಾನ್ಯ ಅರ್ಹತಾ ಅಭ್ಯರ್ಥಿಗಳಿಗೆ ಮೀಸಲಿಟ್ಟ ಬೆರಳಚ್ಚುಗಾರರ ಬ್ಯಾಕ್‌ಲಾಗ್ ತಾತ್ಕಾಲಿಕ ಆಯ್ಕೆಪಟ್ಟಿಯನ್ನು ಮಾತ್ರ ರದ್ದುಪಡಿಸಿ, ಸದರಿ ತಾತ್ಕಾಲಿಕ ಆಯ್ಕೆ ಪಟ್ಟಿಗೆ ಬದಲಾಗಿ ದಿನಾಂಕ: 30–01–2002 ರ ಉಲ್ಲೇಖ (6) ರ ಅಧಿಸೂಚನೆಗೆ ಅನುಗುಣವಾಗಿ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಂದ ಬಂದ ಎಲ್ಲಾ ಅರ್ಜಿಗಳನ್ನು ಇನ್ನೊಮ್ಮೆ ಪರಿಶೀಲಿಸಿ ಉಲ್ಲೇಖ (1) ರ ನಿಯಮಗಳನ್ವಯ ಪ್ರದತ್ತವಾದ ಅಧಿಕಾರದ ಮೇರೆಗೆ ಕೆಳಕಂಡ ಆಯ್ಕೆ ಪ್ರಾಧಿಕಾರಿಯಾದ ನಾನು ಈ ಇಲಾಖೆಯಲ್ಲಿ ಮೇಲ್ಕಂಡಂತೆ ಬೆಂಗಳೂರು ಜಿಲ್ಲಾ ನೇಮಕಾತಿ ಘಟಕದಲ್ಲಿ ಗುರ್ತಿಸಲ್ಪಟ್ಟ ಪರಿಶಿಷ್ಟ ಪಂಗಡದ ಒಂದು ಸಾಮಾನ್ಯ ಅರ್ಹತಾ ಅಭ್ಯರ್ಥಿ ಬೆರಳಚ್ಚುಗಾರರ ಬ್ಯಾಕ್‌ಲಾಗ್ ಹುದ್ದೆಯ ನೇರ ನೇಮಕಾತಿಗಾಗಿ ಸದರಿ ಇಂದಿರಮ್ಮ ಮತು ಸಿ.ಇ. ವಸಂತಕುಮಾರಿ ಇವರ ಬದಲಿಗೆ ಉಲ್ಲೇಖ (1) ರಲ್ಲಿನ ನಿಯಮಗಳ ಪ್ರಕಾರ 29 ರಿಂದ 40 ವರ್ಷ ವಯೋಮಿತಿಯಲ್ಲಿರುವ ಹಾಗೂ ಉಲ್ಲೇಖ (5) ರನ್ವಯ 1:1 ರ ಪ್ರಮಾಣದಲ್ಲಿ Merit ಆಧಾರದ ಮೇಲೆ ಕೆಳಕಂಡ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿರುವ ಬೆಂಗಳೂರು ಜಿಲ್ಲಾ ನೇಮಕಾತಿ ಘಟಕಕ್ಕೆ ಸೇರಿದ ಸಾಮಾನ್ಯ ಅರ್ಹತಾ ಅಭ್ಯರ್ಥಿ ಬೆರಳಚ್ಚುಗಾರರ ಬ್ಯಾಕ್‌ಲಾಗ್ ಪರಿಷ್ಕೃತ ತಾತ್ಕಾಲಿಕ ಆಯ್ಕೆಯ ಮುಖ್ಯಪಟ್ಟಿಯನ್ನು ಮತ್ತು ಹೆಚ್ಚುವರಿ ಪಟ್ಟಿಯನ್ನು ಕೆಲವು ಷರತ್ತುಗಳಿಗೆ ಒಳಪಡಿಸಿ ಉಲ್ಲೇಖ (13) ರನ್ವಯ ದಿನಾಂಕ: 03–09–2011 ರಂದು ಪ್ರಕಟಿಸಿ ಸದರಿ ಪರಿಷ್ಕೃತ ತಾತ್ಕಾಲಿಕ ಆಯ್ಕೆಗೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಅವುಗಳನ್ನು 30 (ಮೂವತ್ತು) ದಿನಗಳೊಳಗೆ ಲಿಖಿತ ಮೂಲಕ ಈ ಪ್ರಾಧಿಕಾರಕ್ಕೆ ಸಲ್ಲಿಸುವಂತೆ ಸೂಚಿಸಲಾಯಿತು.

ಈ ವಿಚಾರದಲ್ಲಿ ಈವರೆವಿಗೂ ಯಾವುದೇ ಆಕ್ಷೇಪಣೆಗಳು ಬಂದಿರುವುದಿಲ್ಲ ಹಾಗೂ ಸದರಿ ಪರಿಷ್ಕೃತ ತಾತ್ಕಾಲಿಕ ಆಯ್ಕೆಗೆ ಆಕ್ಷೇಪಣೆಗಳನ್ನು ಸಲ್ಲಿಸುವಂತೆ ನೀಡಿದ 30 ದಿನಗಳ ಅವಧಿಯು ಸಹ ಈಗಾಗಲೇ ಮುಕ್ತಾಯವಾಗಿರುತ್ತದೆ. ಇದಲ್ಲದೇ ಉಲ್ಲೇಖ (13) ರನ್ವಯ ದಿನಾಂಕ: 03–09–2011 ರಂದು ಪ್ರಕಟಿಸಿದ ಪರಿಷ್ಕೃತ ತಾತ್ಕಾಲಿಕ ಆಯ್ಕೆ ಪಟ್ಟಿಯ ಹೆಚ್ಚುವರಿ ಪಟ್ಟಿಯಲ್ಲಿ ಆಯ್ಕೆಯಾದ ರಾಮಣ್ಣ S/O ಕಾಮಣ್ಣ ಸುರಪುರ ಇವರನ್ನು ಹೊರತುಪಡಿಸಿ ಸದರಿ ಪರಿಷ್ಕೃತ ತಾತ್ಕಾಲಿಕ ಆಯ್ಕೆಪಟ್ಟಿಯ ಮುಖ್ಯಪಟ್ಟಿಯಲ್ಲಿ ಆಯ್ಕೆಯಾದ ಈ ಕೆಳಕಂಡ ಅಭ್ಯರ್ಥಿಯ ಜಾತಿ ಸಿಂಧುತ್ವ ಪ್ರಮಾಣ ಪತ್ರವು ಜಿಲ್ಲಾಧಿಕಾರಿಗಳು ಬಾಗಲಕೋಟೆ ಇವರಿಂದಲೂ ಮತ್ತು ಸದರಿ ಅಭ್ಯರ್ಥಿಯ ನಡತೆ ಬಗ್ಗೆ ಪೂರ್ವ ಚರಿತ್ರಾ ಪರಿಶೀಲನಾ ವರದಿಯು ಜಿಲ್ಲಾ ಪೊಲೀಸ್ ಅಧೀಕ್ಷಕರು ಬಾಗಲಕೋಟೆ ಇವರಿಂದ ಬಂದಿದ್ದು ಅವುಗಳಲ್ಲಿ ಯಾವುದೇ ಪ್ರತಿಕೂಲ ಷರಾಗಳು ಇರುವುದಿಲ್ಲ.

1) ಹನುಮಂತರಾಯ ವೆಂಕಪ್ಪ ಗುಳೇದ, ಸಂಗಮೇಶ್ವರ ಓಣಿ, ಹುನಗುಂದ

ಮೇಲ್ಕಂಡ ಕಾರಣಗಳಿಂದ ಸದರಿ ಇಂದಿರಮ್ಮ ಮತ್ತು ಸಿ.ಇ. ವಸಂತಕುಮಾರಿ ಇವರುಗಳ ಬದಲಿಗೆ ಪರಿಶಿಷ್ಟ ಪಂಗಡದ ಬೆರಳಚ್ಚುಗಾರರ Merit list ನಿಂದ Merit ಆಧಾರದ ಮೇಲೆ ಮೇಲ್ಕಂಡಂತೆ ಬೆಂಗಳೂರು ಜಿಲ್ಲಾ ನೇಮಕಾತಿ ಘಟಕದಲ್ಲಿ ಗುರ್ತಿಸಲ್ಪಟ್ಟ ಪರಿಶಿಷ್ಟ ಪಂಗಡದ ಸಾಮಾನ್ಯ ಅರ್ಹತಾ ಅಭ್ಯರ್ಥಿಗಳಿಗೆ ಮೀಸಲಿಟ್ಟ ಬೆರಳಚ್ಚುಗಾರರ ಬ್ಯಾಕ್‌ಲಾಗ್ ಹುದ್ದೆಗೆ ಅನುಗುಣವಾಗಿ ಕೆಳಕಂಡ ಇಬ್ಬರು ಪರಿಶಿಷ್ಟ ಪಂಗಡದ ಬ್ಯಾಕ್‌ಲಾಗ್ ಅಭ್ಯರ್ಥಿಗಳ ಪೈಕಿ ಒಬ್ಬರನ್ನು ಮುಖ್ಯಪಟ್ಟಿಗೂ ಮತ್ತು ಇನ್ನೊಬ್ಬರನ್ನು ಹೆಚ್ಚುವರಿ ಪಟ್ಟಿಗೂ ನಿಯಮಾನುಸಾರ Merit ಆಧಾರದ ಮೇಲೆ ಬೆರಳಚ್ಚುಗಾರರೆಂದು ಅಂತಿಮವಾಗಿ ಆಯ್ಕೆ ಮಾಡಿ ಉಲ್ಲೇಖ (5) ರ ಸರ್ಕಾರದ ಅಧಿಸೂಚನೆ ಅನ್ವಯ 1:1 ರ ಪ್ರಮಾಣದಲ್ಲಿ ಬೆಂಗಳೂರು ಜಿಲ್ಲಾ ನೇಮಕಾತಿ ಘಟಕದ ಪರಿಶಿಷ್ಟ ಪಂಗಡದ ಸಾಮಾನ್ಯ ಅರ್ಹತಾ ಅಭ್ಯರ್ಥಿಗಳಿಗೆ ಮೀಸಲಿಟ್ಟ ಬೆರಳಚ್ಚುಗಾರರ ಬ್ಯಾಕ್‌ಲಾಗ್ ಅಂತಿಮ ಆಯ್ಕೆಪಟ್ಟಿಯ ಮುಖ್ಯಪಟ್ಟಿಯನ್ನು ಮತ್ತು ಹೆಚ್ಚುವರಿ ಪಟ್ಟಿಯನ್ನು ಪ್ರಕಟಿಸುವುದು ಸೂಕ್ತವೆಂದು ಮನಗಂಡು ಅದರನ್ವಯ ಕೆಳಕಂಡಂತೆ ಅಂತಿಮ ಆಯ್ಕೆಪಟ್ಟಿಯನ್ನು ಪ್ರಕಟಿಸಲಾಗಿದೆ.

ಪರಿಶಿಷ್ಟ ಪಂಗಡದ ಬೆಂಗಳೂರು ಜಿಲ್ಲಾ ನೇಮಕಾತಿ ಘಟಕದ ಬೆರಳಚ್ಚುಗಾರರ ಬ್ಯಾಕ್‌ಲಾಗ್ ಅಂತಿಮ ಆಯ್ಕೆಪಟ್ಟಿ

ಸಂಖ್ಯೆ: EST–1–274/2001–02, ದಿನಾಂಕ: 13–10–2011

ಆದ್ದರಿಂದ ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಉಲ್ಲೇಖ (1) ರ ನಿಯಮಗಳನ್ವಯ ಪ್ರದತ್ತವಾದ ಅಧಿಕಾರದ ಮೇರೆಗೆ ಕೆಳಕಂಡ ಆಯ್ಕೆ ಪ್ರಾಧಿಕಾರಿಯಾದ ನಾನು ಈ ಇಲಾಖೆಯಲ್ಲಿ ಮೇಲ್ಕಂಡಂತೆ ಬೆಂಗಳೂರು ಜಿಲ್ಲಾ ನೇಮಕಾತಿ ಘಟಕದಲ್ಲಿ ಗುರ್ತಿಸಲ್ಪಟ್ಟ ಪರಿಶಿಷ್ಟ ಪಂಗಡದ ಒಂದು ಸಾಮಾನ್ಯ ಅರ್ಹತಾ ಅಭ್ಯರ್ಥಿ ಬೆರಳಚ್ಚುಗಾರರ ಬ್ಯಾಕ್‌ಲಾಗ್ ಹುದ್ದೆಯ ನೇರ ನೇಮಕಾತಿಗಾಗಿ ಸದರಿ ಇಂದಿರಮ್ಮ ಮತ್ತು ಸಿ.ಇ. ವಸಂತಕುಮಾರಿ ಇವರ ಬದಲಿಗೆ ಉಲ್ಲೇಖ (1) ರಲ್ಲಿನ ನಿಯಮಗಳ ಪ್ರಕಾರ 29 ರಿಂದ 40 ವರ್ಷ ವಯೋಮಿತಿಯಲ್ಲಿರುವ ಹಾಗೂ ಉಲ್ಲೇಖ (5) ರನ್ವಯ 1:1 ರ ಪ್ರಮಾಣದಲ್ಲಿ Merit ಆಧಾರದ ಮೇಲೆ ಕೆಳಕಂಡ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿರುವ ಬೆಂಗಳೂರು ಜಿಲ್ಲಾ ನೇಮಕಾತಿ ಘಟಕಕ್ಕೆ ಸೇರಿದ ಸಾಮಾನ್ಯ ಅರ್ಹತಾ ಅಭ್ಯರ್ಥಿ ಬೆರಳಚ್ಚುಗಾರರ ಬ್ಯಾಕ್‌ಲಾಗ್ ಅಂತಿಮ ಆಯ್ಕೆಯ ಮುಖ್ಯಪಟ್ಟಿಯನ್ನು ಮತ್ತು ಹೆಚ್ಚುವರಿ ಪಟ್ಟಿಯನ್ನು ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ಅಭ್ಯರ್ಥಿಗಳ ಮಾಹಿತಿಗಾಗಿ ಈ ಮೂಲಕ ಪ್ರಕಟಿಸಲಾಗಿದೆ. ಈ ಅಭ್ಯರ್ಥಿಗಳ ಈ ಅಂತಿಮ ಬ್ಯಾಕ್‌ಲಾಗ್ ಆಯ್ಕೆಯು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟಿರುತ್ತದೆಂದು ಈ ಮೂಲಕ ಆದೇಶಿಸಿದೆ.

ಬೆಂಗಳೂರು ಜಿಲ್ಲಾ ನೇಮಕಾತಿ ಘಟಕಕ್ಕೆ ಸೇರಿದ ಪರಿಶಿಷ್ಟ ಪಂಗಡದ ಬ್ಯಾಕ್‌ಲಾಗ್

ಬೆರಳಚ್ಚುಗಾರರ ಅಂತಿಮ ಆಯ್ಕೆಯ ಮುಖ್ಯಪಟ್ಟಿ

Typist Backlog Final Selection list (ST) (Main list) relating to Bangalore District appointment unit

ಕ್ರ ಸಂ	ಅಭ್ಯರ್ಥಿಯ ಹೆಸರು ಮತ್ತು ವಿಳಾಸ	ಜನ್ಮ ದಿನಾಂಕ	16–03–2002 ರ ದಿನಾಂಕಕ್ಕೆ ಅಭ್ಯರ್ಥಿಯ ವಯಸ್ಸು ವ–ತಿಂ–ದಿ	ವಿದ್ಯಾರ್ಹತೆ ಮತ್ತು ಶೇಕಡಾವಾರು ಅಂಕಗಳು ಮತ್ತು ಸರಾಸರಿ ಅಂಕಗಳು	ಯಾವ ಮೀಸಲಾತಿಯಲ್ಲಿ ಮತ್ತು ಯಾವ ವರ್ಗೀಕರಣದ ಅಡಿಯಲ್ಲಿ ಆಯ್ಕೆ ಮಾಡಲಾಗಿದೆಯೋ ಅದರ ವಿವರ
1	ಹನುಮಂತರಾಯ ವೆಂಕಪ್ಪ ಗುಳೇದ, (ST) ಸಂಗಮೇಶ್ವರ ಓಣಿ, ಮುಕ್ಕಾಂ:ಪೋಸ್ಟ್ : ಹುನಗುಂದ, ತಾಲ್ಲೂಕ: ಹುನಗುಂದ, ಜಿಲ್ಲೆ: ಬಾಗಲಕೋಟೆ.	01–06–1962	39–09–15	i) SSLC: 40.166 ii) ಕನ್ನಡ ಬೆರಳಚ್ಚು ಸೀನಿಯರ್ 79.500 ಒಟ್ಟು 119.666 ಸರಾಸರಿ ಅಂಕಗಳು 59.833	ಪರಿಶಿಷ್ಟ ಪಂಗಡ ಸಾಮಾನ್ಯ ಅರ್ಹತಾ ಅಭ್ಯರ್ಥಿ–1 ಮುಖ್ಯಪಟ್ಟಿ

ಬೆಂಗಳೂರು ಜಿಲ್ಲಾ ನೇಮಕಾತಿ ಘಟಕಕ್ಕೆ ಸೇರಿದ ಪರಿಶಿಷ್ಟ ಪಂಗಡದ ಬ್ಯಾಕ್‌ಲಾಗ್ ಬೆರಳಚ್ಚುಗಾರರ ಅಂತಿಮ ಆಯ್ಕೆಯ ಹೆಚ್ಚುವರಿಪಟ್ಟಿ Typist Backlog Final Selection list (ST) (Additional list) relating to Bangalore District appointment unit					
1	ರಾಮಣ್ಣ S/O ಕಾಮಣ್ಣ (ST) ಅಲ್ಪಿ ಮೇವಾಗಲ್ಲಿ, [illegible] [illegible]	01–06–1968	33–09–15	i) SSLC:35.666 ii) ಕನ್ನಡ ಬೆರಳಚ್ಚು ಸೀನಿಯರ್83.500 ಒಟ್ಟು 119.166 ಸರಾಸರಿ ಅಂಕಗಳು 59.583	ಪರಿಶಿಷ್ಟ ಪಂಗಡ ಸಾಮಾನ್ಯ ಅರ್ಹತಾ ಅಭ್ಯರ್ಥಿ–1 ಹೆಚ್ಚುವರಿಪಟ್ಟಿ

ಈ ಅಂತಿಮ ಆಯ್ಕೆ ಪಟ್ಟಿಯಲ್ಲಿರುವ ಅಭ್ಯರ್ಥಿಗಳ ಆಯ್ಕೆಯು ಕೆಳಕಂಡ ಷರತ್ತುಗಳಿಗೆ ಒಳಪಟ್ಟಿರುತ್ತದೆ ಹಾಗೂ ಈ ಆಯ್ಕೆಪಟ್ಟಿಯಲ್ಲಿರುವ ಎಲ್ಲಾ ಅಭ್ಯರ್ಥಿಗಳು ಈ ಕೆಳಕಂಡ ಷರತ್ತುಗಳಿಗೆ ಬದ್ಧರಾಗಿರತಕ್ಕದ್ದು.

ಷರತುಗಳು:–

1. ಈ ಆಯ್ಕೆಪಟ್ಟಿಯು ಆಗಿಂದ್ದಾಗ್ಗೆ ಜಾರಿಯಲ್ಲಿರುವ ಸೇವಾ ಷರತ್ತುಗಳಿಗೆ ಮತ್ತು ಸೇವಾ ನಿಯಮಗಳಿಗೆ ಒಳಪಟ್ಟಿರುತ್ತದೆ.
2. ಈ ಆಯ್ಕೆ ಪಟ್ಟಿಯು ಯಾವುದೇ ಸಂದರ್ಭದಲ್ಲಾದರೂ ತಿದ್ದೋಲೆ ಮತ್ತು ಮಾರ್ಪಾಡಿಗೆ ಒಳಪಟ್ಟಿರುತ್ತದೆ.
3. ಯಾವುದೇ ಕಾರಣಕ್ಕಾಗಿ ಈ ಆಯ್ಕೆ ಪಟ್ಟಿಯು ಇನ್ನೊಮ್ಮೆ ಪರಿಷ್ಕರಿಸಲ್ಪಟ್ಟಲ್ಲಿ ಅಥವಾ ಬದಲಾವಣೆಯಾದಲ್ಲಿ ಸದರಿ ಪರಿಷ್ಕರಣೆಗೆ ಅನುಗುಣವಾಗಿ ಅಥವಾ ಬದಲಾವಣೆಗೆ ಅನುಗುಣವಾಗಿ ಯಾವುದೇ ಕಾರಣ ನೀಡದೇ ಈ ಆಯ್ಕೆ ಪಟ್ಟಿಯಲ್ಲಿರುವ ಅಭ್ಯರ್ಥಿಗಳ ಆಯ್ಕೆಯನ್ನು ರದ್ದುಪಡಿಸಿ ಮುಕ್ತಾಯಗೊಳಿಸಲಾಗುವುದು ಅಥವಾ ಪರಿಷ್ಕರಿಸಲಾಗುವುದು.
4. ಬೆಂಗಳೂರು ಜಿಲ್ಲಾ ನೇಮಕಾತಿ ಘಟಕದಲ್ಲಿ ಮಾತ್ರ ಈ ಬ್ಯಾಕ್‌ಲಾಗ್ ಹುದ್ದೆಯನ್ನು ಗುರ್ತಿಸಿರುವುದರಿಂದ ಈ ಆಯ್ಕೆ ಪಟ್ಟಿಯಲ್ಲಿ ಆಯ್ಕೆಯಾಗಿರುವ ಅಭ್ಯರ್ಥಿಗಳು ಬೆಂಗಳೂರು ಜಿಲ್ಲಾ ನೇಮಕಾತಿ ಘಟಕದಲ್ಲಿ ಮಾತ್ರ ಕೆಲಸ ಮಾಡಲು ಸಿದ್ಧರಾಗಿರಬೇಕು. ಬೇರೆ ಇನ್ಯಾವುದೇ ಜಿಲ್ಲೆಯಲ್ಲೂ ಈ ಆಯ್ಕೆಪಟ್ಟಿಯಲ್ಲಿರುವ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಲಾಗುವುದಿಲ್ಲ. ಇದಕ್ಕೆ ಈ ಅಭ್ಯರ್ಥಿಗಳು ಬದ್ಧರಾಗಿರತಕ್ಕದ್ದು.
5. ಮೂಲ ಅಂಕಪಟ್ಟಿಯನ್ನು ಮತ್ತು ಮೂಲ ಮೀಸಲಾತಿ ಪ್ರಮಾಣ ಪತ್ರಗಳನ್ನು ಹಾಗೂ ಮೂಲ ಜಾತಿ ಪ್ರಮಾಣ ಪತ್ರವನ್ನು ಈ ಕಛೇರಿಗೆ ಹಾಜರುಪಡಿಸದೇ ಇರುವ ಅಭ್ಯರ್ಥಿಗಳು ಅವುಗಳನ್ನು ಕೆಲಸಕ್ಕೆ ಹಾಜರಾಗುವ ಸಮಯದಲ್ಲಿ ತಪ್ಪದೇ ಹಾಜರ್‌ಪಡಿಸತಕ್ಕದ್ದು.
6. ಈ ಆಯ್ಕೆಯ ಮುಖ್ಯ ಪಟ್ಟಿಯಲ್ಲಿರುವ ಅಭ್ಯರ್ಥಿಗಳಿಗೆ ಮಾತ್ರ, ಅನುಕ್ರಮವಾಗಿ ಖಾಲಿ ಇರುವ ಹುದ್ದೆಗಳ ಸಂಖ್ಯೆಗೆ ಅನುಗುಣವಾಗಿ ಅಂದರೆ ಖಾಲಿ ಹುದ್ದೆಗಳ ಲಭ್ಯತೆಗೆ ಅನುಗುಣವಾಗಿ ನೇಮಕಾತಿ ಆದೇಶ ನೀಡುವ ಬಗ್ಗೆ ಕಾನೂನು ರೀತ್ಯಾ ಪರಿಶೀಲಿಸಲಾಗುವುದು.
